ಕುಡುಬಿಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

(ಸಾಗರ ತಾಲೂಕನ್ನು ಅನುಲಕ್ಷಿಸಿ)

ಸಮಾಜಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರು ಪ್ರಬಂಧ

ಸಂಶೋಧಕ

ಬಸವರಾಜ [illegible].ಡಿ.

ಮಾರ್ಗದರ್ಶಕರು

ಚಲುವರಾಜು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೩-೦೪

11

11

ಕುಡುಬಿಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

(ಸಾಗರ ತಾಲೂಕನ್ನು ಅನುಲಕ್ಷಿಸಿ)

ಸಮಾಜಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರು ಪ್ರಬಂಧ

ಸಂಶೋಧಕ

ಬಸವರಾಜ ಎ.ಡಿ.

ಮಾರ್ಗದರ್ಶಕರು

ಚಲುವರಾಜು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೨-೦೩

ದೃಢೀಕರಣ ಪತ್ರ

"ಕುಡುಬಿಯರ ಸಾಮಾಜಿಕ ಮತ್ತು ಸಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಕಿರು ಪ್ರಬಂಧವನ್ನು ಶ್ರೀ ಬಸವರಾಜ ಎ.ಡಿ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಕಿರುಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೬.೪.೨೦೦೩
ಸ್ಥಳ : ವಿದ್ಯಾರಣ್ಯ

(ಚಲುವರಾಜು)
ಮುಖ್ಯಸ್ಥರು ಮತ್ತು ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

"ಕುಡುಬಿಯರ ಸಾಮಾಜಿಕ ಮತ್ತು ಸಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಕಿರು ಪ್ರಬಂಧವನ್ನು ಸಮಾಜಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೨-೦೩ನೇ ಶೈಕ್ಷಣಿಕ ಸಾಲಿನಲ್ಲಿ ಚಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಬಸವರಾಜ ಎ.ಡಿ.

ದಿನಾಂಕ : ೨೯-8-೨೦೦೨
ಸ್ಥಳ : ವಿದ್ಯಾರಣ್ಯ

(ಬಸವರಾಜ ಎ.ಡಿ.)
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ

ಪ್ರಸ್ತಾವನೆ

ಭಾರತವು ವಿವಿಧ ರೀತಿಯ ಸಂಸ್ಕೃತಿಯನ್ನು ಹೊಂದಿರುವ ಜನಸಮುದಾಯಗಳು ವಾಸಿಸುವ ದೇಶ ಇಲ್ಲಿ ಹಲವಾರು ಸಮುದಾಯಗಳು ತಮ್ಮದೇ ಆದ ರೂಢಿ ಸಂಪ್ರದಾಯ, ಭಾಷೆ, ಧರ್ಮ, ವೃತ್ತಿ ಇಟ್ಟುಕೊಂಡು ಬಹುಮುಖಿ ಸಂಸ್ಕೃತಿಯನ್ನು ಹೊಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅವರದೇ ಆದ ಪ್ರದೇಶಕ್ಕೆ ಅನುಗುಣವಾಗಿ ಪ್ರತಿಯೊಂದು ಬುಡಕಟ್ಟುಗಳು ಪರಸ್ಪರ ಸಾಂಸ್ಕೃತಿಕ ಆಚರಣೆಗಳಲ್ಲಿ ಒಂದು ಮತ್ತೊಂದು ಬುಡಕಟ್ಟಿಗೆ ಸಾಮ್ಯವಿರುವಂತೆ ಕಂಡುಬಂದರು ಸಹ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಭಾರತದಲ್ಲಿ ವರ್ಣವ್ಯವಸ್ಥೆಯ ಕಾಲದಿಂದ ಆಧುನಿಕ ಕಾಲದವರೆಗೂ ಸಾಮಾಜಿಕ ವ್ಯವಸ್ಥೆಯು ಏಣಿಶ್ರೇಣಿಯಿಂದ ಕೂಡಿದ್ದು. ಇಂತಹ ಸಾಮಾಜಿಕ ಸ್ತರವಿನ್ಯಾಸದಿಂದ ದೂರವಿರುವ ಹಾಗೂ ಕಾಡನ್ನೇ ತಮ್ಮ ದೇವರು ಎಂದು ಪೂಜಿಸುವ, ಮುಗ್ಧ ಸಮುದಾಯಗಳೆಂದು ಗುರುತಿಸುವ ಬದುಕಿನ ಸ್ಥೂಲವಾದ ವಿಮರ್ಶೆಯನ್ನು ಈ ಅಧ್ಯಾಯನದಲ್ಲಿ ನೀಡಲಾಗಿದೆ.

ಕರ್ನಾಟಕದಲ್ಲಿ ಒಟ್ಟು ನಲವತ್ತೊಂಬತ್ತು ಪರಿಶಿಷ್ಟ ಬುಡಕಟ್ಟುಗಳಿವೆ. ಸಂವಿಧಾನ ಬದ್ಧವಾಗಿ ಉಳಿದ ಕೆಲವು ಬುಡಕಟ್ಟುಗಳನ್ನು ಅಲೆಮಾರಿ ಬುಡಕಟ್ಟುಗಳೆಂದು (Nomadic Tribes) ಇನ್ನೂ ಕೆಲವು ಬುಡಕಟ್ಟುಗಳನ್ನು ಅರೆ ಅಲೆಮಾರಿ ಬುಡಕಟ್ಟುಗಳು (Semi Nomadic Tribes) ಎಂದು ಪರಿಗಣಿಸಿ, ಮೀಸಲಾತಿಯ ಹಿಂದುಳಿದ ವರ್ಗಗಳ (Backword class) ಪಟ್ಟಿಗೆ ಸೇರಿಸಲಾಗಿದೆ.

ಇತ್ತೀಚಿಗೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಸಮುದಾಯ ಹಾಗೂ ಸಂಸ್ಕೃತಿಯ ಅಧ್ಯಯನಗಳು ನಡೆದಿವೆ. ಅಲ್ಲದೆ ಅನೇಕ ಚಿಂತನೆಗಳು ಸಹ ನಡೆಯುತ್ತಿವೆ. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಇದೊಂದು ಆಗಲೇಬೇಕಾದ ಕೆಲಸ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಂದು ನಾವು ಶಿಷ್ಟ ಸಂಸ್ಕೃತಿಯೆಂದು ಹೇಳುವ ಸಮುದಾಯಗಳಿಂದ ದೂರವಿರುವ ಹಾಗೂ ಅಲಕ್ಷ್ಯಕ್ಕೆ ಒಳಗಾಗಿರುವ ಸಮುದಾಯಗಳ ಅಧ್ಯಾಯನ ಅಗತ್ಯವಾಗಿ ನಡೆಯಲೇಬೇಕಾಗಿದೆ. ಈ ಹಿನ್ನಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಮೇಘಾನೆ ಮತ್ತು ಬಚ್ಚೋಟಿ ಕುಡುಬಿಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಶಿವಮೊಗ್ಗ ಜಿಲ್ಲೆಯ ಭೌಗೋಳಿಕ ಪರಿಸರ

ಕುಡುಬಿ ಬುಡಕಟ್ಟಿನ ಅಧ್ಯಯನಕ್ಕೆ ಶಿವಮೊಗ್ಗ ಜಿಲ್ಲೆಯ ಮಲೆನಾಡನ್ನು ಆರಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಅದಕ್ಕಾಗಿ ಶಿವಮೊಗ್ಗ ಜಿಲ್ಲೆಯ ಪರಿಚಯ ಕೊಡುವುದು ಸೂಕ್ತವೆನಿಸುತ್ತದೆ. ವರ್ಷದಲ್ಲಿ ಮಳೆ ಕಡಿಮೆಯಾದರು ಜೀವನವನ್ನು ನಡೆಸಲಿಕ್ಕೆ ಯಾವುದೇ ತೊಂದರೆಯಿಲ್ಲ ಈ ಜಿಲ್ಲೆ ಹೆಸರಿಗೆ ತಕ್ಕಂತೆ ಪಶ್ಚಿಮ ಘಟ್ಟಗಳಿಂದ ಆವೃತವಾಗಿದೆ. ಅಲ್ಲದೆ ಇಡೀ ದೇಶದಲ್ಲಿಯೇ ದೊಡ್ಡದೆನಿಸಿಕೊಂಡ ಜಲಪಾತವನ್ನು ತನ್ನ ಒಡಲಿನಲ್ಲಿಟ್ಟುಕೊಂಡಿದೆ. ಅದೇ ವಿಶ್ವವಿಖ್ಯಾತಿಯನ್ನು ಪಡೆದ ಜೋಗ ಜಲಪಾತ ಇದಲ್ಲದೆ ಅನೇಕ ನದಿಗಳ ಉಗಮದ ಸ್ಥಳವು ಹೌದು. ತುಂಗನದಿ, ಭದ್ರನದಿಗಳಿಗೆ ಜೀವವನ್ನು ಸಹ ಈ ಜಿಲ್ಲೆ ಕೊಟ್ಟಿದೆ. ಈ ನದಿಗಳಿಂದ ಸಾವಿರಗಟ್ಟಲೇ ಜನಸಮುದಾಯ ತಮ್ಮ ಜೀವನವನ್ನು ನಡೆಸುತ್ತಿವೆ. ಶಿವಮೊಗ್ಗ ಜಿಲ್ಲೆ ನದಿಗಳಿಗೆ ಜೀವವನ್ನು ಕೊಟ್ಟಿರುವುದಲ್ಲದೆ ಅನೇಕ ಪ್ರಾಣಿಸಂಕುಲಗಳಿಗೂ ಆಶ್ರಯತಾಣವಾಗಿದೆ. ಇದಕ್ಕೆ ಸಾಕ್ಷಿಯಾಗಿ ಶಿವಮೊಗ್ಗದಿಂದ ಸಾಗರಕ್ಕೆ ಹೋಗುವ ಮಧ್ಯೆದಲ್ಲಿ ಕಾರ್ಗಲ್‌ನಿಂದ ಭಟ್ಕಳಕ್ಕೆ ಹೋಗುವ ಮಾರ್ಗದಲ್ಲಿ ಒಂದು ಸಿಂಹಧಾಮ ನೋಡಬಹುದಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಣಿ, ಪಕ್ಷಿಗಳು ಹಾಗೂ ನದಿಗಳಿವೆ ಮತ್ತು ಸಣ್ಣ ಸಣ್ಣ ಜೀವಿಗಳು ಯಾವುದೇ ರೀತಿಯ ತೊಂದರೆಯಿರದೆ ಸ್ವಾತಂತ್ರವಾಗಿ ಜೀವಿಸಿವೆ. ಸದಾ ಹಸಿರಿನಿಂದ ದಟ್ಟ ವೃಕ್ಷಗಳಿಂದ ಕೂಡಿದೆ. ಈ ಜಿಲ್ಲೆ ಅನೇಕ ಸಾಂಬಾರ ಪದಾರ್ಥಕ್ಕೆ ಬೇಕಾಗಿರುವ ಹಾಗೂ ಗಿಡಮೂಲಿಕೆಗೆ ಬೇಕಾಗಿರುವ ಸಸ್ಯರಾಶಿಯನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಈ ಜಿಲ್ಲೆಯ ಒಟ್ಟು ೮ ತಾಲೂಕುಗಳಿದ್ದು ಒಂದೊಂದು ತಾಲೂಕು ಒಂದೊಂದು ರೀತಿಯ ವೈಶಿಷ್ಟ್ಯತೆಯಿಂದ ಮೆರೆದಿದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆಯಲ್ಲಿಯೇ ಭಿನ್ನವಾಗಿದೆ. ವಿಶಿಷ್ಟ್ಯತೆಯಿಂದ ಕೂಡಿದೆ ಏಕೆಂದರೆ, ಸಾಗರವು ಒಂದು ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಇಕ್ಕೇರಿ ಮತ್ತು ಕೆಳದಿಗಳೆರಡು ಸಹ ಪುರಾತನ ಕಾಲದಿಂದ ರಾಜ್ಯಭಾರ ಮಾಡಿದ ಸ್ಥಳಗಳಾಗಿವೆ. ಸಾಗರದಲ್ಲಿ ರಾಜ್ಯಭಾರ ಮಾಡಿದ ರಾಜರುಗಳಲ್ಲಿ ಶಿವಪ್ಪನಾಯಕ ಮತ್ತು ಕೆಳದಿಯ ಚನ್ನಮ್ಮರು ನಮಗೆ ನೆನಪಿಗೆ ಬರುತ್ತಾರೆ. ಸಾಗರ ತಾಲೂಕು ಹಾಗೂ ಶಿವಮೊಗ್ಗ ಜಿಲ್ಲೆ ರಾಜ್ಯಭಾರಷ್ಟೇ ಸಿಮಿತವಾಗಿರದೇ, ಅನೇಕ ರೀತಿಯ ಬುಡಕಟ್ಟುಗಳಿಗೂ ಆಶ್ರಯವನ್ನು ನೀಡಿರುವುದನ್ನು ನೋಡಬಹುದು. ಆದುದರಿಂದಲೇ ಬುಡಕಟ್ಟುಗಳು ಹೆಚ್ಚಾಗಿರುವುದನ್ನು ನಾವು ಕಾಣಬಹುದು. ಈ ಜಿಲ್ಲೆಗೆ ಸೇರಿದ ಮೇಘಾನೆ ನಿಜಕ್ಕೂ ಮೇಘಗಳ ಮಧ್ಯೆ ಮನೆ ಮಾಡಿದಂತೆ ಕಾಣಿಸುತ್ತದೆ. ಇದು ಒಂದು ಬೃಹತ್ ಅಭಯಾರಣ್ಯ. ಬೆಟ್ಟದ ಒಡಲಲ್ಲಿ ಕಂಡದ್ದು ಈ ಮೇಘಾನೆ, ಗರಿಕೆಹುಲ್ಲು ಹಾಸಿನ ಕೊನೆಯಲ್ಲಿ ಒಂದಿಷ್ಟು ಮನೆಗಳ ಸಾಲು. ಸುತ್ತ ಹಸಿರು ಗದ್ದೆಗಳು. ಗೆರೆಯಂತಹ ದಂಡೆ. ಜುಳು ಜುಳು ಹರಿಯುವ ತೂರೆ. ಬೆಟ್ಟದ ಮೇಲೆ ನಿಂತು ಮೇಘಾನೆಯ ಜಾತಕ ಬಿಡಿಸುವವರಿಗೆ 'ಓ ಹೋಯ್... ಓ ಹೋಯ್' ಎಂಬ ಕೂಗು ಎಚ್ಚರಿಸಿತು. ಬೆಟ್ಟದ ತುದಿಯಿಂದ

ಗುಜು ಗುಜು ಶಬ್ದ ಮಾಡುತ್ತಾ, ಹಳ್ಳಿ ಕಂಡ ಸಂತಸಕ್ಕೆ ಕೇಕೆ ಹಾಕುತ್ತ ಇಳಿಯುತ್ತಿದ್ದವನಿಗೆ ಸ್ವಾಗತ ದೊರೆಯಿತು.

ಮೇಘಾನೆಯ ಕುಡುಬಿಯರದು ಅತ್ಯಂತ ಅಚ್ಚುಕಟ್ಟಾದ ನೆಮ್ಮದಿಯ ಬದುಕು. ಪಳಪಳ ಕನ್ನಡಿಯಂತೆ ಹೊಳೆಯುವ ಅಂಗಳ ಸದಾ ಸಗಣಿಯಿಂದ ಸಾರಿಸಿದ ಹಸಿರು ಗೋಡೆಗಳು. ಅಂಗಳದ ಮಧ್ಯೆ ತುಳಸಿ ಗಿಡ. ದೈನಂದಿನ ಅವರ ಚಟುವಟಿಕೆಗಳು ಆರಂಭವಾಗುವುದೇ ತುಳಸಿಗೆ ನೀರೆರೆಯುವುದರಿಂದ. ತುಳಸಿ ಪೂಜೆ ಪ್ರತಿ ಕೆಲಸದ ಪ್ರಮುಖ ಭಾಗ ಎಂದು ಕೊಂಡಿರುವ ಕುಡುಬಿ ಹೆಂಗಸರು ಪ್ರತಿ ಗಂಟೆಗೊಮ್ಮೆ ಅದಕ್ಕೆ ನೀರೆರೆಯುತ್ತಲೇ ಇರುತ್ತಾರೆ.

ಈ ರೀತಿಯಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಮೇಘಾನೆಯ ಭೌಗೋಳಿಕ ಪರಿಸರವನ್ನು ವೀಕ್ಷಿಸಬಹುದು.

ಶಿವಮೊಗ್ಗ ಜಿಲ್ಲೆಯ ಬುಡಕಟ್ಟುಗಳು

ಮಲೆನಾಡು ಪ್ರದೇಶವಾದ ಶಿವಮೊಗ್ಗ ಜಿಲ್ಲೆಯ ಬಹುತೇಕ ಪಶ್ಚಿಮ ಘಟ್ಟಗಳಿಂದ ಕೂಡಿದ್ದೂ ಅನೇಕ ಬುಡಕಟ್ಟುಗಳನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡು ಆಶ್ರಯ ನೀಡಿದೆ. ಇಲ್ಲಿ ಪಶ್ಚಿಮ ಘಟ್ಟಗಳಲ್ಲಿ ಆದಿವಾಸಿ ಬುಡಕಟ್ಟುಗಳಿದ್ದಾರೆ. ಬಯಲು ದೇಶಗಳಲ್ಲಿ ಅಲೆಮಾರಿ ಬುಡಕಟ್ಟುಗಳಿರುವುದನ್ನು ನೋಡಬಹುದು. ಇದಕ್ಕೆ ಉದಾಹರಣೆಯಾಗಿ ಈ ಜಿಲ್ಲೆಯಲ್ಲಿ ಕುಡುಬಿಯರು, ಹಸಲರು, ಗೊಂಡರು, ದೀವರು, ಸಿದ್ದಿಗಳು, ಹಾಲಕ್ಕಿ ಒಕ್ಕಲಿಗರು, ಹಕ್ಕಿಪಿಕ್ಕಿಯರು, ದೊಂಬರು, ಸುಡುಗಾಡು ಸಿದ್ಧರು ಹಾಗೂ ಲಂಬಾಣಿ ಮುಂತಾದ ಬುಡಕಟ್ಟುಗಳು ನೆಲೆಯೂರಿವೆ.

ಪಶ್ಚಿಮ ಘಟ್ಟಗಳಲ್ಲಿ ಮರಾಠಿ ಕುಡುಬಿಯರು, ಹಸಲರು, ಗೊಂಡರು, ಸಿದ್ದಿಗಳು, ಹಾಲಕ್ಕಿ ಒಕ್ಕಲಿಗರು ಹೆಚ್ಚಾಗಿ ಕಂಡು ಬರುತ್ತಾರೆ. ಉಳಿದ ಬಯಲು ಪ್ರದೇಶಗಳಲ್ಲಿ ಸುಡುಗಾಡು ಸಿದ್ದರು, ದೊಂಬರು, ದೀವರು, ಹಕ್ಕಿಪಿಕ್ಕಿಯವರು ಹಾಗೂ ಲಂಬಾಣಿಗಳು ಕಂಡುಬರುವುದನ್ನ ನೋಡಬಹುದಾಗಿದೆ.

ಈ ಜಿಲ್ಲೆಯ ಕುಡುಬಿ ಸಮುದಾಯ ಒಂದು ವಿಶಿಷ್ಟ ಬುಡಕಟ್ಟಾಗಿದೆ. ಈ ಸಮುದಾಯ ಇತರೆ ಯಾವುದೆ ಸಮುದಾಯಕ್ಕೆ ಸಂಬಂಧವನ್ನು ಇಟ್ಟುಕೊಳ್ಳದೆ ಅವರೆದೇ ಆದ ಸಂಪ್ರದಾಯವನ್ನು ರೂಢಿಸಿಕೊಂಡು ಜೀವನವನ್ನು ಸಾಗಿಸುತ್ತಿದೆ. ಆದರೆ ಇತರೆ ಆದಿವಾಸಿಗಳಾದ ಗೊಂಡರು ಸಹ ಒಕ್ಕಲುತನವನ್ನು ಕುಡುಬಿಯರಂತೆ ತಮ್ಮ ಜೀವನದ ಕಸುಬನ್ನಾಗಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಕುಡುಬಿಯರಿಗೂ ಇವರಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಇದಕ್ಕೆ ಉದಾಹರಣೆಗೆ ಬಚ್ಚೋಡಿಯಲ್ಲಿ ಮರಾಠಿ ಕುಡುಬಿಯರ ಮನೆಯ ಪಕ್ಕದಲ್ಲಿ ಗೊಂಡರು ಇದ್ದರೂ, ಅವರ ಜೊತೆ ಅಷ್ಟು ಉತ್ತಮವಾದ ಸಂಬಂಧವಿರಿಸಿಕೊಳ್ಳದಿರುವುದು. ಅದರಂತೆ ಹಸಲರು, ದೀವರು, ಹಾಲಕ್ಕಿ ಒಕ್ಕಲಿಗರು, ಸಿದ್ದಿಗಳು ಮುಂತಾದ ಆದಿವಾಸಗಳೆಲ್ಲರು ಅವರದೇ ಆದ ಸಂಪ್ರದಾಯಗಳ ನೆಲೆಯಲ್ಲಿ ಬದುಕನ್ನು ಕಟ್ಟಿಕೊಂಡಿದ್ದಾರೆ.

೧.೧ ಅಧ್ಯಯನದ ಉದ್ದೇಶ

ಭಾರತವು ಸಾಂಪ್ರದಾಯಿಕ ಹಿನ್ನಲೆಯಲ್ಲಿ ಅನೇಕ ಬುಡಕಟ್ಟು ಸಮುದಾಯಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಬುಡಕಟ್ಟುಗಳ ಅಧ್ಯಯನ ಇಂದು ಕ್ರಮಬದ್ದ ಹಾಗೂ ಮಂದಗತಿಯ ಬೆಳವಣಿಗೆಯಲ್ಲಿ ಸಾಗುತ್ತಿದೆ. ಭಾರತೀಯ ಸಮಾಜವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬುಡಕಟ್ಟು ಸಮುದಾಯಗಳ ಅಧ್ಯಯನ ಅತ್ಯವಶ್ಯಕವಾಗಿ ಆಗಬೇಕಾಗಿದೆ. ಒಂದು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನವೆಂದರೆ ಆ ಸಮುದಾಯದ ಜೀವನ ವಿಧಾನದ ಒಟ್ಟು ತಿಳುವಳಿಕೆ ಎಂದು ತಿಳಿಯಬೇಕು. ಇದರಿಂದಾಗಿ ಬುಡಕಟ್ಟುಗಳ ಧರ್ಮ, ದೇವರು, ನಂಬಿಕೆ, ಆಚರಣೆ, ವಿಧಿನಿಷೇಧಗಳೆಲ್ಲವು ಮಹತ್ವದ ವಿಷಯಗಳಾಗಿವೆ.

ಯಾಂತ್ರೀಕೃತ ನಾಗರೀಕತೆ ವಸಾಹತುಶಾಹಿ ಕೈಗಾರಿಕೀಕರಣ ಮುಂತಾದ ವೈಜ್ಞಾನಿಕ ಆವಿಷ್ಕಾರಗಳು ಇಡೀ ಮಾನವಕುಲವನ್ನು ಸ್ಪರ್ದೆಗೀಡುಮಾಡಿವೆ. ಈ ಎಲ್ಲ ಅಂಶಗಳಿಂದ ಭಾರತೀಯ ಸಮಾಜದ ಜೀವನಕ್ರಮವು ಹೊಸ ಹೊಸ ಬಗೆಯ ರೂಪಾಂತರಕ್ಕೆ ನಾಂದಿಯಾಯಿತು. ಯಾಂತ್ರೀಕೃತವಾದ ಮೋಹ ಪರಂಪಗತವಾಗಿ ಬಂದ ಜೀವನಕ್ರಮವು ಬುಡಕಟ್ಟು ಸಮುದಾಯದಲ್ಲಿ ಹೊಸ ಹೆಜ್ಜೆಗಳನ್ನ ಮೂಡಿಸಿವೆ. ಮಾನವ ಜನಾಂಗದ ಬದುಕನ್ನು ಆರ್ಥಿಕತೆ ನಿಯಂತ್ರಿಸುತ್ತಿದೆ.

ಗೋವಾ ಮೂಲದವರೆಂದು ಹೇಳಲಾಗುವ ಕುಡುಬಿ ಸಮುದಾಯ ಜೀವನದ ಹುಡುಕಾಟದಿಂದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಒಂದು ಕಡೆ ನೆಲೆನಿಂತ ತಮ್ಮ ಜೀವನವನ್ನು ಆಧುನಿಕತೆಗೆ ತೆರೆದುಕೊಳ್ಳದೆ ಕಟ್ಟಾ ಸಂಪ್ರದಾಯ ನಿಷ್ಠರಾಗಿ ಬದುಕನ್ನು ಸಾಗಿಸುತ್ತಿದ್ದಾರೆ. ಈ ಸಮುದಾಯ ತಮ್ಮ ಮೂಲ ವೃತ್ತಿಯಿಂದ ಕುಮ್ರಿ ಬೇಸಾಯ ಪದ್ಧತಿಯನ್ನು ಅವಲಂಬಿಸಿದ್ದಾರೆ. ಕುಡುಬಿಯರಲ್ಲಿ ಹಲವು ಒಳಪಂಗಡಗಳು ಕಂಡುಬರುತ್ತವೆ. ಈ ಹಿನ್ನಲೆಯಲ್ಲಿ ನೋಡಬಹುದಾದರೆ ಗೋವಾಕುಡುಬಿ, ಕುಡಿಯಾಲಕುಡುಬಿ, ಅರೆಕುಡುಬಿ, ಜೋಗಿಕುಡುಬಿ, ನಾಡಕುಡುಬಿ, ಕಾಡುಕುಡುಬಿ, ಕುಮ್ರಿಕುಡುಬಿಗಳಾಗಿವೆ. ಈ ರೀತಿಯಾಗಿರುವ ಒಂದೊಂದು ಒಳಪಂಗಡದ ಕುಡುಬಿಯರು ಹೆಸರಿಗೆ ತಕ್ಕಂತೆ ಹಿನ್ನಲೆಯನ್ನು ಹೊಂದಿದವರಾಗಿದ್ದಾರೆ. ಆದರೆ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಕುಡುಬಿಯರು ಮರಾಠಿ ಕುಡುಬಿಯರೆಂದು ಗುರುತಿಸಿಕೊಂಡಿದ್ದಾರೆ. ಮರಾಠಿ ಕುಡುಬಿ ಸಮುದಾಯ ಒಂದು ಆದಿವಾಸಿ ಸಮುದಾಯವಾಗಿದ್ದು. ಗೋವಾದಲ್ಲಿ ಪೋರ್ಚ್‌ಗಿಸರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುವಂತೆ ಬಲತ್ಕರಿಸಿದಾಗ ವಲಸೆ ಬಂದರು. ಎಂಬ ಧಾರ್ಮಿಕ ವದಂತಿಯಿದೆ. ಈ ಹಿನ್ನಲೆಯಲ್ಲಿ ಪಶ್ಚಿಮ ಘಟ್ಟಗಳಲ್ಲಿ ಅಲ್ಲಲ್ಲಿ ಸೇರಿಕೊಂಡಿದ್ದಾರೆ. ಈ ಮರಾಠಿ ಕುಡುಬಿ ಸಮುದಾಯ ಮಂಜುನಾಥ ತುಳಿಸಿಯನ್ನು ಪೂಜಿಸುವುದರ ಜೊತೆಗೆ ತಮ್ಮ ಮನೆಯ ದೇವರು ಹಾಗೂ ಇಡೀ ಸಮುದಾಯದ ದೇವರಾಗಿ ಮಲ್ಲಿಕಾರ್ಜುನ ಮತ್ತು ತುಳಸಿಗೆ ಪೂಜೆಯಲ್ಲಿ ಕೇಂದ್ರಸ್ಥಾನವನ್ನು ಕೊಟ್ಟಿದ್ದಾರೆ. ಇಂದು ಬುಡಕಟ್ಟಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ್ದರು ಸಹ ಇಂದಿನ ಅಧ್ಯಯನಗಳಲ್ಲಿ ಸಾಂಸ್ಕೃತಿಕ ಅಧ್ಯಯನಗಳು

ಬಹಳ ಪ್ರಾಮುಖ್ಯತೆ ಪಡೆದಿದೆ. ನಮ್ಮ ಬದುಕನ್ನು ಇತರರೊಡನೆ ಹೋಲಿಸಿಕೊಂಡು ಗ್ರಹಿಸುವುದಕ್ಕಿಂತ ನಮ್ಮ ಅಂತರಾಳದ ಆಯಾಮಗಳ ಮೂಲಕವೇ ಗ್ರಹಿಸುವುದು ಹೆಚ್ಚು ಸೂಕ್ತ. ಆದ್ದರಿಂದ ಇಂದು ದೇಶವನ್ನು ಮತ್ತು ದೇಶಿಯ ಬದುಕನ್ನು ಪಾಶ್ಚಾತ್ಯ ಮಾನದಂಡಗಳಿಂದ ಗ್ರಹಿಸುವುದಕ್ಕಿಂತ ದೇಶಿಯ ನೆಲೆಯಲ್ಲೇ ಗ್ರಹಿಸುವುದು ಹೆಚ್ಚು ಸೂಕ್ತ.

ಒಮ್ಮೆ ಮುಸುಕಿನಂತೆ ಮತ್ತೊಮ್ಮೆ ಬೆಳಕಿನಂತೆ ಕಾಣುವ ಈ ಬಗೆಯ ಸಮುದಾಯಗಳ ನೀತಿ ನಿಯಮಗಳು ನಮ್ಮ ಆಧುನಿಕ ಲೋಕಕ್ಕೆ ಅನಗತ್ಯ ಅನ್ನಿಸುತ್ತದೆ. ಏಕೆಂದರೆ ಇಂದು ನಗರೀಕರಣದಿಂದ ಈ ಸಮುದಾಯಗಳು ದೂರವೇ ಉಳಿದಿವೆ ಎಂದು ಹೇಳಿದರು ಸಹ ಹಳ್ಳಿಯ ಜೀವನಗಳಿಗೆ ಅನ್ಯೋನತೆಯಾಗಿ ಹೆಣೆದುಕೊಂಡಿವೆ. ಯಾವುದೇ ಹಬ್ಬ ಆಚರಣೆ ಸಂಪ್ರದಾಯಗಳು ಬಂದಾಗಲೆಲ್ಲಾ ಈ ರೀತಿಯ ಸಮುದಾಯಗಳ ಮೌಲ್ಯಗಳು ಬೆಳಕಿಗೆ ಬರುತ್ತವೆ. ಇವು ಇಂದು ಯಾವ ರೀತಿಯಾಗಿವೆ ಎಂದರೆ ಬುಡಕಟ್ಟುಗಳು ಜಾಹಿರಾತುಗಳಂತಹ ಮಾಧ್ಯಮಗಳಿಗೆ ಸರಕುಗಳಾಗಿ ಮಾರ್ಪಟ್ಟಿವೆ. ಇದರಿಂದಾಗಿ ಆಧುನಿಕ ಲೋಕ ಬಯಸುವ ಕ್ರಮಕ್ಕು ಬುಡಕಟ್ಟು ಬಯಸುವ ಕ್ರಮಕ್ಕು ಬಹಳಷ್ಟು ವ್ಯತ್ಯಾಸವಿದೆ.

ಒಂದು ದೃಷ್ಟಿಯಲ್ಲಿ ನೋಡಿದರೆ ಬುಡಕಟ್ಟು ಸಂಸ್ಕೃತಿಗಳು ಇಂದು ರೂಪಾಂತರಗೊಳ್ಳುತ್ತಿವೆ. ಆದರೆ ಮೂಲ ಪುರಷರಿಂದ ಪ್ರಾರಂಭವಾದ ವೃತ್ತಿಗಳು ಕ್ರಮೇಣ ಮರೆಯಾಗುತ್ತಿವೆ. ಇದರಿಂದಾಗಿ ಸಂಸ್ಕೃತಿಯ ಅಧ್ಯಯನ ಅವಶ್ಯಕವಾಗಿ ನಡೆಯಬೇಕಾಗಿದೆ. ಈ ದಿಸೆಯಲ್ಲಿ ಅವರ ಸಮಾಜಿಕ ರಚನಾಕ್ರಮ, ಆರ್ಥಿಕ ಚಟುವಟಿಕೆಗಳು, ರೂಢಿ ಪದ್ಧತಿಗಳು ಮತ್ತು ಇತರೆ ಬುಡಕಟ್ಟು ಸಮುದಾಯಗಳೊಂದಿಗೆ ಅವರು ಯಾವ ರೀತಿಯ ಸಂಬಂಧವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನು ಕುರಿತು ಅಧ್ಯಯನ ಮಾಡಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಈ ಸಂಪ್ರಬಂಧದಲ್ಲಿ ಕುಡುಬಿಯರನ್ನು ಕುರಿತು ಅಧ್ಯಯನ ಮಾಡುವುದು ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಬುಡಕಟ್ಟುಗಳಲ್ಲಿ ಕುಡುಬಿ ಸಮುದಾಯ ಒಂದು ಆದಿವಾಸಿ ಸಮುದಾಯವಾಗಿದೆ. ಈ ಸಮುದಾಯ ಹೆಚ್ಚಾಗಿ ಪಶ್ಚಿಮ ಘಟ್ಟಗಳಲ್ಲಿ ವಾಸವಾಗಿರುವುದನ್ನು ನೋಡುತ್ತೇವೆ. ಕುಡುಬಿಯರು ಹೆಚ್ಚಾಗಿ ಕರ್ನಾಟಕದ ದಕ್ಷಿಣಕನ್ನಡ ಜಿಲ್ಲೆ, ಉತ್ತರಕನ್ನಡ ಜಿಲ್ಲೆ, ಮಂಗಳೂರು ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಇಲ್ಲಿ ಪ್ರಸ್ತುತ ಅಧ್ಯಯನಕ್ಕೆ ಕಾಲದ ಮಿತಿಯಿಂದಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಮೇಘಾನೆ ಮತ್ತು ಬಚ್ಚೋಡಿಯಲ್ಲಿ ಹೆಚ್ಚಾಗಿ ಕುಡುಬಿಯರು ಕಂಡು ಬರುವುದರಿಂದ ಮತ್ತು ಶಿವಮೊಗ್ಗ ಜಿಲ್ಲೆಯ ಕೊನೆಯ ಭಾಗದಲ್ಲಿರುವುದರಿಂದ ಈ ಎರಡು ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಿಂದ ಸುಮಾರು ೭೮ ಕಿ.ಮೀಟರ್ ದೂರವಿರುವ ಮೇಘಾನೆ

ಹಾಗೂ ಬಚ್ಚೋಡಿಯಲ್ಲಿರುವ ಕುಡುಬಿಯರು ವಿಶಿಷ್ಟ ರೀತಿಯ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಸಮುದಾಯ ದೇವರು, ನ್ಯಾಯ ಪಂಚಾಯಿತಿ, ಹಬ್ಬ, ನಿಷೇದಗಳು, ಕಸುಬು, ಮತ್ತು ನಂಬಿಕೆಗಳಲ್ಲಿ ಅವರದೇ ಆದ ಪದ್ಧತಿಯನ್ನು ಇಟ್ಟುಕೊಂಡು ಬೆಟ್ಟದ ಪರಿಸರದಲ್ಲಿ ಬದುಕುತ್ತಿದ್ದಾರೆ. ಈ ಎಲ್ಲಾ ಹಿನ್ನಲೆಯನ್ನು ಇಟ್ಟುಕೊಂಡು ಕುಡುಬಿ ಸಮುದಾಯವನ್ನು ಅಧ್ಯಯನ ಮಾಡಲಾಗಿದೆ.

೧.೩ ಅಧ್ಯಯನದ ವಿಧಾನ

ಕರ್ನಾಟಕದಲ್ಲಿ ಕಂಡುಬರುವ ಹಲವಾರು ಬುಡಕಟ್ಟುಗಳಲ್ಲಿ ಕುಡುಬಿಯರದೂ ಸಹ ಒಂದು ಬುಡಕಟ್ಟು. ಇದುವರೆಗೆ ಕರ್ನಾಟಕದಲ್ಲಿ ಇವರನ್ನು ಕುರಿತು ನಡೆದಂತಹ ಅಧ್ಯಯನ ತುಂಬ ಕಡಿಮೆ. ಈ ಅಧ್ಯಯನವು ದಟ್ಟವಾದ ಕ್ಷೇತ್ರಕಾರ್ಯ ಹಾಗೂ ಕ್ಷೇತ್ರ ಮಾಹಿತಿಯನ್ನು ಒಳಗೊಂಡದಾಗಿದೆ. ಪ್ರಸ್ತುತ ವಕ್ತೃಗಳು ನೀಡಿದ ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳಿಂದ ಇಲ್ಲಿನ ಚರ್ಚೆಯನ್ನು ವಿಸ್ತೃತಗೊಳಿಸಲಾಗಿದೆ.

ಈಗಾಗಲೇ ನಡೆದಿರುವ ಅಧ್ಯಯನದ ಮಾಹಿತಿಯನ್ನು ಗಮನದಲ್ಲಿರಿಸಿಕೊಂಡು ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುವ ಮರಾಠಿ ಕುಡುಬಿಯರು ಕುಡುಬಿ ಬುಡಕಟ್ಟಿನ ಒಂದು ಒಳಪಂಗಡವಾಗಿದ್ದು, ಇವರನ್ನು ಸೂಕ್ಷ್ಮ ಅದ್ಯಯನದ ಹಿನ್ನಲೆಯಲ್ಲಿ ಪ್ರತಿಯೊಂದು ಕುಟುಂಬವನ್ನು ಸಮೀಕ್ಷಿಸುವ ಮೂಲಕ ಸೂಕ್ಷ್ಮ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕುಡುಬಿಯರನ್ನು ಕುರಿತು ಅನೇಕ ವಿದ್ವಾಂಸರು ಅಧ್ಯಯನ ಮಾಡಿ ಲೇಖನಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಈ ಅಧ್ಯಯನವು ಒಂದು ಸೂಕ್ಷ್ಮ ಅಧ್ಯಯನವಾಗಿರದೆ ಇದುವರೆಗೆ ನಡೆದ ಅಧ್ಯಯನಗಳು ಕುಡುಬಿಯರನ್ನು ಒಟ್ಟಾಗಿ ಸೇರಿಸಿ ಮಾಡಿದ ಅಧ್ಯಯನಗಳಾಗಿವೆ. ಆದರೆ ನನ್ನ ಅಧ್ಯಯನವು ಕುಡುಬಿಯರ ಒಳಪಂಗಡವಾದ ಮರಾಠಿ ಕುಡುಬಿಯರನ್ನು ಕುರಿತು ಅಧ್ಯಯನ ಮಾಡುವುದಾಗಿದೆ.

ಈ ಅಧ್ಯಯನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಛಾಯಚಿತ್ರಗಳನ್ನು ತೆಗೆಯಲಾಗಿದೆ. ಈ ಸಮುದಾಯದ ಜೊತೆ ನಿರಂತರವಾಗಿ ಒಂದು ತಿಂಗಳು ಇದ್ದು, ಮೇಘಾನೆ ಮತ್ತು ಬಚ್ಚೋಡಿಯ ವಕ್ತೃಗಳಿಂದ ಹಾಗೂ ಇನ್ನು ಇತರ ಊರುಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ಮಾಹಿತಿಯನ್ನು ನೇರವಾಗಿ ಕುಡುಬಿಯರನ್ನು ಬೇಟೆ ಮಾಡುವುದರ ಮೂಲಕ ಮುಖಾಮುಖಿ ಸಂದರ್ಶನ ಮಾಡಲಾಗಿದೆ ಹಾಗೂ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸದಂತೆ ಅವರಿಗೆ ಅರ್ಥವಾಗುವಂತಹ ಪ್ರಶ್ನಾವಳಿಯನ್ನು ರಚಿಸಿಕೊಂಡು ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

ಬುಡಕಟ್ಟು ಸಮುದಾಯಗಳ ಅಧ್ಯಯನವು ಇಂದು ಪ್ರಾಮುಖ್ಯತೆಯನ್ನು ಪಡೆದಿದೆ. ಜಾಗತೀಕರಣ ಮತ್ತು ವಸಹಾತುಶಾಹಿಯ ದೃಷ್ಟಿಯಿಂದ ಬುಡಕಟ್ಟು ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ.

ಕುಡುಬಿಯರ ದಿನನಿತ್ಯದ ಬದುಕು ಕೃಷಿಯಾಗಿದೆ. ಇವರು ಮೂಲತಃ ಗೋವಾದವರಾಗಿದ್ದು, ಪೋರ್ಚಗೀಸರ ಮತಾಂತರದ ಬಲತ್ಕಾರಕ್ಕೆ ಸಿಕ್ಕು ಕರ್ನಾಟಕಕ್ಕೆ ವಲಸೆ ಬಂದವರಾಗಿದ್ದಾರೆ ಹಾಗೂ ಕುಮ್ರಿ ಬೆಸಾಯ ಪದ್ಧತಿಯನ್ನು ಅನುಸರಿಸುವವರಾಗಿದ್ದಾರೆ. ಈ ಬೇಸಾಯದಲ್ಲಿ ನೇಗಿಲನ್ನು ಬಳಸದೆ ಗುದ್ದಲಿಯಿಂದ ಮಾತ್ರ ಅಗೆದು ಕೃಷಿ ಮಾಡುವುದು ಹಾಗೂ ನಿರ್ದಿಷ್ಟ ಪ್ರದೆಶದಲ್ಲಿ ಮೂರು ಸಲಕ್ಕಿಂತ ಹೆಚ್ಚಿನ ಬಾರಿಗೆ ಬೆಳೆ ತೆಗೆಯದೆ ಮುಂದಿನ ಪ್ರದೇಶಕ್ಕೆ ಹೋಗುತ್ತಿದ್ದರು. ಆದರೆ ಬ್ರಿಟಿಷರ ಆಗಮನದ ನಂತರ ಕಬ್ಬಿಣದಿಂದ ಮಾಡಿದ ನೇಗಿಲುಗಳನ್ನು ಬಳಸಿಕೊಂಡು ಕೃಷಿಯಲ್ಲಿ ತೊಡಗಿದ್ದಾರೆ. ಆದರೆ ಸಾಂಬಾರ ಪದಾರ್ಥಗಳನ್ನು ದೋಚುವ ಆಸೆಯನ್ನು ಇಟ್ಟುಕೊಂಡು ಬ್ರಿಟಿಷರು ಯಾವಾಗ ಮಲೆನಾಡಿಗೆ ಬಂದರೋ ಆಗಲೇ ಬುಡಕಟ್ಟುಗಳ ಬದುಕು ಅಸ್ಥಿರವಾಗತೊಡಗಿತು. ಇದರಿಂದಾಗಿ ತಿಳಿಯುವುದೇನೆಂದರೆ ವಸಾಹತುಶಾಹಿಯ ಪ್ರಭಾವವನ್ನು ಅರ್ಥಮಾಡಿಕೊಳ್ಳದೇ ಅರಣ್ಯ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಆದಿವಾಸಿಗಳ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ನೋಡಿದಾಗ ಭಾರತದ ಪಶ್ಚಿಮ ಘಟ್ಟಗಳಲ್ಲಿ ಕಾಫಿ, ಟೀ, ಯಾಲಕ್ಕಿ, ಮೆಣಸು, ಕೋಕಾ ಹಾಗೂ ರಬ್ಬರ್ ತೋಟಗಳಾಗಿ ಪರಿವರ್ತನೆಗೊಂಡಿತು ಅಲ್ಲದೆ ಈ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಿಗೆ ನೀವು ಮತಾಂತರ ಹೊಂದಿದರೆ ಮಾತ್ರ ನಿಮಗೆ ಅಸ್ತಿಯನ್ನು ಕೊಡುತ್ತೇವೆ ಎಂದು ಹೆದರಿಸಿ ಅವರನ್ನು ದಿನನಿತ್ಯದ ಕೂಲಿಗಾಗಿ ಬಳಸಿಕೊಂಡಿದ್ದಾರೆ. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳಾದ ಕುಡುಬಿಯರು, ಹಸಲರು, ಗೊಂಡರು, ಹಾಲಕ್ಕಿ ಒಕ್ಕಲಿಗರು, ಸಿದ್ದಿಗಳು, ಗೌಳಿಗರು ಮುಂತಾದ ಅನೇಕ ಸಮುದಾಯಗಳು ತಮ್ಮ ನೆಲೆಯನ್ನು ಕಳೆದುಕೊಂಡು ಇಂದಿಗೂ ಡೋಲಾಯಮಾನದಲ್ಲಿಯೇ ಬದುಕುತ್ತಿರುವುದನ್ನು ನೋಡಬಹುದು.

ಬುಡಕಟ್ಟು ಸಮುದಾಯಗಳು ನಿಸರ್ಗದ ಆರಾಧನೆಯನ್ನು ಹೆಚ್ಚಾಗಿ ರೂಢಿಸಿಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಕುಡುಬಿಯರು ತುಳಸಿ ಪೂಜೆಗೆ ಪ್ರಥಮ ಸ್ಥಾನವನ್ನು ಕೊಟ್ಟಿದ್ದಾರೆ. ಇವರ ಮೇಲೆ ಧರ್ಮಸ್ಥಳದ ಮಂಜುನಾಥ, ತಿರುಪತಿ ವೆಂಕಟೇಶ್ವರನ ಪ್ರಭಾವ ಬಿರಿದ್ದಾರೆ. ಇಲ್ಲಿ ಕುಡುಬಿಯರ ಸಾಮಾಜಿಕ ಬದುಕನ್ನು ಕುರಿತು ವಿವರವಾಗಿ ತಿಳಿಯಲಾಗುತ್ತದೆ. ಅಂದರೆ ಅವರ ಉಡುಗೆ-ತೊಡುಗೆ, ಭಾಷೆ, ಜೀವನಕ್ರಮ, ಸಾಂಸ್ಕೃತಿಕ ಜೀವನ, ಕುಟುಂಬ ವ್ಯವಸ್ಥೆ, ಹಬ್ಬ, ಆಚರಣೆ, ನಂಬಿಕೆ, ನಿಷೇಧ, ಕಲೆ ಮತ್ತು ಸಾಹಿತ್ಯವನ್ನು ಕುರಿತು ಅಧ್ಯಯನ ದೃಷ್ಟಿಯಿಂದ ಪ್ರಸ್ತುತ ಪ್ರಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರಾಚೀನ ಕಾಲದ ಭಾರತದ ಆರ್ಥಿಕ ವ್ಯವಸ್ಥೆಯನ್ನು ಚರ್ಚಿಸುವುದರ ಜೊತೆಗೆ ಇಂದು ಕುಡುಬಿಯರು ಕೃಷಿ ಮತ್ತು ಕಸುಬಿಗೆ ಸಂಬಂಧಿಸಿದಂತೆ ಆರ್ಥಿಕ ವ್ಯವಸ್ಥೆಯಲ್ಲಿ ಇವರ ಸ್ಥಿತಿಗತಿ ಏನು ಎಂಬ ಅಂಶಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಜಾಗತೀಕರಣವನ್ನು ಇಡೀ ರಾಷ್ಟ್ರವೆ ಒಪ್ಪಿಕೊಂಡು ಸಾಮಾಜಿಕ ಸ್ಥರವಿನ್ಯಾಸದ ಮೇಲಸ್ತರದಲ್ಲಿರುವ ವರ್ಗಗಳು ಎಷ್ಟರ ಮಟ್ಟಿಗೆ ಶಿಕ್ಷಣ ವ್ಯವಸ್ಥೆ ರೂಪಿಸಿವೆ ಹಾಗೂ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಕಾಡನ್ನೇ

ತಮ್ಮ ದೇವರು ಎಂದು ನಂಬಿಕೊಂಡು ಬದುಕುವ ಆದಿವಾಸಿ ಸಮುದಾಯದ ಹಾಡಿಗಳ ರೀತಿಯ ಮನೆಗಳನ್ನು ಎಷ್ಟರ ಮಟ್ಟಿಗೆ ತಲುಪಿವೆ ಎಂಬುದನ್ನು ಕುರಿತು ಸಂಪ್ರಬಂಧದಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ.

೧.೫ ಕುಡುಬಿ ಸಮುದಾಯವನ್ನು ಕುರಿತು ನಡೆದಿರುವ ಅಧ್ಯಯನಗಳು

ಬುಡಕಟ್ಟು ಸಮುದಾಯಗಳಲ್ಲಿ ಆದಿವಾಸಿ ಸಮುದಾಯವಾದ ಕುಡುಬಿಯರ ಬಗ್ಗೆ ಕೆಲವು ಅಧ್ಯಯನಗಳು ನಡೆದಿವೆ. ಇಲ್ಲಿ ಕೆಲವು ಒಳಪಂಗಡಗಳನ್ನು ಗುರುತಿಸಿದ್ದಾರೆ. ಈ ಹಿಂದೆ ನಡೆದ ಅಧ್ಯಾಯನಗಳು ಒಟ್ಟು ಕುಡುಬಿಯರನ್ನು ಕುರಿತಾದವುಗಳಾಗಿವೆ.

ಪ್ರಥಮವಾಗಿ ಥರ್ಸ್ಟನ್‌ರವರು ೧೯೦೯ರಲ್ಲಿ ಕುಡುಬಿಯರನ್ನು ಬುಡಕಟ್ಟು ಎಂದು ಗುರುತಿಸಿ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಅಲ್ಲದೆ ಸುಮಾರು ಒಂದು ನೂರು ವರ್ಷಗಳ ಹಿಂದೆ ಕುಡುಬಿಯರ ವಿವಿಧ ಆಚರಣೆ ಮತ್ತು ವಿಧಿ ವಿಧಾನಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಸ್ಟುರಕ್‌ರವರು (೧೮೯೪) 'Forest and Hill Tribes' ಎಂಬ ಅಧ್ಯಯನದಲ್ಲಿ ಕುಡುಬಿಯರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್‌ರವರು (೧೯೨೮) ಅರೆಕುಡುಬಿಯರನ್ನು ಪರಿಚಯಿಸುತ್ತ ಬುಡಕಟ್ಟುಗಳ ಒಳಾಡಳಿತ ಪದ್ಧತಿ, ಮದುವೆ, ನಿಷೇಧಗಳು, ಧಾರ್ಮಿಕ ಆಚರಣೆ, ಕುಮ್ರಿ ಬೇಸಾಯಕ್ಕೆ ಸಂಬಂಧಿಸಿದಂತೆ ಕುಡುಬಿಯರ ಬಗ್ಗೆ ಅಧ್ಯಯನ ಮಾಡಿದ್ದಾರೆ. ಕೆ.ಅಬಿಶಂಕರ್ ಸಂಪಾದಕತ್ವದ 'South Ranara' (1973) ಮತ್ತು ಎಲ್.ಜಿ.ಹಾವನೂರರು ಅಧ್ಯಕ್ಷರಾಗಿದ್ದ Karnataka Backward Class Commission (Vol II. 1975) ವರದಿಯಲ್ಲಿ ಕುಡುಬಿಯರನ್ನು "A Nomadic Hill Tribes Living in isolation" ಎಂದು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಡಾ.ಮಹಮ್ಮದ್ ಪೀರ್ ಮತ್ತು ಒಡೆಯರ್ ಡಿ.ಹೆಗಡೆ (೧೯೮೨) ಕುಡುಬಿಯರ ಸ್ಥಿತಿಗತಿಗಳ ಬಗ್ಗೆ ಪರಿಚಯಿಸಿದ್ದಾರೆ.

ಎಸ್.ಎ.ಕೃಷ್ಣಯ್ಯರವರು Kudubi Vesas (1991) ಎಂಬ ಲೇಖನದಲ್ಲಿ ಕುಡುಬಿಯರ ಹೋಳಿಹಬ್ಬದ ಸಾಂಪ್ರದಾಯಿಕ ವೇಷಭೂಷಣ ಮತ್ತು ಅಲಂಕರಗಳ ಬಗ್ಗೆ ತಿಳಿಸುತ್ತ Holi Festival of the Kudubies (೧೯೮೭) ಎಂಬ ಲೇಖನದಲ್ಲಿ ಈ ಸಮುದಾಯ ಹೋಳಿ ಹಬ್ಬದ ಸಂದರ್ಭದಲಿ ಮಾಡುವ ಧಾರ್ಮಿಕ ಆಚರಣೆಗಳನ್ನು ಪರಿಚಯಿಸಿದ್ದಾರೆ.

ಈಶ್ವರ ಜೋಶಿಯವರು (೧೯೮೩) ಒಂದು ಕಿರು ಪುಸ್ತಕದಲ್ಲಿ ಕುಡುಬಿಯರ ಒಟ್ಟು ಪರಿಚಯವನ್ನು ಮಾಡಿದ್ದಾರೆ. ಇದೇ ರೀತಿಯಾಗಿ ಕುಡುಬಿಯರನ್ನು ಕುರಿತು ಪ್ರೊ.ಎ.ವಿ.ನಾವಡರು (೧೯೮೪-೧೯೮೯) ತಮ್ಮ ಲೇಖನದಲ್ಲಿ ಈ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಪರಿಚಯವನ್ನು ಮಾಡಿಕೊಟ್ಟಿರುವುದನ್ನು ನೋಡಬಹುದು. ರವೀಂದ್ರನಾಥ್ ರಾವ್ (೧೯೯೫) ತಮ್ಮ ಸಂಶೋಧನಾ ಗ್ರಂಥದಲ್ಲಿ ಕುಡುಬಿಯರ ಸಾಮಾಜಿಕ ಬದಲಾವಣೆಯನ್ನು ಅಧ್ಯಯನಕ್ಕೆ ಒಳಪಡಿಸುವಾಗ ಇವರ ಒಟ್ಟು

ಬದುಕಿನ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಡಾ.ಅಭಯ್ ಕುಮಾರ್ ಕೌಕ್ರಾಡಿಯವರು ಕುಡುಬಿಯರನ್ನು ಕುರಿತು ಬರೆದ ಲೇಖನದಲ್ಲಿ ಇವರನ್ನು ಪರಿಚಯಿಸಿದ್ದಾರೆ ಇತ್ತೀಚಿಗೆ ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಪ್ರೊ.ಹಿ.ಚಿ.ಬೋರಲಿಂಗಯ್ಯರವರು (೧೯೯೧) 'ಗಿರಿಜನ ನಾಡಿಗೆ ಪಯಾಣ' ಕೃತಿಯಲ್ಲಿ ಶಿವಮೊಗ್ಗ ಜಿಲ್ಲೆಯ ಮೇಘಾನೆಯ ಕುಡುಬಿಯರನ್ನು ಕುರಿತು ಪರಿಚಯಿಸಿದ್ದಾರೆ. ಇದೇ ರೀತಿ ಕೆ.ಎಸ್.ಸಿಂಗ್‌ರವರು ತಮ್ಮ The Scheduled Tribes vol III ರಲ್ಲಿ (೧೯೯೪) ಕುಡುಬಿಯರನ್ನು ಕುರಿತು ಪರಿಚಯಿಸಿದ್ದಾರೆ.

ಈ ರೀತಿಯಾಗಿ ಆದಿವಾಸಿ ಸಮುದಾಯವಾದ ಕುಡುಬಿಯರನ್ನು ಕುರಿತು ಅನೇಕ ವಿದ್ವಾಂಸರು ಅಧ್ಯಯನ ಮಾಡಿರುವುದನ್ನು ನೋಡಬಹುದಾಗಿದೆ.

ಟಿಪ್ಪಣಿ

೧. ಬುಡಕಟ್ಟು ಸ್ಥಿತ್ಯಾಂತರಗಳು, ಎ.ಎಸ್.ಪ್ರಭಾಕರ್, (ಪು:೩೬-೩೭)

೨. ಗಿರಿಜನ ನಾಡಿಗೆ ಪಯಾಣ, ಡಾ.ಹಿ.ಚಿ.ಬೋರಲಿಂಗಯ್ಯ, (ಪು:೧೧-೧೩)

೩. ವಿಸ್ಮೃತಿ ಮತ್ತು ಸಂಸ್ಕೃತಿ, ಡಾ.ಹಿ.ಚಿ.ಬೋರಲಿಂಗಯ್ಯ, (ಪು:೨೧)

೪. ಕಾಡು ಕಾಂಕ್ರೀಟ್ ಮತ್ತು ಜನಪದ ಡಾ.ಹಿ.ಚಿ.ಬೋರಲಿಂಗಯ್ಯ,

೫. (ಕುಡುಬಿಯರ) ಬುಡಕಟ್ಟುಗಳ ಕೋಶ, ಡಾ.ಅಭಯ್ ಕುಮಾರ್ ಕೌಕ್ರಾಡಿ, (ಪು:೨೪೬)

೬. ದಲಿತರು ಮತ್ತು ಜಾಗತೀಕರಣ, ಡಾ.ಮೊಗಳ್ಳಿ ಗಣೇಶ್, (ಪು:೧೧೨-೧೧೫)

೭. ಗೆಜ್ಜೆ ಮಾತಾನಾಡುತ್ತವೆ ಪ್ರ: ಸಂಪಾದಕ ಡಾ.ಎಸ್.ಕೆ. ಕರೀಂಖಾನ್, (ಪು:೧೬)

೮. ಒಂದು ಸೊಲ್ಲು ನೂರು ಸ್ವರ., ಪ್ರೊ.ಎ.ವಿ.ನಾವಡ (ಪು:೧೩೫)

ಅಧ್ಯಾಯ ೨

ಕುಡುಬಿಯರ ಸಾಮಾಜಿಕ ಬದುಕು

ಕುಡುಬಿಯರ ಸಾಮಾಜಿಕ ಬದುಕು

ಭಾರತದಲ್ಲಿ ಯಾವುದೇ ಬುಡಕಟ್ಟು ಸಮುದಾಯ ತನ್ನ ಸಮುದಾಯದ ಕೆಲವು ನಿಯಮಗಳನ್ನು ಯಾವಾಗಲೂ ಕಟ್ಟುನಿಟ್ಟಿನಿಂದ ಪಾಲಿಸುತ್ತದೆ. ಇಂದು ಆದಿವಾಸಿ ಸಮುದಾಯಗಳು ಆಧುನೀಕರಣವನ್ನು ಹೊಂದುತ್ತಲೇ ವಂಶಪರಂಪರೆಯಾಗಿ ಬಂದ ಕೆಲವು ನಿಲುವುಗಳನ್ನು ಉಳಿಸಿಕೊಂಡಿವೆ. ಅಲ್ಲದೆ ಕೆಲವು ಮೌಲ್ಯಗಳನ್ನು ತಮ್ಮಲ್ಲಿಯೇ ಇರಬೇಕೆಂಬ ಛಲವನ್ನು ಹೊಂದಿರುತ್ತವೆ. ಕಾಡಿನಲ್ಲಿರುವ ಬುಡಕಟ್ಟು ಆದಿವಾಸಿ ಸಮುದಾಯಗಳು ಹಾಗೂ ಕೆಳಜಾತಿಗಳನ್ನು ಪುರೋಹಿತಶಾಹಿಗಳು ತಮ್ಮ ಅಧೀನದಲ್ಲಿಟ್ಟುಕೊಂಡು ಬೇಕಾದ ಸಮಯದಲ್ಲಿ ಬೆಳಸಿಕೊಳ್ಳುತ್ತಿದ್ದರು. ಹಾಗೂ ಆದಿವಾಸಿ ಮತ್ತು ಕೆಳಜಾತಿಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡದೇ ಮೃಗಗಳಂತೆ ನೋಡುತ್ತಿದ್ದರು ಈ ಹಿನ್ನೆಲೆಯಲ್ಲಿಯೇ ಪುರೋಹಿತಶಾಹಿ ಆಧುನಿಕರು, ಪಶ್ಚಿಮದವರು ಗೊಡ್ಡು ಸಮುದಾಯಗಳೆಂದು ಕರೆದಿದ್ದಾರೆ. ಇದನ್ನು ವಿಮರ್ಶೆಗೆ ಒಳಪಡಿಸಿದಾಗ ಪ್ರಸ್ತುತ ಸಮಾಜದಲ್ಲಿ ದೇಸಿಯ ಸಂಸ್ಕೃತಿಯೇನಾದರು ಉಳಿದಿದೆ ಎಂದರೆ ಕೆಳಜಾತಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಮಾತ್ರ ಎಂಬುದು ನಿಜವಾದ ಸಂಗತಿಯಾಗಿದೆ.

ಭಾರತದಲ್ಲಿ ಅನೇಕ ಸಾಮ್ರಾಜ್ಯಶಾಹಿ, ಪುರೋಹಿತಶಾಹಿ, ವಸಾಹತುಶಾಹಿ ಆಳ್ವಿಕೆಯಿಂದಲೂ ಹಾಗೂ ಇತ್ತೀಚಿಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬುಡಕಟ್ಟುಗಳ ಬಗ್ಗೆ ಆಲೋಚಿಸಿದವರು ತುಂಬ ವಿರಳ. ಆದರೆ, ಇತ್ತೀಚಿಗೆ ಮಂದಗತಿಯಲ್ಲಿ ಬುಡಕಟ್ಟುಗಳ ಬಗ್ಗೆ ಕಾಳಜಿಯನ್ನುವಹಿಸಿ ಅವರನ್ನು ಅವರದೇ ಆದ ಸಂಸ್ಕೃತಿಯಲ್ಲಿ ಅಭಿವೃದ್ಧಿ ಮಾಡುವ ಕಾರ್ಯ ನಡೆಯುತ್ತಿದೆ.

ಕುಡುಬಿ ಸಮುದಾಯವು ಜಾಗತೀಕರಣ ಮತ್ತು ವಸಾಹತುಶಾಹಿಗಳ ಸುಳಿಯಲ್ಲಿಯಿದೆ. ಈ ಹಿನ್ನೆಲೆಯಲ್ಲಿಯಾದರು ಯಾವುದೇ ರೀತಿಯ ಪ್ರಭಾವಗಳಿಗೆ ಸಿಲುಕದೆ, ಒಂದು ಕಡೆ ನೆಲೆನಿಂತು ಜೀವನವನ್ನು ನಡೆಸುತ್ತಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಂತೆ, ಪ್ರಪಂಚದ ಯಾವುದೇ ಬುಡಕಟ್ಟುಗಳ ಅಭಿವೃದ್ಧಿಗಾಗಿ ರಚನೆಯಾದ ಕಾನೂನುಗಳು, ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಪಡಿಸುತ್ತಿವೆ ಎಂಬುದರ ಬಗ್ಗೆ ಯಾವುದೇ ರೀತಿ ಲಕ್ಷಣಗಳು ಕಾಣತ್ತಿಲ್ಲ. ಇದಕ್ಕೆ ಉದಾಹರಣೆಯಾಗಿ ಎ.ಎಸ್. ಪ್ರಭಾಕರ್‌ರವರು ತಮ್ಮ ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು ಎಂಬ ಪುಸ್ತಕದ ಮಾಹಿತಿಯನ್ನು

ನೆನಪಿಸಿಕೊಳ್ಳಬಹುದು. ಜಾಗತೀಕರಣವು ಪ್ರಾಚೀನ ಕಾಲದಿಂದ ಪ್ರಸ್ತುತ ಭಾರತದಲ್ಲಿ ಸಮಾಜಿಕ, ಕುಟುಂಬ, ರಾಷ್ಟ್ರದ ಮೇಲೆ ಅನೇಕ ರೀತಿಯ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಬೀರಿವೆ ಎಂದಿದ್ದಾರೆ. ಇದು ನಿಜವೇ ಎಂದು ತೋರುತ್ತದೆ. ಇಂದು ಮಾಹಿತಿ ತಂತ್ರಜ್ಞಾನವು ಮಾನವನು ಹಾಕುವ ಪ್ರತಿಯೊಂದು ಹೆಜ್ಜೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ನವೀನತೆಯಿಂದ ಕೂಡಿದ ಅವಿಷ್ಕಾರಗಳು, ಪ್ರಯೋಗಗಳು ನಡೆಯುತ್ತಿವೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲೇ ಪ್ರಥಮಬಾರಿಗೆ ಬೆಂಗಳೂರನಲ್ಲಿ ಪ್ಲಾಸ್ಟಿಕ್ ರಸ್ತೆಗಳನ್ನು ನಿರ್ಮಾಣ ಮಾಡುತ್ತಿರುವುದನ್ನು ಗಮನಿಸಿದರೆ ತಾಂತ್ರಿಕ ಜಗತ್ತು ವೇಗವಾಗಿ ಬೆಳವಣಿಗೆಯಾಗುವುದರ ಜೊತೆಯಲ್ಲಿ ಜಾನಪದಿಯ ಹಾಗೂ ಆದಿವಾಸಿಗಳ ಬದುಕನ್ನು ವಿನಾಶದ ಅಂಚಿನಕಡೆಗೆ ತೆಗೆದುಕೊಂಡು ಹೋಗುತ್ತವೆ ಎಂಬುದನ್ನು ಗಮನಿಸಬಹುದು.

ಬುಡಕಟ್ಟುಗಳಲ್ಲಿ ಆದಿವಾಸಿ ಸಮುದಾಯವಾದ ಕುಡುಬಿ ಸಮುದಾಯವು ಆಧುನಿಕತೆಯಿಂದ ಕೂಡಿದೆ. ತಾಂತ್ರಿಕ ಯುಗದಲ್ಲಿಯೂ ಕೂಡ ತನ್ನ ಸಮುದಾಯದಲ್ಲಿ ತಮ್ಮದೇ ಆದ ರೀತಿ, ರಿವಾಜು, ನಿಯಮಗಳು, ಕಟ್ಟುಪಾಡುಗಳನ್ನು ರಚಿಸಿಕೊಂಡು ಇವುಗಳಿಗೆ ಸರಿಹೊಂದುವಂತೆ ಜೀವನವನ್ನು ನಡೆಸುತ್ತಿವೆ.

೨.೧ ಕುಡುಬಿಯರ ಸಾಮಾಜಿಕ ಹಿನ್ನಲೆ

ಕರ್ನಾಟಕದಲ್ಲಿ ಕುಡುಬಿ ಸಮುದಾಯ ಒಂದು ಆದಿವಾಸಿ ಬುಡಕಟ್ಟಾಗಿದೆ. ಈ ಸಮುದಾಯದಲ್ಲಿ ಅನೇಕ ಒಳಪಂಗಡಗಳಿದ್ದು, ಎಲ್ಲ ಪಂಗಡಗಳ ಮೂಲ ಅಥವಾ ಹಿನ್ನೆಲೆ ಒಂದೇ ಆಗಿರುವುದನ್ನು ಕಾಣಬಹುದು. ಆದರೆ ಕೆಲವೊಂದು ಆಚಾರ, ವಿಚಾರಗಳಲ್ಲಿ ಸ್ವಲ್ಪಮಟ್ಟಿನ ಭಿನ್ನತೆಯನ್ನು ಕಂಡರೂ, ಈ ಸಮುದಾಯ ಆರ್ಥಿಕವಾಗಿ ಕೆಲವೊಂದು ಜಿಲ್ಲೆಗಳಲ್ಲಿ ಶಿವಮೊಗ್ಗಾ ಉತ್ತಮವಾದ ಸ್ಥಿತಿಯಲ್ಲಿದೆ. ಉಳಿದ ದಕ್ಷಿಣಕನ್ನಡ ಮತ್ತು ಉತ್ತರಕನ್ನಡ, ಮಂಗಳೂರಿನಲ್ಲಿ ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿದೆ. ಕರ್ನಾಟಕದಲ್ಲಿ ಸಮುದಾಯಗಳ ಚರಿತ್ರೆ ರೂಪಗೊಂಡ ಹಿನ್ನೆಲೆಯನ್ನು ಅವಲೋಕಿಸಿದಾಗ ಇದರ ಹಿಂದೆ ಅನೇಕ ರಾಜಕೀಯ ಹುನ್ನಾರಗಳ ಕೈವಾಡವಿದೆ ಎಂದು ತಿಳಿಯಬುಹುದಾಗಿದೆ. ಬ್ರಿಟಿಷರು ಭಾರತಕ್ಕೆ ಬರುವುದಕ್ಕಿಂತ ಪೂರ್ವ ಹಾಗೂ ಬ್ರಿಟಿಷರು ಕಾಲದ ಅವಧಿಯಲ್ಲಿ ರೂಪಗೊಂಡ ಸಮುದಾಯಗಳೇ ಚರಿತ್ರೆಯ ಪಾಶ್ಚಾತ್ಯ ಮತ್ತು ವಸಾಹತುಶಾಹಿಯ ಮಿಶ್ರಣಗಳಿಂದ ಕೂಡಿದುದಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಮೇಲ್ಜಾತಿಗಳು ಭಾರತೀಯ ಸಂಸ್ಕೃತಿಯನ್ನು ನಿರ್ಮಿಸಿದವರಾಗಿದ್ದಾರೆ. ದೇಶಿಯ ಮತ್ತು ವಸಾಹತುಶಾಹಿಯ ದೃಷ್ಟಿಕೋನದ ಮತೀಯ ಪೂರ್ವಗ್ರಹಗಳು ಭಾರತದ ಆದಿವಾಸಿಗಳ ಬದುಕನ್ನು ವಿರೂಪಗೊಳಿಸಿವೆ. ಶ್ರಮಿಕವರ್ಗ ಹಾಗೂ ಆದಿವಾಸಿ ಸಮುದಾಯಗಳ ಕುರಿತು ವಸಹಾತುಶಾಹಿ ವ್ಯವಸ್ಥೆ ಅನೇಕ ಅಪಕಲ್ಪನೆಗಳನ್ನು ಮೈಗೂಡಿಸಿಕೊಂಡಿದೆ. ಕುಣಬಿ ಅಥವಾ ಕುಡುಬಿ ಸಮುದಾಯ ಗೋವಾದಿಂದ ಕರ್ನಾಟಕದ ಕಡೆ ವಲಸೆ ಬಂದ ಮೇಲೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಭಿನ್ನವಾದ ರೀತಿಯಲ್ಲಿ ಬದುಕನ್ನು ಸಾಗಿಸುತ್ತಿದ್ದಾರೆ.

ವಕ್ತೃಪ್ರಕಾರ : ಮಲ್ಲಿಕಾರ್ಜುನನ ಲಿಂಗ ತಮಗೆ ದೊರೆತ ಬಗ್ಗೆ ಮತ್ತು ಅದಕ್ಕೆ ಅವರೇ ಅರ್ಚಕರಾದ ಬಗ್ಗೆ ಕುಡುಬಿಯರಲ್ಲಿ ಒಂದು ಪುರಾಣವಿದೆ. ಗೊವೆಯಲ್ಲಿ ಕುಡುಬಿಯರು ಕಾಡಿನಲ್ಲಿ ಪೊದೆಗಳನ್ನು, ಮರಗಳನ್ನು ಕಡಿದು ಸಮತಟ್ಟುಗೊಳಿಸುವಾಗ ಒಂದು ಲಿಂಗ ದೊರೆಯಿತು. ಆ ಲಿಂಗಕ್ಕೆ ಕುಡುಬಿಯರೆಲ್ಲಾ ಸೇರಿಕೊಂಡು ದೇವಸ್ಥಾನ ಕಟ್ಟಿ ಅದರಲ್ಲಿ ಲಿಂಗವನ್ನು ಸ್ಥಾಪಿಸಬೇಕಂದು ತಿರ್ಮಾನಿಸಿದರು. ಆದರೆ, ಪಾರಂಪಾರಿಕ ವೃತ್ತಿಯವರಾದ ಬ್ರಾಹ್ಮಣರು ಅರ್ಚಕರಾಗಿ ಮುಂದೆ ಬಂದರು. ಆಗ ಲಿಂಗ ಇದ್ದಕ್ಕಿಂದಂತೆ ಮಾಯವಾಯಿತು. ನಂತರ ಅದೇ ಲಿಂಗ ಮತ್ತೆ ಕಾಣಿಸಿಕೊಂಡಿತು. ಈ ರೀತಿಯಾಗಿ ಸಿಕ್ಕ ಲಿಂಗದಿಂದ ಒಂದು ಕಣ್ಣಲ್ಲಿ ಹಾಲು ಮತ್ತೊಂದು ಕಣ್ಣಲ್ಲಿ ರಕ್ತ ಸುರಿಯುತ್ತಿತ್ತು. ಕುಡುಬಿ ಸಮುದಾಯದವರೆಲ್ಲ ಒಗ್ಗೂಡಿ ಪ್ರತ್ಯೇಕವಾದ ಒಂದು ದೇವಸ್ಥಾನವನ್ನು ಕಟ್ಟಿ ಲಿಂಗವನ್ನು ಸ್ಥಾಪಿಸಿ ಅದರಲ್ಲಿ ತಮ್ಮವರಲ್ಲಿ ಒಬ್ಬರನ್ನು ಅರ್ಚಕರಾಗಿ ಮಾಡಿದರು ಎಂದು ಮಲ್ಲಿಕಾರ್ಜುನನ ಬಗೆಗೆ ಪುರಾಣವನ್ನು ಹೇಳುತ್ತಾರೆ. ಆ ಪುರಾಣದ ಮೂಲಕ ಪ್ರಮುಖವಾಗಿ ಗುರುತಿಸಬಹುದಾದ ಅಂಶಗಳು, ಕುಡುಬಿಯರು ಕಾಡಿನಲ್ಲಿ ಬೇಸಾಯವನ್ನು ಮಾಡುತ್ತಿದ್ದವರು. ಮಲ್ಲಿಕಾರ್ಜುನನಿಗೆ ಕುಡುಬಿಯರೆ ಅರ್ಚಕರಾಗಿದ್ದರು. ಇವರು ಅನ್ಯಜಾತಿಗಳ ಸಂಪರ್ಕದಿಂದ ದೂರವಿರುವವರಾಗಿದ್ದರು.

ಪ್ರತಿಯೊಂದು ಬುಡಕಟ್ಟು ಸಮುದಾಯ ಕೂಡ ತನ್ನ ಆಚರಣೆ ನಡುವಳಿಕೆಗಳಿಗೆ ತಮ್ಮದೇ ಆದ ಅರ್ಥ ಮತ್ತು ವಿವರಣೆಗಳನ್ನು ನೀಡುತ್ತಿರುತ್ತದೆ. ತಮ್ಮ ದೈವಕ್ಕೆ ಕುಡುಬಿ ಸಮುದಾಯದವರೇ ಅರ್ಚಕರಾದ ಬಗ್ಗೆ ವಿವರಣೆಯನ್ನು ಈ ಪುರಾಣದಲ್ಲಿ ಕಾಣಬಹುದಾಗಿದೆ. ಗೋವಾದಲ್ಲಿ ಪೊರ್ಚುಗೀಸರು ಕುಡುಬಿಯರನ್ನು ಬಲತ್ಕಾರದ ಮತಾಂತರಕ್ಕೆ ಪ್ರಚೋದಿಸಿದ ಸಂದರ್ಭದಲ್ಲಿ ಮತಾಂತರಕ್ಕೆ ಒಪ್ಪದೆ ಪ್ರತಿರೊದ ವ್ಯಕ್ತಪಡಿಸುತ್ತಾರೆ. ಪೊರ್ಚುಗೀಸರು ಈ ಸಮುದಾಯದ ದೇವಾಸ್ಥಾನವನ್ನು ಪುಡಿಮಾಡಿ ಲಿಂಗವನ್ನು ಸಮುದ್ರಕ್ಕೆ ಎಸೆದರು. ಕುಡುಬಿಯವರು ಮತಾಂತರಕ್ಕೆ ಹೆದರಿ ಅಲ್ಲಿಂದ ವಲಸೆ ಹೋದರು ಎಂದು ಕ್ಷೇತ್ರಕಾರ್ಯದ ಸಮಯದಲ್ಲಿ ಕುಡುಬಿಯರು ತಮ್ಮ ವಲಸೆ ಕಾರಣವನ್ನು ವಿಷದಪಡಿಸಿದ್ದಾರೆ. ಇದರಿಂದಾಗಿ ಇಲ್ಲಿ ಮುಖ್ಯವಾಗಿ ಗಮನಿಸವುದೇನೆಂದರೆ ಪೊರ್ಚುಗೀಸರ ಭಯ ಮತ್ತು ಬಲತ್ಕಾರದ ಮತಾಂತರ ಹಾಗೂ ಮಲ್ಲಿಕಾರ್ಜುನನಿಗೆ ಗುಡಿಯಿಲ್ಲದಿರುವ ಬಗ್ಗೆ ಸಮರ್ಥನೆಯಾಗಿದೆ.

ಐತಿಹಾಸಿಕವಾಗಿ ಸುಮಾರು ೧೦೫೪-೧೫೪೦ ಪೋರ್ಚುಗೀಸರು ಗೋವಾವನ್ನು ಸ್ವಾಧೀನಪಡಿಸಿಕೊಂಡ ಕಾಲವಾಗಿದೆ. ಈ ಹಿನ್ನೆಲೆಯಲ್ಲಿ ಪೋರ್ಚುಗಿಸರು ಸ್ಥಳೀಯರನ್ನು ಮತಾಂತರಕ್ಕೆ ಬಲತ್ಕರಿಸುತ್ತಿದ್ದರು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ಇತಿಹಾಸವೆ ಕುಡುಬಿಯರಲ್ಲಿ ಪುರಾಣದ ರೂಪವನ್ನು ಪಡೆದುಕೊಂಡಿದೆ. ವಸಹಾತುಶಾಹಿಯ ಹಿನ್ನಲೆಯಿಂದ ಕುಡುಬಿಯರು ಗೋವಾದಿಂದ ಕರ್ನಾಟಕಕ್ಕೆ ವಲಸೆ ಬಂದರು. ಇದರಲ್ಲಿ ಒಂದು ಗುಂಪು ಶರಾವತಿಗೆ ನಿರ್ಮಾಣ ಮಾಡಲಾಗಿರುವ ಲಿಂಗನಮಕ್ಕಿಯಲ್ಲಿ ಬೀಡುಬಿಟ್ಟಿತು. ಆದರೆ ಸುಮಾರು ವರ್ಷಗಳ ನಂತರ ಈ ದೇಶದಲ್ಲಿ ಕೆಳಜಾತಿಗಳು ಮತ್ತು ಬುಡಕಟ್ಟುಗಳ ಬಗ್ಗೆ ಕಾಳಜಿವಹಿಸದ

[illegible]

[illegible]

[illegible]

ಸರ್ಕಾರ ಶರಾವತಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ ಅಲ್ಲಿಂದ ಬೇರೆಡೆಗೆ ಸ್ಥಳಾಂತರ ಮಾಡಿಸಿದರು. ಇದರಿಂದಾಗಿ ಕುಡುಬಿಯರು ತಾವು ವಾಸಿಸಲು ಯೋಗ್ಯವಾದ ನೆಲೆಯನ್ನು ಹುಡುಕುತ್ತಾ ಹೊರಟು ಮೇಘಾನೆಯೆಂಬ ಬೆಟ್ಟದ ತುದಿಯನ್ನು ಸೇರಿದರು. ಆಗ ಅಲ್ಲಿ ಪ್ರಾರಂಭವಾದ ಇವರ ಬದುಕು ಒಂದು ರೀತಿಯ ಶೋಚನೀಯ ಸ್ಥಿತಿಯನ್ನು ಉಂಟುಮಾಡಿತು. ಈ ಹಿನ್ನೆಲೆಯಲ್ಲಿ ಆದಿವಾಸಗಳಾದ ಇವರ ಬದುಕು ಮೇಲೇಳಲು ಆಗಲಿಲ್ಲ. ಇದರಿಂದಾಗಿ ಮೇಘಾನೆಯಲ್ಲಿರುವ ಕುಡುಬಿ ಸಮುದಾಯವನ್ನು ಯಾರು ಗಮನಿಸಿಯೇ ಇಲ್ಲ ಅವರದೇ ಆದ ಸಂಪ್ರದಾಯದಲ್ಲಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಇದರಿಂದಾಗಿ ಇವರು ಅಧ್ಯಯನದ ದೃಷ್ಟಿಯಿಂದ ಬಹಳ ಪ್ರಾಮುಖ್ಯತೆ ಪಡೆದಿದ್ದಾರೆ.

ಕುಡುಬಿಯರು ಅವಿಭಕ್ತ ಕುಟುಂಬವನ್ನು ರಚಿಸಿಕೊಂಡು ನಿಸರ್ಗದಲ್ಲಿ ಸಿಗುವ ಸಲಕರಣೆಗಳನ್ನು ತೆಗೆದುಕೊಂಡು ಮಣ್ಣಿನ ಗೋಡೆಯನ್ನೆ ಮಾಡಿ ಹುಲ್ಲಿನಿಂದ ಮನೆಯ ಮೇಲ್ಛಾವಣಿಯನ್ನು ಮುಚ್ಚುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಂತೆ ಯಾವುದೇ ಬೇದಬಾವವಿಲ್ಲದೆ ಒಂದೇ ತಲೆಮಾರಿನಿಂದ ಕೂಡಿದ ಒಂದೇ ಬಳ್ಳಿಯನ್ನು ಹೊಂದಿರುವ ಅಣ್ಣ-ತಮ್ಮಂದಿರು, ಸ್ತ್ರೀಯರು, ಮತ್ತು ಮಕ್ಕಳು ಜೀವನವನ್ನು ರೂಪಿಸಿಕೊಂಡು ಸಾಮಾಜಿಕ ಬದುಕನ್ನು ಸುಗುಮವಾಗಿ ನಡೆಸುತ್ತಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಂತೆ ಕುಡುಬಿಯರು ತಮ್ಮ ಮನೆಗಳಿಗೆ ದಕ್ಷಿಣ ಭಾಗಕ್ಕೆ ಪ್ರವೇಶದ್ವಾರವನ್ನು ಮಾಡಿಕೊಂಡಿದ್ದಾರೆ. ಪಶ್ಚಿಮ ಭಾಗದಲ್ಲಿ ಮಾತ್ರ ಒಂದು ಹಿಂಬಾಗಿಲು ಇರುತ್ತದೆ. ಪ್ರವೇಶದ್ವಾರದ ಎಡ ಮತ್ತು ಬಲ ಭಾಗಗಳನ್ನು ಮಣ್ಣು ಹಾಕಿ ಎತ್ತರಿಸಿ ಚಾವಡಿಯನ್ನಾಗಿ ಮಾಡಿರುತ್ತಾರೆ. ಪರ ಜಾತಿಯವರಿಗೆ ಚಾವಡಿಯವರೆಗೆ ಮಾತ್ರ ಪ್ರವೇಶವಿರುವುದು. ಚಾವಡಿಯಲ್ಲಿ ಕುಳಿತು ತಮ್ಮ ವ್ಯವಹಾರವನ್ನು ನಡೆಸಬೇಕು. ಕುಡುಬಿ ಸಮುದಾಯದಲ್ಲಿ ಅನ್ಯ ಸಮುದಾಯದವರಿಗೆ ಒಳಗಡೆ ಪ್ರವೇಶವಿಲ್ಲ. ಇವರ ಮನೆಗೆ ಹೊಂದಿಕೊಂಡು ಮನೆಯ ಎಡಗಡೆಯಲ್ಲಿ ಕುಟುಂಬದ ಯಜಮಾನನ ಹಿರಿಮನೆ ಇರುತ್ತದೆ ಈ ಮನೆಯಲ್ಲಿ ದೇವರ ಕೋಣೆ ಮಲಗುವ ಕೋಣೆ ಮತ್ತು ವಿಶಾಲವಾದ ಒಂದು ಕೋಣೆ ಇವಿಷ್ಟು ಇರುತ್ತದೆ. ವಿಶಾಲವಾದ ಕೋಣೆಯಲ್ಲಿ ಧವಸ ಧಾನ್ಯಗಳನ್ನು ಸಂಗ್ರಹಿಸಿಟ್ಟಿರುತ್ತಾರೆ. ಈ ಹಿರಿಯ ಮನೆಯ ಎದುರುಗಡೆ ವಿಶಾಲವಾದ ಅಂಗಳ ಮಧ್ಯೆ ತುಳಸಿಕಟ್ಟೆ ಇರುತ್ತದೆ. ಇವರ ಮನೆಯ ಪಕ್ಕದಲ್ಲಿ ಹಿರಿಮನೆಗೆ ಅಭಿಮುಖವಾಗಿ ಪ್ರವೇಶದ್ವಾರದ ಬಲಗಡೆ ಜಾನುವಾರುಗಳನ್ನು ಕಟ್ಟುವ ಹಟ್ಟಿಯಿರುತ್ತದೆ. ಈ ಹಟ್ಟಿಗೆ ಹೊಂದಿಕೊಂಡ ಒಂದು ಅಡುಗೆ ಮನೆ ಇರುತ್ತದೆ. ಇನ್ನೂಳಿದ ಸೂಕ್ತ ಚಿಕ್ಕ ಚಿಕ್ಕ ಕೋಣೆಗಳನ್ನು ಕುಟುಂಬದ ಸದಸ್ಯರಿಗೆ ಮೀಸಲಿರುತ್ತವೆ. ವಿಶೇಷವೆಂದರೆ ಈ ಕೋಣೆಗಳಿಗೆ ಬಾಗಿಲುಗಳಿರುವುದಿಲ್ಲ. ಆದರೆ ಮುಖ್ಯ ದ್ವಾರಕ್ಕೆ ಬಾಗಿಲು ಇರುತ್ತದೆ. ಅಲ್ಲದೆ ಪ್ರತಿ ಕೋಣೆಯಲ್ಲಿ ಜಗಲಿಗಳಿರುತ್ತವೆ.

ಕುಡುಬಿಯರ ಕುಟುಂಬ ಪದ್ಧತಿ ಮತ್ತು ಮನೆಯ ರಚನೆಗೂ ನೇರವಾದ ಸಂಬಂಧವಿರುವುದು ಸ್ಪಷ್ಟವಿದೆ. ಇಡೀ ಕುಟುಂಬದ ಕೆಲವು ಗೌಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಎರಡು ಬಾಗಿಲುಗಳಿರುತ್ತವೆ.

ಇಲ್ಲಿ ಬೇರೆ ಜಾತಿಯವರಿಗೆ ಪ್ರವೇಶವಿರುವುದಿಲ್ಲ. ಅಪರಿಚಿತರು ಯಾರೇ ಬಂದರು ಮೊದಲು ಯಾಜಮಾನನ್ನು ಮಾತ್ರ ಮಾತನಾಡಿಸಬೇಕು. ಅಲ್ಲದೆ ಇಡೀ ಮನೆಯ ಯಾವುದೇ ಕೆಲಸ ನೆಡಯಬೇಕಾದರೆ ಯಜಮಾನನೇ ನಿರ್ಧರಿಸಬೇಕು. ಯಜಮಾನನ ಕೋಣೆಯು ವಿಶಾಲವಾಗಿರುತ್ತದೆ ಹಾಗೂ ಕುಟುಂಬದ ದೇವರನ್ನು ಪೂಜಿಸುವ ಕೋಣೆ ಯಜಮಾನನ ಕೋಣೆಯಲ್ಲಿರುತ್ತದೆ. ಕುಡುಬಿಯರಲ್ಲಿ ಒಂದು ವಿಶೇಷತೆ ಎಂದರೆ ಊಟದ ನಂತರ ಮನೆಯ ಒಳಗಡೆ ಗೋಮಂತ್ರವನ್ನು (ಗೋಮೂತ್ರ) ಹಾಕಿ ಸಿಂಪಡಿಸಬೇಕೆಂಬ ನಿಯಮವಿದೆ.

ವಕ್ತೃಪ್ರಕಾರ : ಕುಡುಬಿಯರ ಸಾಮಾಜಿಕ ವ್ಯವಸ್ಥೆಯನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಣಪತಿ ಎಂಬ ಯುವಕನ ಪತ್ನಿ ದೇವರ ಕೋಣೆ ಮುಟ್ಟಾದವರಿಗೆ, ಸೂತಕವಿರುವವರಿಗೆ ಪ್ರವೇಶ ನಿಷೇಧ ಎಂಬುದನ್ನು ತಿಳಿಸಿದರು. ಕುಟುಂಬದ ಯಾವುದೇ ಸಾಮಾಜಿಕ, ಧಾರ್ಮಿಕ, ಆಚರಣೆಗಳ ವಿಧಿ ವಿಧಾನಗಳು ಮದುವೆ, ಸಾವು, ಸಂಪ್ರದಾಯ, ಕೌಟುಂಬಿಕ ನ್ಯಾಯಗಳು, ತುಳಸಿಕಟ್ಟೆಯ ಬಳಿಯಲ್ಲಿಯೇ ಯಜಮಾನನ ನೇತೃತ್ವದಲ್ಲಿ ನಡೆಯುತ್ತವೆ. ಕೃಷಿಗೆ ಪ್ರಧಾನವಾಗಿ ಬೇಕಾಗಿರುವ ಜಾನುವಾರುಗಳು ಯಜಮಾನನ ಕಣ್ಣಿಗೆ ಕಾಣುವಂತೆ ಎದುರುಗಡೆಯೇ ಹಟ್ಟಿಯಲ್ಲಿರುತ್ತವೆ. ಕುಟುಂಬದ ಸದಸ್ಯರ ಮೇಲೆ ಗಮನವಿರಿಸಲು ಮತ್ತು ನಿಯಂತ್ರಣವನ್ನು ಹೊಂದಲು ಸಹಾಯಕವಾಗುವಂತೆ ಯಜಮಾನನ್ನು ನೇಮಿಸಲಾಗಿದೆ.

ಕುಡುಬಿಯರ ಸಮುದಾಯದಲ್ಲಿ ಇಡೀ ಕುಟುಂಬಕ್ಕೆ ಒಂದು ಅಡುಗೆ ಮನೆಯಿರುತ್ತದೆ. ಈ ಅಡುಗೆ ಮನೆಯಲ್ಲಿ ಸಾಮೂಹಿಕವಾಗಿ ಅಡುಗೆ ಮಾಡಲಾಗುತ್ತದೆ. ಇವರ ಮನೆಯ ಮುಂದೆ ವಿಶಾಲವಾದ ಕಣ ಇರುವುದನ್ನು ನೋಡಬಹುದು. ಇವರ ಸಾಮಾಜಿಕ ವಿಶೇಷತೆ ಎಂದರೆ ಮನೆಯ ಸುತ್ತ ಬೆಟ್ಟದ ತುದಿಯಿಂದ ಬರುವ ನೀರಿಗೆ ತರಕಾರಿಗಳನ್ನು ಬೆಳೆಯುತ್ತಾರೆ.

ಈ ಸಮುದಾಯದವರು ಗದ್ದೆ ಅಥವಾ ತೋಟಕ್ಕಾಗಿ ಎರಡು ಅಥವಾ ಮೂರು ಕಿ.ಮೀಟರ್ ನಡೆದು ಹೋಗಬೇಕಾಗಿಲ್ಲ ಅದರ ಬದಲಿಗೆ ಮನೆಯ ಸುತ್ತಲು ಗದ್ದೆಗಳು, ತೋಟಗಳು ಇರುವುದನ್ನು ಕಾಣಬಹುದು. ಕ್ಷೇತ್ರಕಾರ್ಯದ ಸಮಯದಲ್ಲಿ ವೀಕ್ಷಿಸಿದಂತೆ ಇವರ ಹೊಲಗದ್ದೆಗಳು ಹಾಗೂ ಮನೆಗಳನ್ನು ಕಾಡು ಅವರಿಸಿಕೊಂಡಿದೆ. ಇವರಲ್ಲಿ ಒಂದೇ ಬಳಿಗೆ ಸೇರಿದವರು ಒಂದೇ ಮನೆಯಲ್ಲಿ ಜೊತೆಗೂಡಿ ಬದುಕುವ ಪರಂಪರೆ ಇದೆ. ಈ ಸಮುದಾಯದಲ್ಲಿ ಜೊತೆಗೂಡಿ ಬದುಕುವುದು ಮತ್ತು ಜೊತೆಗೂಡಿ ದುಡಿಯುವ ಪರಿಪಾಠದಲ್ಲಿ ಸ್ತ್ರೀ ಮತ್ತು ಪುರುಷ ಎಂಬ ಭಿನ್ನ ಭೇದವಿಲ್ಲ. ಈ ಹಿನ್ನಲೆಯಲ್ಲಿ ನೋಡಿದಾಗ ಈ ರೀತಿಯ ಸಾಮಾಜಿಕ ನೆಮ್ಮದಿಯ ಜೀವನವು ಇವರ ಆರ್ಥಿಕ ಭದ್ರತೆಯನ್ನು ಮತ್ತು ರಕ್ಷಣೆಯನ್ನು ಹೆಚ್ಚಿಸುತ್ತದೆ. ಇದರಿಂದಾಗಿ ಬುಡಕಟ್ಟು ಸಮುದಾಯಗಳ ಸಾಮಾಜಿಕ ಬದುಕು ಅವರ ಕೌಟುಂಬಿಕ ಮತ್ತು ಸಾಂಸ್ಕೃತಿಕತೆಯನ್ನು ಕಾಪಾಡುವ ಪ್ರಯತ್ನ ಮಾಡುತ್ತವೆ.

ಬುಡಕಟ್ಟು ಸಮುದಾಯವಾದ ಕುಡುಬಿಯರ ಮೇಲೆ ಆಧುನೀಕರಣದ ಪ್ರಭಾವವಾಗಿದ್ದರೂ ಸಹ

ಅವರು ತಮ್ಮ ಎಲ್ಲಾ ಜೀವನವರ್ತನದ ಆಚರಣೆಗಳು ವಾರ್ಷಿಕ ವರ್ತಮಾನದ ಆಚರಣೆಗಳು, ಹಬ್ಬಗಳು ಅವರ ಮನೆಯ ಮುಂದೆ ಇರುವ ತುಳಿಸಿಕಟ್ಟೆಯ ಮುಂದೆ ನಡೆಯುತ್ತವೆ. ಕುಡುಬಿ ಸಮುದಾಯದವರು ಸಾಕುವ ಪ್ರಾಣಿಗಳೆಂದರೆ:

ಕೋಣ, ಎತ್ತು, ಹಸು, ಎಮ್ಮೆ, ನಾಯಿ

ಈ ರೀತಿಯಾಗಿ ಅನೇಕ ಪ್ರಾಣಿಗಳನ್ನು ಸಾಕುವುದರ ಜೊತೆಗೆ ಇವುಗಳಿಗೆ ಮೇಲೆ ಹೇಳಿದಂತೆ ಪ್ರತ್ಯೇಕವಾದ ಕೋಠಡಿಗಳಿರುತ್ತವೆ. ಹೀಗೆ ಆದಿವಾಸಿ ಸಮುದಾಯವಾದ ಕುಡುಬಿ ಸಮುದಾಯವು ಬದುಕಿನ ಸಂದರ್ಭದಲ್ಲಿ ತಮ್ಮ ಮಿತಿಗಳಿಗೆ ಅನುಗುಣವಾಗಿ ಜೀವನವನ್ನು ಮಾಡುವಂತಹ ಬುಡಕಟ್ಟಾಗಿದೆ. ಈ ಸಮುದಾಯ ನಾಯಿಯನ್ನು ಒಂದು ಮನೆಗೆ ಎರೆಡರಂತೆ ಸಾಕುತ್ತಾರೆ. ಇದರ ವಿಶಿಷ್ಟತೆಯೆಂದರೆ ರಾತ್ರಿಯ ಸಮಯದಲ್ಲಿ ಕಾಡು ಹಂದಿಗಳು, ಕಳ್ಳರು, ಹುಲಿ, ಕರಡಿ, ಸಿಂಹ ಈ ತರಹದ ಪ್ರಾಣಿಗಳಿಗೆ ತಮ್ಮನ್ನು ರಕ್ಷಿಸಿಕೊಳ್ಳಲು ಹಾಗೂ ತಮ್ಮ ಮನೆಯನ್ನು ಕಾಯಲು ನಾಯಿಗಳನ್ನು ತಮ್ಮ ಮಕ್ಕಳಂತೆ ಸಾಕುತ್ತಾರೆ. ಇದಕ್ಕೆ ಪ್ರತಿಯಾಗಿ ನಾಯಿಗಳು ಸಹ ಅಷ್ಟೇ ಪ್ರಮಾಣಿಕತೆಯಿಂದ ಇರುತ್ತವೆ.

೨.೨. ಕುಡುಬಿ ಸಮುದಾಯದವರ ಭಾಷೆ

ಬುಡಕಟ್ಟು ಸಮುದಾಯಗಳಲ್ಲಿ ಪಶ್ಚಿಮದ ಘಟ್ಟಗಳಲ್ಲಿ ಕತ್ತಲೆಯ ಪ್ರಪಂಚದಲ್ಲಿ ಆದಿವಾಸಿ ಸಮುದಾಯಗಳೆಂದು ಗುರುತಿಸಿಕೊಂಡು ಒಮ್ಮೆ ಕತ್ತಲಿನಂತೆ ಮತ್ತೊಮ್ಮೆ ಬೆಳಕಿನಂತೆ ಜೀವನವನ್ನು ನಡೆಸುವ ಕುಡುಬಿ ಸಮುದಾಯ ಇತರೆ ಬುಡಕಟ್ಟು ಸಮುದಾಯಗಳಂತೆ ತನ್ನದೇ ಆದ ವಿಶಿಷ್ಟ ಭಾಷೆಯನ್ನು ರೂಢಿಸಿಕೊಂಡು ಬಂದಿದೆ. ಪ್ರಪಂಚದಲ್ಲಿ ಯಾವುದೇ ಬುಡಕಟ್ಟುಗಳನ್ನು ಅಧ್ಯಯನ ಮಾಡಿದರೆ ಮೊದಲು ಗುರುತಿಸುವುದು ಅವರ ವಿಶಿಷ್ಟ ಭಾಷೆ. ಈ ಹಿನ್ನಲೆಯಲ್ಲಿ ಕುಡುಬಿ ಸಮುದಾಯವು ಸಹ ತನ್ನದೇಯಾದ ಒಂದು ಭಾಷೆಯನ್ನು ಮೈಗೂಡಿಸಿಕೊಂಡಿದೆ. ಭಾಷೆಯ ದೃಷ್ಟಿಯಿಂದ ಕುಡುಬಿ ಅಥವಾ ಕುಡುಬಿ ಪದದ ಅರ್ಥವನ್ನು ನೋಡುವುದಾದರೆ ಒಕ್ಕಲುತನ ಎಂದು ಕುಣಬಿಯೆಂದರೆ ಮರಾಠಿಯಲ್ಲಿ ರೈತ ಎಂದು ಅರ್ಥ ಕಲ್ಪಿಸಬಹುದಾಗಿದೆ. ಈ ರೀತಿಯಾಗಿ ಅವರು ಸಮುದಾಯದ ಅರ್ಥವನ್ನು ಹೊಂದಿಕೊಂಡು ಈಗಲೂ ಸಹ ಒಕ್ಕಲುತನವನೇ ಮಾಡುತ್ತಿದ್ದಾರೆ.

ಕುಡುಬಿ ಸಮುದಾಯ ಇಂಡೋ ಆರ್ಯನ್ ಭಾಷಾ ಸಮುದಾಯಕ್ಕೆ ಸೇರಿದ ಕೊಂಕಣಿ ಕುಡುಬಿಯರ ಮಾತೃಭಾಷೆಯಾಗಿದೆ. ಶಿವಮೊಗ್ಗದ ಸಾಗರ ತಾಲೂಕಿನ ಮೇಘಾನೆಯಲ್ಲಿರುವ ಕುಡುಬಿಯರು ಕನ್ನಡ, ಮರಾಠಿ, ತುಳು ಮತ್ತು ಕೊಂಕಣಿ ಮಿಶ್ರಿತ ಭಾಷೆಯನ್ನು ಮಾತಾನಾಡುತ್ತಾರೆ. ಅದರೆ ಇತರೆಯವರ ಜೊತೆ ವ್ಯವಹಾರದ ದೃಷ್ಟಿಯಿಂದ ಮರಾಠಿ, ತುಳು, ಕನ್ನಡದಲ್ಲಿ ಮಾತನಾಡುತ್ತಾರೆ.

ಕುಡುಬಿಯರು ಹೆಚ್ಚಾಗಿ ಕುಂದಾಪುರ, ಶಿವಮೊಗ್ಗ, ಭಟ್ಕಳ, ಉತ್ತರ ಕನ್ನಡ, ಚಿಕ್ಕಮಂಗಳೂರು, ದಕ್ಷಿಣ ಕನ್ನಡ ಹಾಗೂ ಭಟ್ಕಳ ಕಾಡಿನ ಇಳಿಜಾರಿನಲ್ಲಿಯೇ ವಾಸವಾಗಿರುವುದನ್ನು ನೋಡಬಹುದಾಗಿದೆ.

ಇದರಿಂದಾಗಿ ಕುಡುಬಿಯರ ಭಾಷೆಯ ಮೇಲೆ ಕನ್ನಡ, ಮರಾಠಿ ಮತ್ತು ತುಳು ಬಾಷೆಗಳ ಪ್ರಭಾವ ಬೀರಿವೆ. ಈ ಭಾಷೆಗಳ ಪ್ರಭಾವ ಕುಡುಬಿಯರ ಹಾಡುಗಳ ಮೇಲೂ ಆಗಿದೆ ಇದಕ್ಕೆ ಸಾಕ್ಷಿಯಾಗಿ ೭೪ ವರ್ಷದ ಗಣೇಶಜ್ಜ ಹೇಳುವಂತೆ ೫ ದಿನ ರಾತ್ರಿ ೫ ದಿನ ಹಗಲು ರಾಮಾಯಾಣ ಹಾಗೂ ಮಹಾಭಾರತವನ್ನು ನಿರಂತರವಾಗಿ ತಮ್ಮ ಭಾಷೆಯಲ್ಲಿ ಹಾಡುವ ಕಲೆಯನ್ನು ಹೊಂದಿದ್ದಾನೆ. ಈ ರೀತಿಯ ವಿಶಿಷ್ಟ ಭಾಷೆಯನ್ನು ಹೊಂದಿರುವುದರಿಂದ ಮೇಘಾನೆ ಮತ್ತು ಬಚ್ಚೋಡಿಯಲ್ಲಿರುವ ಕುಡುಬಿಯರನ್ನು ಇತರೆ ಜನರು ಸೇರುವುದಿಲ್ಲ.

೨.೩ ಕುಡುಬಿಯರ ಆಹಾರ ಸೇವನೆ

ಕರ್ನಾಟಕ ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಕುಡುಬಿ ಸಮುದಾಯವು ಆದಿವಾಸಿ ಸಮುದಾಯಗಳಲ್ಲಿ ಭಿನ್ನವಾದ ರೀತಿಯ ಆಹಾರ ಪದ್ಧತಿಯನ್ನು ರೂಢಿಸಿಕೊಂಡಿದೆ. ಕಾಡಿನಲ್ಲಿಯೇ ತನ್ನ ಜೀವನವನ್ನು ಪ್ರಾರಂಭಿಸಿರುವ ಕುಡುಬಿಯರು ಇತರ ಬುಡಕಟ್ಟು ಸಮುದಾಯಗಳಾದ ಸೋಲಿಗರು, ಸಿದ್ಧಿಗಳು, ಗೌಳಿಗರು, ಹಕ್ಕಿಪಿಕ್ಕಿಯರು, ಗೋಸಂಗಿಗಳು, ದುರುಗಮುರುಗಿಯವರು, ಗೊಂಡರು ಮುಂತಾದ ಸಮುದಾಯಗಳಿಗಿಂತ ಭಿನ್ನವಾದ ರೀತಿಯಲ್ಲೆ ಆಹಾರವನ್ನು ಸೇವಿಸುತ್ತಾರೆ. ಜಾಗತೀಕರಣ ಮತ್ತು ವಸಹಾತುಶಾಹಿಯ ಹಿನ್ನೆಲೆಯಲ್ಲಿ ಕೆಲವು ಬುಡಕಟ್ಟು ಸಮುದಾಯಗಳು ಉಳುಮೆ ಮಾಡಲು ಭೂಮಿಯೆ ಇಲ್ಲದೆ ತಮ್ಮ ಜೀವನಕ್ಕಾಗಿ ಅನೇಕ ವೃತ್ತಿಗಳನ್ನು ಅವಲಂಬಿಸಿಕೊಂಡಿವೆ. ಆದರೆ ಒಂದು ಕಾಲದಲ್ಲಿ ಗಡ್ಡೆಗೆಣಸು, ಹಣ್ಣುಗಳನ್ನು ತಿಂದು ಬದುಕುತ್ತಿದ್ದ ಈ ಸಮುದಾಯ ಇಂದು ಕಾಡಿನಲ್ಲಿ ಭೂಮಿಯನ್ನು ಉಳುಮೆ ಮಾಡಿ ಕೃಷಿಯನ್ನು ಜೀವನದ ವೃತ್ತಿಯಾಗಿ ರೂಪಿಸಿಕೊಂಡು ಭತ್ತವನ್ನು ಬೆಳೆಯುತ್ತಿದ್ದುರಿಂದ ಅವರ ಮುಖ್ಯವಾದ ಆಹಾರ ಅಕ್ಕಿಯಾಗಿದೆ.

ಕುಡುಬಿಯರು ಸಸ್ಯ ಮತ್ತು ಮಾಂಸಹಾರಿಯ ಆಹಾರವನ್ನು ರೂಢಿಸಿಕೊಂಡಿದ್ದು ಮಾಂಸಹಾರದಲ್ಲಿ ನಿಯಮವೊಂದನ್ನು ಕಡ್ಡಾಯವಾಗಿ ಪಾಲಿಸುತ್ತಾರೆ. ಇವರು ಕಾಡಿನಲ್ಲಿಯೇ ಬದುಕುವ ಬುಡಕಟ್ಟು ಸಮುದಾಯವಾಗಿರುವುದರಿಂದ ಕಾಡಿನಲ್ಲಿ ಸಿಗುವ ಪ್ರಾಣಿ, ಪಕ್ಷಿಗಳನ್ನು ಮಾತ್ರ ಆಹಾರವಾಗಿ ಬಳಸುವ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಸಾಕು ಪ್ರಾಣಿಗಳಾದ ಕುರಿ, ಆಡು, ದನ, ಊರ ಹಂದಿ ಮತ್ತು ಊರ ಕೋಳಿಗಳ ಮಂಗಗಳ ಮಾಂಸಗಳಿಗೆ ನಿಷೆಧವಿದೆ. ನವಿಲಿನ ಮಾಂಸವನ್ನು ಸಹ ನಿಷೇಧಿಸಿದ್ದಾರೆ. ಆದರೆ ಬೇಟೆಯ ಸಮಯದಲ್ಲಿ ಏನಾದರು ನವಿಲು ಸಿಕ್ಕರೆ ಬೇಟೆಯಾಡುವುದಿಲ್ಲ. ಒಂದು ಪಕ್ಷ ಬೇಟೆಯಾದರೆ ಆ ಸಮಯದಲ್ಲಿ ಮಾಂಸವನ್ನು ತಿನ್ನಬಹುದು ಎಂದು ಹೇಳುತ್ತಾರೆ. ಕುಡುಬಿಯರಿಗೆ ಆಹಾರದ ದೃಷ್ಟಿಯಿಂದ ಕಾಡುಹಂದಿಯ ಮಾಂಸ ಪ್ರಿಯವಾದ ಆಹಾರವಾಗಿದೆ. ಪ್ರತಿ ಮನೆಯ ಸುತ್ತ ಮುತ್ತ ಹಾಗೂ ತಮ್ಮ ಹೊಲಗಳ ಸುತ್ತ ಸಾಂಪ್ರದಾಯಿಕವಾಗಿ ಹಂದಿ ಬೇಟೆಯಾಡುವ ದೃಷ್ಟಿಯಿಂದ ಉರುಳುಗಳನ್ನು ಬಿಡುತ್ತಾರೆ. ಈ ರೀತಿಯಾಗಿ ಸಾಂಪ್ರದಾಯಿಕ ಬೇಟೆಯು ಎರಡು ರೀತಿಯಲ್ಲಿ ಕುಡುಬಿಯರಿಗೆ ಉಪಯೋಗವಾಗುತ್ತದೆ. ಉರುಳುಗಳಲ್ಲಿ ಬಿದ್ದ ಹಂದಿಯನ್ನು ಊಟಕ್ಕೆ ಬಳಸುತ್ತಾರೆ. ಈ ಸಮುದಾಯದವರು

ಹಂದಿಗಳು ಬರುವ ಜಾಡನ್ನು ಗುರುತಿಸಿಕೊಂಡು ಆ ದಾರಿಯಲ್ಲಿ ಮರದ ತುಂಡುಗಳಿಂದ ಉರುಳನ್ನು ತಯಾರಿಸುತ್ತಾರೆ ಹಾಗೂ ಈ ಮರದ ತುಂಡುಗಳ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನು ಇಟ್ಟಿರುತ್ತಾರೆ. ಹಂದಿಗಳು ಈ ಉರುಳಿನ ಒಳಗಡೆಯಿಂದ ನುಸುಳಿ ಬರುವಾಗ ಮರ ಮತ್ತು ಕಲ್ಲುಗಳು ಏಕಕಾಲದಲ್ಲಿ ಹಂದಿಗಳ ಮೇಲೆ ಕುಸಿಯುತ್ತವೆ ಮತ್ತು ದಾರಿಗಳು ಮುಚ್ಚುತ್ತವೆ. ಇದರ ಪರಿಣಾಮವಾಗಿ ಹಂದಿಗಳು ಬಿದ್ದ ಸೂಕ್ಷ್ಮವನ್ನು ತಿಳಿದ ತಕ್ಷಣ ಬಿದುರುಗಳಿಂದ ಮಾಡಿದ ಕೆಲವು ಚೂಪಾನೆಯ ಬರ್ಚಿಯಿಂದ ಹಂದಿಯನ್ನು ಕೊಲ್ಲುತ್ತಾರೆ. ನಂತರ ಹಂದಿಯನ್ನು ಊಟಕ್ಕೆ ಬಳಸುತ್ತಾರೆ.

ಕುಡುಬಿಯರಲ್ಲಿ ಯಾರಾದರು ಕೋಳಿಯನ್ನು ತಿಂದರೆ ಸಮುದಾಯದ ನಿಷೇಧಕ್ಕೆ ಒಳಗಾಗುತ್ತಾರೆ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ ಬಂದಿರುವುದನ್ನು ನೋಡಬಹುದಾಗಿದೆ. ಕುಡುಬಿಯರು ಮೀನಿನ ಅಡುಗೆಯನ್ನು ಮನೆಯ ಹೊರಗಡೆ ಮಾಡಿ ಊಟ ಮಾಡುತ್ತಾರೆ.

ಸಸ್ಯಹಾರ ಪದ್ಧತಿ : ಕೃಷಿಯಾಧಾರಿತ ಕಸುಬನ್ನು ರೂಢಿಸಿಕೊಂಡಿರುವ ಕುಡುಬಿಯರು ತಮ್ಮ ಹೊಲಗದ್ದೆಗಳಲ್ಲಿ ಹಾಗೂ ತಮ್ಮ ಮನೆಯ ಹಿಂದೆ ಅನೇಕ ರೀತಿಯ ತರಕಾರಿಗಳನ್ನು ಬೆಳೆಯುತ್ತಾರೆ. ಇವರು ಊಟಕ್ಕೆ ಬಳಸುವ ತರಕಾರಿಗಳೆಂದರೆ ಮೂಲಂಗಿ, ಮೆಣಸಿನಕಾಯಿ, ಗೆಣಸು, ಬದನೆಕಾಯಿ, ಈರುಳ್ಳಿ, ಟಮೊಟೋ ಮುಂತಾದ ಸಸ್ಯಹಾರಿಯಾಧಾರಿತ ತರಕಾರಿಗಳನ್ನು ಆಹಾರಕ್ಕೆ ಬಳುಸತ್ತಾರೆ.

೨.೪ ಕುಡುಬಿಯರ ಕುಟುಂಬ ವ್ಯವಸ್ಥೆ

ಕುಟುಂಬವನ್ನು ಇಂಗ್ಲೀಷ್‌ನಲ್ಲಿ ಫ್ಯಾಮಿಲಿ ಎನ್ನುತ್ತಾರೆ. ಫ್ಯಾಮಿಲಿ ಎಂಬುದು ಫ್ಯಾಯಾಲಸ್ ಎಂಬ ಲ್ಯಾಟಿನ್ ಶಬ್ದದಿಂದ ನಿಷ್ಪನ್ನಗೊಂಡಿದೆ. ಫ್ಯಾಮುಲಸ್ ಎಂದರೆ ಆಳು ಎಂದರ್ಥ ಇದರಿಂದಾಗಿ ಪ್ರಾಚೀನ ಕಾಲದ ಕುಟುಂಬದಲ್ಲಿ ಪತ್ನಿ ಮತ್ತು ಮಕ್ಕಳಲ್ಲದೆ ಆಳುಗಳು ಗುಲಾಮರು ಇದ್ದಾರೆಂಬ ವಿಚಾರ ವ್ಯಕ್ತವಾಗುತ್ತದೆ. ಕುಡುಬಿಯರ ಸಾಮಾಜಿಕ ಸ್ಥಾನಮಾನಗಳನ್ನು ನೋಡಿದರೆ ಅವರ ಹಾಡಿಯನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವಲೋಕಿಸಿದಂತೆ ಈ ಸಮುದಾಯ ಪಿತೃಪ್ರಧಾನ ವ್ಯವಸ್ಥೆಯನ್ನು ಹೊಂದಿರುವ ಬುಡಕಟ್ಟಾಗಿದೆ. ಕುಡುಬಿಯರಲ್ಲಿ ಶೇಕಡ ೭೫ರಷ್ಟು ಭಾಗ ಅವಿಭಕ್ತ ಕುಟುಂಬ ವ್ಯವಸ್ಥೆ ಕಂಡುಬರುತ್ತದೆ. ಆದರೆ ಇತ್ತೀಚಿಗೆ ಅವಿಭಕ್ತ ಕುಟುಂಬಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಪಿತೃಪ್ರಧಾನ ವ್ಯವಸ್ಥೆಯಿಂದ ಕೂಡಿರುವ ಕುಡುಬಿ ಸಮುದಾಯದಲ್ಲಿ ಏಕಪತ್ನಿತ್ವ ಪದ್ಧತಿ ಜಾರಿಯಲ್ಲಿದೆ. ಈ ಸಮುದಾಯದಲ್ಲಿ ಕುಟುಂಬದ ಯಜಮಾನ ಮನೆಯ ಹಿರಿಯ ವ್ಯಕ್ತಿಯಾಗಿರುತ್ತಾನೆ. ಕ್ಷೇತ್ರಕಾರ್ಯದ ಸಮಯದಲ್ಲಿ ಗಮನಕ್ಕೆ ಬಂದಂತೆ ಮೇಘಾನೆ ಮತ್ತು ಬಚ್ಚೋಡಿಯಲ್ಲಿ ಗಣೇಶಜ್ಜನನ್ನು ಹೊರತು ಪಡಿಸಿದರೆ ಬೇರೆಯವರು ಎರಡು ಜನ ಸ್ತ್ರೀಯರನ್ನು ಮದುವೆಯಾದದ್ದು ಕಂಡುಬರುವುದಿಲ್ಲ.

ಕುಟುಂಬ ಪದ್ಧತಿಯ ಬಗ್ಗೆ ಮಾನವಶಾಸ್ತ್ರಜ್ಞರು ಗುರುತಿಸಿರುವ ಹಾಗೂ ಪ್ರಾಚೀನ ಕಾಲದಿಂದಲು ರೂಢಿಯಲ್ಲಿರುವ ಕುಟುಂಬ ವ್ಯವಸ್ಥೆಯನ್ನು ಅವಲೋಕಿಸಿದಾಗ ಪಿತೃಪ್ರದಾನ ಕುಟುಂಬ ಮತ್ತು ಮಾತೃಪ್ರಧಾನ

ಕುಟುಂಬ ವ್ಯವಸ್ಥೆಯು ನಮ್ಮ ಗಮನಕ್ಕೆ ಬರುತ್ತದೆ. ಅಲ್ಲದೆ ಸ್ತ್ರೀ ಪುರುಷರ ಸಮ್ಮಿಲನವನ್ನು ಶಾಸ್ತ್ರೋಕ್ತವಾಗಿ ಅಂಗೀಕರಿಸಿ ಪುರೋಭಿವೃದ್ಧಿಗು ವಂಶವೃದ್ಧಿಗೂ ಅವಕಾಶ ಕಲ್ಪಿಸಿಕೊಡುವ ವಿವಾಹವನ್ನು ಆಧಾರವಾಗಿಟ್ಟುಕೊಂಡು ಕುಟುಂಬಗಳು ರಚಿತವಾಗಿರುವುದನ್ನು ನೋಡಬಹುದು. ಪ್ರಪಂಚದ ಬುಡಕಟ್ಟುಗಳ ಬದುಕನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲಿ ಆದಿವಾಸಿ ಸಮೂಹಗಳಲ್ಲಿ ಕುಟುಂಬ ವ್ಯವಸ್ಥೆಯು ಪ್ರಾಮುಖ್ಯತೆಯನ್ನು ಪಡೆದಿದೆ. ಒಂದು ಕಡೆ ಮಾರ್ಗನ್‌ರವರು ಪ್ರಾಚೀನ ಆದಿವಾಸಿ ಸಮುದಾಯಗಳಲ್ಲಿ ಸ್ವೇಚ್ಛಾ ಸಂಭೋಗವಿದ್ದಿತೆಂದು ಆ ಕಾರಣದಿಂದ ಕುಟುಂಬ ವ್ಯವಸ್ಥೆಗೆ ಅವಕಾಶವಿರಲಿಲ್ಲವೆಂದು ತಿಳಿಸುತ್ತಾರೆ. ಇದರ ಅರ್ಥ ಆಗಿನ ಕಾಲದಲ್ಲಿ ರೂಢಿಯಲ್ಲಿದ್ದ ಗುಂಪು ವಿವಾಹ ಎಂದಾಗುತ್ತದೆ.

ಇಂದು ಕುಟುಂಬಗಳಲ್ಲಿ ಹೆಂಡತಿ ಮತ್ತು ಗಂಡ ಮಾತ್ರ ಇರುವ ಕುಟುಂಬಗಳು ಹಾಗೂ ಮಕ್ಕಳೇ ಇಲ್ಲದೆ ಬೇರೆಯವರ ಮಕ್ಕಳನ್ನು ದತ್ತು ತೆಗೆದುಕೊಳ್ಳುವಂತ ಅನೇಕ ಸಂಗತಿಗಳು ಉದಾಹರಣೆಗಳಾಗಿವೆ. ಆಗಬರ್ನ್ ಮತ್ತು ನೀಮ್ಕಾಫ್‌ರವರ ಅಭಿಪ್ರಾಯದಂತೆ ಕುಟುಂಬದ ಸದಸ್ಯರ ಸಂಬಂಧವು ಅವರು ಒಂದೇ ರಕ್ತ ಸಂಬಂಧ ಹೊಂದಿರುವ ಆಧಾರದ ಮೇಲೆ ನಿರ್ಧರಿತವಾಗುತ್ತದೆ ಎಂದಿದ್ದಾರೆ.

ಕುಡುಬಿಯರ ಸಮುದಾಯದಲ್ಲಿ ಮನೆಯ ಹಿರಿಯನೇ ಇಡೀ ಕುಟುಂಬದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಆಚರಣೆಗಳನ್ನು ನಿಯಂತ್ರಿಸುವನಾಗಿರುತ್ತಾನೆ. ಅಲ್ಲದೆ ಯಾವುದೇ ಹಬ್ಬ, ಮದುವೆ ಮುಂತಾದ ಶುಭಕಾರ್ಯಗಳಿಗೆ ಮನೆಮಂದಿಗೆಲ್ಲ ಬಟ್ಟೆ ಆಭರಣಗಳನ್ನು ತರುವಂತ ಅಧಿಕಾರ ಮನೆಯ ಹಿರಿಯರಿಗಿರುತ್ತದೆ. ಮಗನಿಗೆ ಹೆಣ್ಣು ಹುಡುಕುವ ಮತ್ತು ಮಗಳಿಗೆ ಗಂಡು ಹುಡುಕಿ ಮದುವೆ ಮಾಡುವ ಅಧಿಕಾರ ಹೊಂದಿರುತ್ತಾನೆ. ಅಸ್ತಿಯ ಹಕ್ಕು ಸಮಾನ್ಯವಾಗಿ ತಂದೆಯ ನಂತರ ಮನೆಯ ಹಿರಿಯ ಗಂಡು ಮಗನಿಗೆ ಬರುತ್ತದೆ. ತಂದೆಯ ನಂತರ ಅವನ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನಡೆಸಿಕೊಂಡು ಹೋಗುತ್ತಾನೆ. ಇದಕ್ಕೆ ಎಲ್ಲಾರು ನಡೆದುಕೊಳ್ಳುತ್ತಾರೆ. ಈ ಸಮುದಾಯದಲ್ಲಿ ಮಗನಿಗೆ ಮದುವೆ ಮಾಡಿಕೊಂಡು ಬಂದ ನಂತರ ಪ್ರಸ್ಥವು ಕೂಡ ತಂದೆಯ ಅನುಮತಿಯ ಮೇರೆಗೆ ನಡೆಯುತ್ತದೆ. ಹೀಗೆ ಕುಡುಬಿಯರ ಕುಟುಂಬ ವ್ಯವಸ್ಥೆಯು ಒಂದೇ ಬಳಿಯನ್ನು ಹೊಂದಿದವರೆಲ್ಲರು ಒಟ್ಟಿಗೆ ವಾಸಿಸಲು ನೇರವಾಗಿದೆ. ಕುಡುಬಿಯರಲ್ಲಿ ಸ್ತ್ರೀಯರು ಪುರುಷರಂತೆ ಹೊಲಗದ್ದೆ, ತೋಟಗಳಲ್ಲಿ ಮನೆಯಲ್ಲಿ ಶ್ರಮಜೀವಿಗಳಾಗಿ ದುಡಿಯುತ್ತ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೊರುತ್ತಾರೆ. ಇಲ್ಲಿ ಸ್ತ್ರೀಯರಿಗೆ ವಿಶೇಷವಾದ ಯಾವುದೇ ಸ್ಥಾನವಿಲ್ಲ. ಬದಲಿಗೆ ಸಮಾನವಾದ ವ್ಯವಸ್ಥೆಯಿದೆ. ಆದರೆ ಪತಿಯ ಮತ್ತು ಮನೆಯವರೆಲ್ಲರ ಊಟವಾದ ಮೇಲೆಯೇ ಸ್ತ್ರೀಯರು ಊಟ ಮಾಡುತ್ತಾರೆ. ಇದರಿಂದಾಗಿ ತಿಳಿಯುವುದೇನೆಂದರೆ ಪ್ರಾಚೀನ ಕಾಲದ ಸಂಸ್ಕೃತಿ ಅಥವಾ ವ್ಯವಸ್ಥೆ ಏನಾದರು ಉಳಿದುಕೊಂಡಿದೆ ಎಂದರೆ ಅದು ಬುಡಕಟ್ಟು ಸಮುದಾಯಗಳಲ್ಲಿ ಮಾತ್ರ ಎಂಬುದು ಮಕ್ಕಳ ಪಾಲನೆ, ಪೋಷಣೆಯಲ್ಲಿ ಸ್ತ್ರೀಯರು ಪ್ರಧಾನವಾದ ಪಾತ್ರವಹಿಸುತ್ತಾರೆ. ಕುಡುಬಿಯರಲ್ಲಿ ಹೊಲಕ್ಕೆ ಬೀಜಗಳನ್ನು ಬಿತ್ತುವುದು ಅಥವಾ ಸಸಿ ನಡೆವ ಪದ್ಧತಿ ಅವಿಭಕ್ತ ಕುಟುಂಬದಲ್ಲಿ ಹೆಚ್ಚು ಮಂದಿ ಅಣ್ಣ ತಮ್ಮಂದಿರು ಇದ್ದಲ್ಲಿ ಅವರ ಪೈಕಿ ಹಿರಿಯವನು ಮೊದಲು ಸಸಿ ನಡೆಬೇಕು ಅನಂತರವೇ ಮನೆಯ

[illegible]

[illegible]

[illegible]

ಕಿರಯವರು ಸಸಿ ನಡೆಬಹುದಾಗಿದೆ. ಈ ರೀತಿ ಭೀನ್ನವಾದ ಕುಟುಂಬ ವ್ಯವಸ್ಥೆ ಕುಡುಬಿಯರಲ್ಲಿ ಕಾಣಬಹುದು.

೨.೫ ಕುಡುಬಿಯರ ನ್ಯಾಯಪದ್ಧತಿ

ಕುಡುಬಿ ಸಮುದಾಯದಲ್ಲಿ ಕುಟುಂಬ ಮಟ್ಟದ ತೀರ್ಮಾನಗಳನ್ನು ಕುಟುಂಬದ ಯಜಮಾನನೇ ಮಾಡುತ್ತಾನೆ. ಜೋತೆಗೆ ಕುಟುಂಬದ ಯಾವದೇ ತಿರ್ಮಾನಗಳನ್ನು ಅವನೇ ತೆಗೆದುಕೊಳ್ಳುತ್ತಾನೆ. ಆದರೆ ಕುಡುಬಿ ಸಮುದಾಯವು ಆಧುನೀಕರಣದ ರೀತಿಯ ರಕ್ಷಣೆ ಇಲಾಖೆಯ ತೀರ್ಮಾನಗಳನ್ನು ಒಪ್ಪುವುದಿಲ್ಲ ಪೋಲಿಸ್ ಎಂಬ ಪದದ ಬಗ್ಗೆ ಅರಿವೇ ಇಲ್ಲ. ಇದರಿಂದಾಗಿ ಪ್ರಚೀನಕಾಲದಿಂದ ಬಂದ ಗ್ರಾಮದ ನ್ಯಾಯಪದ್ಧತಿಯನ್ನು ರೂಢಿಸಿಕೊಂಡು ಬಂದಿದೆ. ಇದರಂತೆ ಇಡೀ ಸಮುದಾಯಕ್ಕೆ ಸಂಬಂಧಿಸಿದ ನ್ಯಾಯಗಳಿದ್ದರೆ ಮೂರು ಜನರ ಸಮ್ಮುಖದಲ್ಲಿ ಹಾಗೂ ಇಡೀ ಹಾಡಿಯ ಜನರ ಮುಂದೆ ಪರಿಹರಿಸಿಕೊಳ್ಳುತ್ತಾರೆ. ಹಾಡಿಯಲ್ಲಿಯೇ ಹಿರಿಯರು ಹಾಗೂ ಅವರಲ್ಲಿಯೇ ಸ್ವಲ್ಪ ಮಟ್ಟಿಗೆ ಬುದ್ಧಿವಂತಿಕೆ ಇರುವಂತವರನ್ನು ಮುಖಂಡರಾಗಿ ಮಾಡಿರುತ್ತಾರೆ. ಇವರನ್ನು ಆಯ್ಕೆ ಮಾಡುವ ಹಕ್ಕು ಇಡೀ ಹಾಡಿಯ ಜನರಿಗೆ ಇರುತ್ತದೆ. ಈ ಮೂರು ಜನರು ಕಲ್ಲಿನ ಮೇಲೆ ಕುಳಿತು ಕುಡುಬಿಯರ ಅಂತರಿಕ ಕಲಹಗಳು ಅಥವಾ ಹಬ್ಬಕ್ಕೆ ಸಂಬಂಧಿಸಿದ ಕಲಹಗಳು, ಅಕ್ರಮಸಂಬಂಧಿ ಕಲಹಗಳು, ಅನೈತಿಕತೆಯಿಂದ ಕೂಡಿದ ಕಲಹಗಳು ಮುಂತಾದವುಗಳ ಬಗ್ಗೆ ಸಮಾನ್ಯವಾಗಿ ಪಂಚಾಯಿತಿಯನ್ನು ಸೇರಿಸಿ ತೀರ್ಮಾನಗಳನ್ನು ದಂಡದ ರೂಪದಲ್ಲಿ, ಬಹೀಷ್ಕಾರದ ರೂಪದಲ್ಲಿ ಕೊಡುತ್ತಾರೆ. ಅಕ್ರಮದಿಂದ ಗರ್ಭೀಣಿಯಾದ ಸ್ತ್ರೀಯರಿಗೆ ಬುಡಕಟ್ಟನಿಂದಲೇ ಬಹೀಷ್ಕಾರ ಹಾಕುವ ಪದ್ಧತಿ ಇದೆ. ಕುಡುಬಿಯರ ಸಮುದಾಯದಲ್ಲಿ ಅನೈತಿಕ ಸಂಬಂಧವನ್ನು ಇರಿಸಿಕೊಂಡಿದ್ದ ಕಾರಣಕ್ಕಾಗಿ ಗಂಡಿಗೂ ಬಹಿಷ್ಕಾರವನ್ನು ಹಾಕುತ್ತಾರೆ. ಇಲ್ಲಿ ಗಂಡ ಸತ್ತ ನಂತರ ವಿಧುವೆಯು ಗರ್ಭಿಣಿಯಾದರೆ ಅವಳನ್ನು ಸಮುದಾಯದಿಂದ ಬಹೀಷ್ಕಾರ ವಿಧಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಕುಡುಬಿಯರಲ್ಲಿ ವಿಧುವೆಗೆ ಮರು ಮದುವೆಗೆ ಅವಕಾಶವಿಲ್ಲ. ಆದರೆ ಪುರುಷನಿಗೆ ಮರು ಮದುವೆಗೆ ಅವಕಾಶವಿದೆ. ಇಲ್ಲಿ ಮಹಿಳೆಯರು ಪುರುಷರು ಹೇಳಿದಂತೆ ಪತಿಯೇ ದೇವರು, ಪತಿಯೇ ಸರ್ವಸ್ವ ಎಂದು ಒಪ್ಪಿಕೊಂಡು ಬದುಕುವ ಹಿನ್ನೆಲೆಯಲ್ಲಿ ಸ್ತ್ರೀಯರಿಗೆ ಸ್ಥಾನಮಾನಗಳಿವೆ. ಆದರೆ ಮಕ್ಕಳಿಗೆ ಯಾವುದೇ ರೀತಿ ನಿರ್ಬಂಧವಿಲ್ಲ. ಕುಡುಬಿಯರಲ್ಲಿ ವಿವಾಹ ವಿಚ್ಛೇಧನಗಳಿಲ್ಲ ಅಂತ ಘಟನೆ ಬಾರದಂತೆ ಜಾಗೂರುಕತೆಯಿಂದ ಇರುತ್ತಾರೆ.

ಕುಡುಬಿಯರ ಸಮುದಾಯದಲ್ಲಿ ಯಾರಾದರು ಅವರ ಹಾಡಿಗಳಿಗೆ ಹೋದರೆ ಸ್ತ್ರೀಯರು ಹೊರಗೆ ಬರುವುದಿಲ್ಲ ಒಳಗಡೆ ಇರುತ್ತಾರೆ. ಪುರುಷರು ಮಾತ್ರ ಹೊರಗೆ ಬಂದು ವಿಚಾರಿಸುವ ಪದ್ಧತಿ ಇದೆ. ಈ ಸಮುದಾಯದವರು ತಮ್ಮದೇ ಆದ ನ್ಯಾಯ ಪಂಚಾಯಿತಿಯನ್ನು ನಿರ್ಮಿಸಿಕೊಂಡು ಜೀವನವನ್ನು ಮಾಡುತ್ತಿರುವುದನ್ನು ನೋಡಬಹುದು.

ಟಿಪ್ಪಣಿ

೧. ಗೊಂಡರ ಸಂಸ್ಕೃತಿ ಉಪ ಸಂಸ್ಕೃತಿ ಅಧ್ಯಯನ ಮಾಲೆ ಪ್ರೊ.ಬರಗೂರು ರಾಮಚಂದ್ರಪ್ಪ ಪು: ೨೬.

೨. ಮಾನಶಾಸ್ತ್ರ ಡಾ.ಆರ್.ರಾಮಕೃಷ್ಣ ಪು: ೧೫೦, ೧೫೧, ೧೬೦

೩. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾದ ಮಾಹಿತಿ.

ಅಧ್ಯಾಯ ೩

ಕುಡುಬಿಯರ ಸಾಂಸ್ಕೃತಿಕ ಬದುಕು

ಕುಡುಬಿಯರ ಸಾಂಸ್ಕೃತಿಕ ಬದುಕು

ಸಾಂಸ್ಕೃತಿ ಎಂದರೆ ಸಾಂಪ್ರದಾಯಿಕವಾಗಿ ಬಂದ ಪದ್ಧತಿ ಹಾಗೂ ಜೀವನದ ಮೌಲ್ಯಗಳು ಮತ್ತು ಆದರ್ಶಗಳ ಸಂಗ್ರಹವೇ ಸಂಸ್ಕೃತಿ ಎಂದಿದ್ದಾರೆ. ಯಾವುದೇ ಸಂಸ್ಕೃತಿಯಲ್ಲಿ ಕೇವಲ ಮೌಲ್ಯಗಳು ಅಥವಾ ಭಾವನೆಗಳು ಮಾತ್ರ ಇರದೆ ಬೌದ್ಧಿಕ ಸಾಧನೆಗಳು, ಜೀವನಶೈಲಿ ರೀತಿ ರಿವಾಜುಗಳು ಆಚರಣೆ, ನಂಬಿಕೆಗಳು ಪಾತ್ರ ಹಂಚಿಕೆ, ನೀತಿ ನಿಯಮಗಳು ಮುಂತಾದ ಹಲವಾರು ಅಂಶಗಳಿರುತ್ತವೆ.

ಸಂಸ್ಕೃತಿ ಎಂದರೆ ಭೌತಿಕ ಮತ್ತು ಅಭೌತಿಕವಾದ ಅಂಶಗಳನ್ನುಳಗೊಂಡಂಥ ಹಾಗೂ ಸಮಾಜದಿಂದ ಅಸ್ತಿತ್ವಕ್ಕೆ ಬಂದಂತ ಒಂದು ವ್ಯವಸ್ಥೆಯಾಗಿದೆ ಇಲ್ಲಿ ಸಂಸ್ಕೃತಿ ಮತ್ತು ಸಮಾಜದ ನಡುವೆ ಇರುವ ಸಂಬಂಧದ ಸ್ವರೂಪ ಏಕಮುಖವಾದುದಲ್ಲ. ಸಂಸ್ಕೃತಿ ಸಮಾಜದ ರೀತಿನೀತಿಗಳನ್ನು ಜನಜೀವನವನ್ನು ಪ್ರಭಾವಿಸುತ್ತದೆ. ಸಂಸ್ಕೃತಿ ಯಾವುದೇ ವ್ಯಕ್ತಿಯ ಹುಟ್ಟಿನಿಂದ ಕರಗತವಾಗಿರದೇ ಕಲಿಕೆಯಿಂದ ಬಂದಿರುವುದಾಗಿದೆ. ಇದರಿಂದಾಗಿ ಸಂಸ್ಕೃತಿಯು ವ್ಯಕ್ತಿಯ ಜೀವನದ ಉದ್ದಕ್ಕೂ ಸಾಗುತ್ತ ಹೋಗುತ್ತದೆ. ಯಾವುದೇ ಸಮಾಜವು ತಾನು ಆದರ್ಶಪ್ರಾಯವೆಂದು ಎತ್ತಿ ಹಿಡಿಯುವ ಮೌಲ್ಯಗಳಿಂದ ಹಾಗೂ ಆಚರಣೆಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸುತ್ತದೆ. ಸಮಾಜವು ಸಂಸ್ಕೃತಿಯನ್ನು ಉಳಿಸಿಕೊಂಡು, ಪೋಷಿಸಿಕೊಂಡು ಬರುತ್ತಿದೆ. ಇಂದು ಎಲ್ಲ ಸಮುದಾಯಗಳು ತಮ್ಮ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿವೆ. ಇದಕ್ಕೆ ಉದಾಹರಣೆಯೆಂದರೆ ನಮ್ಮ ಬುಡಕಟ್ಟು ಸಮುದಾಯಗಳಲ್ಲಿರುವ ಸಂಸ್ಕೃತಿಯ ನಿಜವಾದ ಸಾಕ್ಷಿ ಇದರಿಂದಾಗಿ ಸಂಸ್ಕೃತಿಯ ನಿರಂತರತೆಯನ್ನು ಕಾಪಾಡಿಕೊಂಡು ಬಂದಿದೆ.

ಬುಡಕಟ್ಟುಗಳು ಹೆಚ್ಚು ಕಡಿಮೆ ಸ್ವಾಲಂಬಿ ಘಟಕಗಳಾಗಿರುತ್ತವೆ. ಇದರರ್ಥ ತಮ್ಮ ದುಡಿಮೆ, ಜೀವನ ಚಿಂತನೆ ಕಲೆ ಮತ್ತು ಸಾಹಿತ್ಯವನ್ನು ಸಾಮೂಹಿಕ ನೆಲಗಟ್ಟಿನಲ್ಲೇ ರೂಢಿಸಿಕೊಂಡು ಬದುಕುತ್ತಿರುತ್ತವೆ. ಬುಡಕಟ್ಟು ಸಮುದಾಯಗಳಲ್ಲಿ ಪ್ರತಿಯೊಬ್ಬರ ಸಮಸ್ಯೆಯು ಇಡೀ ಬುಡಕಟ್ಟಿನ ಸಮಸ್ಯೆಯಾಗಿದ್ದರಿಂದ ದುಡಿದು ಮನೆಕಟ್ಟುವುದು, ಮದುವೆ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಸಾಮೂಹಿಕ ಜವಬ್ದಾರಿಯಾಗಿದೆ. ಆದ್ದರಿಂದ ಸಾಮೂಹಿಕವಾಗಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಈ ಸಮುದಾಯಗಳು ಒಂದು ರೀತಿಯಲ್ಲಿ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದವಾಗಿರುತ್ತವೆ.

ಬುಡಕಟ್ಟು ಸಮಾಜದ ಸಾಮಾಜಿಕ ಬದಲಾವಣೆ ತರುವಾಗ ನಮಗೆ ಗೊತ್ತಿರುವ ಬುಡಕಟ್ಟೇತರ ಸಮಾಜದ ಮಾದರಿಯನ್ನಿಟ್ಟುಕೊಂಡು ತರುವುದು ಸೂಕ್ತವಲ್ಲ. ಬುಡಕಟ್ಟು ಸಮಾಜ ಮತ್ತು ಬುಡಕಟೇತರ ಸಮಾಜಗಳೆರಡು ಬೇರೆ ಬೇರೆ ಸಂಸ್ಕೃತಿಯನ್ನೊಳಗೊಂಡಿರುವಂತಹವು. ಇಲ್ಲಿ ಗಮನಿಸಲೇಬೇಕಾದ ಸಂಗತಿಯೆಂದರೆ ವ್ಯಕ್ತಿ ಸಂಘಜೀವಿಯಾಗಿದ್ದರಿಂದ ಸಂಸ್ಕೃತಿಯನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದರಿಂದಾಗಿ ವ್ಯಕ್ತಿಯ ನಡುವಳಿಕೆಯನ್ನು ಪರಿಚಯಿಸುವ ಅನೇಕ ಪ್ರಸಂಗಗಳು ಬದುಕಿನುದ್ದಕ್ಕೂ ಕಂಡುಬರುತ್ತಿವೆ. ಯಾವುದೇ ಬುಡಕಟ್ಟಿನ ಜೀವನಕ್ಕೆ ತಕ್ಕಂತೆ ಅದರ ಸಂಸ್ಕೃತಿ ರೂಪಗೊಂಡಿರುತ್ತದೆ. ಬುಡಕಟ್ಟುಗಳಲ್ಲಿ ಮಗುವಿನ ಹುಟ್ಟುವಿಕೆಯಿಂದ ಪ್ರೌಢ ಹಂತ, ಮದುವೆ ಮತ್ತು ಸಾವು ಇವುಗಳಲ್ಲಿ ಆಚರಿಸುವ ಪದ್ಧತಿಗಳು ವೈಶಿಷ್ಟ್ಯಪೂರ್ಣವಾದವುಗಳಾಗಿವೆ.

ಸಂಸ್ಕೃತಿಯ ಅಧ್ಯಯನದಲ್ಲಿ ಭಾಷೆಗೆ ವಿಶೇಷ ಸ್ಥಾನವಿದೆ. ಭಾಷೆ ಸಂಸ್ಕೃತಿಯ ಒಂದು ಭಾಗ, ಮಾನವ ಭಾಷೆಯಿಲ್ಲದೆ ಬದುಕಲಾರ ಲಿಪಿಯಿಲ್ಲದ ಅನೇಕ ಭಾಷೆಗಳನ್ನು ರೂಢಿಸಿಕೊಂಡು ತಮ್ಮದೇ ಆದ ಭಾಷೆಯನ್ನು ಮಾತನಾಡುವುದರ ಮೂಲಕ ತಮ್ಮ ಸಮಾಜವನ್ನು ಕಟ್ಟಿಕೊಂಡಿರುವ ಬುಡಕಟ್ಟುಗಳಲ್ಲಿ ಕುಡುಬಿಯರ ಸಮುದಾಯವು ಒಂದಾಗಿದೆ. ಯಾವುದೇ ಒಂದು ಬುಡಕಟ್ಟಿನ ಸಮುದಾಯದ ಸಂಸ್ಕೃತಿಯನ್ನು ತಿಳಿಯಲು ಆ ಸಮುದಾಯ ಮಾತಾಡುವ ಭಾಷೆಯನ್ನು ಅರ್ಥಮಾಡಿಕೊಂಡು ಅದರ ತಳಬುಡವನ್ನರಿಯಬೇಕು. ಸಂಸ್ಕೃತಿ ಮಾನವನನ್ನು ದೈಹಿಕವಾಗಿ ಬೌದ್ಧಿಕವಾಗಿ ಮತ್ತು ನೈತಿಕವಾಗಿಸುತ್ತದೆ. ಸಂಸ್ಕೃತಿಯು ಬುಡಕಟ್ಟುಗಳ ಜೀವನದ ರೀತಿನೀತಿಗಳು ಅವರ ಧಾರ್ಮಿಕ, ಶೈಕ್ಷಣಿಕ ಆರ್ಥಿಕ ಕ್ಷೇತ್ರಗಳನ್ನು ತೆರೆದಿಡುವುದರ ಜೊತೆಗೆ ಆದಿವಾಸಿ ಸಮುದಾಯಗಳ ಸಂಸ್ಕೃತಿಯು ಆಧುನೀಕರಣಕ್ಕೆ ಮಾರು ಹೋಗುವುದಕ್ಕಿಂತ ಮುಂಚೆ ಅಂದರೆ ವಸಹಾತುಶಾಹಿ ಹಾಗೂ ಬ್ರಿಟಿಷರು ಬರುವುದಕ್ಕಿಂತ ಪೂರ್ವದಲ್ಲಿ ಬುಡಕಟ್ಟುಗಳು ನಿಜವಾದ ಸಂಸ್ಕೃತಿಯನ್ನು ಇಟ್ಟುಕೊಂಡಿದ್ದವು.

ಯಾವುದೇ ಬುಡಕಟ್ಟು ಸಮುದಾಯಗಳು ಸಂಸ್ಕೃತಿಯನ್ನು ಬಿಟ್ಟಿರಲು ಸಾಧ್ಯವಿಲ್ಲ. ಇದರಿಂದಾಗಿ ಸಂಸ್ಕೃತಿಯಿಲ್ಲದೆ ಯಾವುದೇ ಸಮುದಾಯಗಳು ಉನ್ನತ ಸ್ಥಾನಮಾನವನ್ನು ಪಡೆಯಲಾರವು ಎಂಬ ಮಾತು ಮಾತ್ರ ಸತ್ಯ. ಸಮುದಾಯಗಳಲ್ಲಿ ಸಂಸ್ಕೃತಿ ಬೇಕು. ಸಂಸ್ಕೃತಿಯಿಂದಲೇ ವ್ಯಕ್ತಿ ಉತ್ತಮನಾಗಬಹುದು ಹಾಗೂ ತನ್ನ ಬದುಕನ್ನು ರೂಪಿಸಿಕೊಳ್ಳಬಹುದು. ಸಂಸ್ಕೃತಿಯೆ ಇಲ್ಲದಿದ್ದರೆ ವ್ಯಕ್ತಿ ಕ್ರೂರ ಮೃಗಗಳಂತೆ ವರ್ತಿಸಬಹುದು. ಆದ್ದರಿಂದ ಸಂಸ್ಕೃತಿಯೆಂಬುದು ಒಂದು ನಿರಂತರವಾದ ಕ್ರಿಯೆಯಾಗಿದೆ. ಇದರಿಂದ ತಿಳಿಯುವುದೇನೆಂದರೆ ಸಂಸ್ಕೃತಿ ನಿಂತ ನೀರಲ್ಲಾ, ಅದೊಂದು ನಿರಂತರವಾಗಿ ಹರಿಯುವ ಪ್ರವಾಹವಾಗಿದೆ. ಈ ಹಿನ್ನೆಲೆಯಲ್ಲಿ ಗಾಂಧೀಜಿ, ಲಿಂಕನ್, ಕಾರ್ಲ್‌ಮಾರ್ಕ್ಸ್, ಕೆನಡಿ ಮುಂತಾದ ಮಹಾನೀಯರು ಸಮಾಜ ಮತ್ತು ಸಂಸ್ಕೃತಿಗಳ ಬಗ್ಗೆ ಕಾಳಜಿಯನ್ನು ಹೊಂದಿ ತಮ್ಮದೇ ಆದ ರೀತಿಯಲ್ಲಿ ಉಲ್ಲೇಖಿಸಿದ್ದಾರೆ. ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಕುಡುಬಿ ಸಮುದಾಯವು ತನ್ನದೇಯಾಗಿರುವಂತ ವಿಶಿಷ್ಟ ಸಂಸ್ಕೃತಿಯನ್ನು ತನ್ನ ಬದುಕಿನ ಉದ್ದಕ್ಕೂ ಪಾಲಿಸಿಕೊಂಡು ಬಂದಿದೆ.

೩.೧ ಹಬ್ಬಗಳು

ಬುಡಕಟ್ಟು ಆದಿವಾಸಿ ಸಮುದಾಯವಾದ ಕುಡುಬಿ ಸಮುದಾಯವು ಕೇವಲ ಕೃಷಿಯನ್ನು ಮಾಡುತ್ತಾ ಜೀವನ ಸಾಗಿಸುವುದಲ್ಲದೆ ಹಬ್ಬಗಳನ್ನು ಆಚರಿಸುತ್ತ ಬರುತ್ತದೆ. ಹಾಡಿಯ (ಕೇರಿಯ) ಜನರು ದುಡಿದು ಬಂದ ಶ್ರಮ ಹಾಗೂ ಬೇಸರವನ್ನು ಮರೆಯುವುದಕ್ಕಾಗಿ ಕೆಲವು ಹಬ್ಬಗಳನ್ನು ಮಾಡುವುದರ ಮೂಲಕ ಸಂತೋಷವನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಕುಡುಬಿಯರ ಬದುಕು ಸಾಂಸ್ಕೃತಿಕವಾಗಿ ಶ್ರೀಮಂತವಾದುದು.

ಕುಡುಬಿಯರು ಆಚರಿಸುವ ಹಬ್ಬಗಳು

೧. ಹೋಳಿ

೨. ದಸಾರ

೩. ದೀಪಾವಳಿ

೪. ಶಿವರಾತ್ರಿ

೫. ಯುಗಾದಿ

೬. ನಾಗರಪಂಚಮಿ

೭. ಚೌವುತಿ ಹಬ್ಬ

ಹೋಳಿ ಹಬ್ಬ ಕುಡುಬಿಯರ ಹಬ್ಬಗಳಲ್ಲಿ ಶ್ರೇಷ್ಠವಾದ ಹಬ್ಬವಾಗಿದೆ. ಈ ಹಬ್ಬದಲ್ಲಿ ಕುಡುಬಿಯರು ಮಾಡುವ ನೃತ್ಯ ಇವರ ಮೂಲದ್ದಾಗಿದೆ. ಈ ಸಮುದಾಯದವರು ಹೋಳಿ ಹಬ್ಬದಲ್ಲಿ ನೃತ್ಯಕ್ಕೆ ಬಳಸುವ ಗುಮಟೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ. ಇದರಿಂದಾಗಿ ಕುಡುಬಿಯರು ಇರುವ ಸ್ಥಳಗಳಲ್ಲಿ ಇತರೆ ಬುಡಕಟ್ಟುಗಳಾದ ಹಸಲರು, ದೀವರು ಮತ್ತು ಗೊಂಡರಿಗಿಂತ ಒಂದು ವಿಶಿಷ್ಟವಾದ ಬುಡಕಟ್ಟಾಗಿದೆ ಎಂದು ಹೇಳಲು ಯಾವುದೇ ಸಂದೇಹವಿಲ್ಲ.

ಗರುಡ ಪಕ್ಷೀಚಾ ಪ್ರಾಣ ಹರಣ
ಗೆಲಾರೆ ತೆದ್ವಾಗಾ
ತೆದ್ವಾ ತೆನಿರೆ ಏಕರೆ
ರಾಮ ದೇವಾನ ಆಲಿಚಾಣ
ಐಕರೆ ಬಂಧುವಾರೆ
ಪ್ರಾಣ ನಸ್ಲೆಜಾಗೆರ
ಭೂಮಿಕೇರ
ಲಕ್ಷ್ಮಣ ದುಂಡೂನ
ಲಕ್ಷ್ಮಣ ಬಗಲೇನ

ಎಂಬತ್ತೇಳಕೋಟಿ ಜೀವರಾಶಿ
ಪ್ರಾಣ ನಾಶಿ ಝಾಲಿರೆ ಜಮೀನ
ಅಂಗ್ಯೆ ಹಸ್ತಾರೆ ಧರಲೇನ
ನಾಗತಾರೆ ಠಿವಲೇನ
ಬಗೀಣ ಪ್ರಜವಳಲೇನ
ಕಿರಿಜಟಾಕ ಉಚ್ಛೂನ
ಥೊಡಿ ರೆಕ್ಕಾಗೆ ಉಡೂನ
ದೋಣ ಮಾರ್ಗ ಧರಲೇನಿರೆ

ಗೆಲ್ಪಿ ಗೆಲೆ ಪಾಯಿಚಾ ಪಟ್ಲಾಕ
ಏಕ ವರ್ಷಾಚ ಕಟೇರ
ದೊಪಾರಚ ವೇಳಾರ

ಬಂಧು ಗೆಲೆ ಹೊತರೆ ಶಿವರಾಜಾ ಪಾಟ್ಣಾಕ
ಪಾಯಿಸುರವಾಚಾ ಪಾಟ್ಣಾತ
ಎಂಬತ್ತೇಳ ಕೋಟಿರೆ ಸೈನ್ಯಗಾ
ತೆತ್ತಾರ ಎಂಬತ್ತೇಳಕೋಟಿರೆ
ಹೆಮ್ಮಾಲಿ ಪರ್ವತಾರ
ಸೈನ್ಯರೆ ಚಟ್ಟಾವೊ
ತೆದ್ವಾರೆ ಗೆಲೇರ
ಹಮಿಚಾ ವರ್ಜಾಣ
ಸೈನ್ಯಾಚಾ ರಾತ ನವಗೆ
ವಜೀರ ಹಣಮಂತ
ನಜರೇನ ತಿಳಿಲೇನ
ಕೊಣರೆ ಬಸ್ಲೆಗೆ
ಮಿಣಾನ ಪುಥೆರೆ ಇಲಾರೆ
ತೆಚೆರೆ ತಿತೇನ
ವಾಡಿಸೂರಾ ವಜ್ರಾನ
ಅಣ್ಣಾದೇವಿರೆ ವರ್ಜಾನ
ಓ ಹಣಂತಾರೆ ಮಾಂಜೆರೆ
ರಾಮದೇವಾಚಿ ಚರಣ

ತುರ್ಝು ಮಾತಕೆ, ಲಾಗ್ಲೇರ
ತಾಂಬೇಚ ತೋಫಗೆ

ಪಿತ್ತಳಿಚ ಚೊಳನೆವೊ
ತುರ್ಝುರೆ ಆಂಗಾಕ
ಪರಮೆಶಿ ಗುಂಡರೆ ವಾಚ್ಲೇರ
ಬಾಣಾನ ಉಚ್ಲೇರ

ಬಾರಾರೆ ಮಾಡಾದೋಗಾ
ವಿಶಾಳಿ ಭೂಜಾವೊ
ಭೂಜೂನ ಅಕ್ಡಲೇರ
ತೊ ಕಾಣಾಚಿ ನುಕಾವಿ ಹುಚ ಕೊಣಾರೆ
ಮಿಳೂನ ವರೂನ ಸಾಂಗ್ಲೇನಿ ಹೋತಾರೆ
ತೆದ್ವಾರೆ ವಜ್ರಾನೊ
ಮರಕಟಾಚ ವೇಷರೆ
ಧರೂನ ಆಯಿಧ ತಾಂಬಾರ ಪೈಲೆ ತಾಂಬಾರಕಾ
ದಾಟೂನ ದಿಲಾರೆ
ದಾಬಾಚೊ ಖಾಂದ್ಯೂರೆ
ರಾಮದೇವಾಚಿ ಸ್ನಷ್ಠಿರೆ ಜೀವಾಕ
ತಂಪಾ ಸಾವಳಿಕ ನಿಜಲಾರೆ
ಲಕ್ಷ್ಮಣಾಂಚ ಮಾಂಡಿರ
ಉಸಿರೆ ಶಿವೂನ
ನಿಜಲಾರೆ ಬರಾಂಬಲೋಗಾ
ನುಗರಿಚಾ ವಾರಾರೆ

ನಿಜರೆ ಪದ್ಮಿವೊ
ಓಜೀರತಾಳ ಮೋಡೂನ
ಆಂಗಾರ ಆಪುತಾಗೆ
ತೆದ್ವಾರೆ ಗೆಲೇರ
ಲಕ್ಷ್ಮಣಾಕ ರಾಗರೆ ಬಲ್ಲಾರೆ
ಕಾಡೂನ ಸಲಾವಲಾರೆ
ಬಾಣರೆ ಘೆತಾಣಾವೊ
ಮಾಂಡಿರೆ ಹಾಂದಾಡಿಗಾ
ರೈಕರೆ ಮರಕಟಾರೆ
ಬಾಣರೆ ಸೊಡ್ತಯ
ಬಾಣಾ ವುಂಡಾ ಖಾಲೂಚ

ಮರಣ ಪಡತಯರೆ
ಮಿಣಾನ ಬೊಲಾಕ
ಲಾಗಲೇಲ ಕಾಲಾರ
ರಾಮದೇವಾಗೆಚ್ಯೊರ ಝಾಲಾರೆ
ಉರೂನ ಬಸ್ಲಾಗಾ
ಓ ಬಂಧುವಾರೆ ಲಕ್ಷ್ಮಣಾರೆ
ಕೊಣಾರ ಖತೀರ ವರಾಸಲಾಗೆ
ಫಿತೀರ ನಕೋರೆ ತುಕಾಗೆ
ಸಮಾಧಾನ ಕರೊರೆ
ತೆದ್ವಾ ವಜೀರ ಉತಾರಲಾರೆ
ಓ ಪುತುರ ಮಿಣೂನ
ತಾಂಬೇಚಾ ತೋಫಗೆ
ಪಿತ್ರೀಚಾ ಚೊಳ್ನೀಗಾ
ತಾಂಬೇಚಾ ಕೋಟರೆ
ವಜ್ರಾಚಾಂಗಾಕ ಝಾಲಾಗ
ದಿಶವರಾಂಚಾ ವಾಡ್ಲಾರೆ
ಓ ಪುತ್ರನೊ ಮಿತ್ಲೇನ
ಖರೆಸೂ ಇಲಾಸ್ರೆ
ರಾಮಾರೆ ಲಕ್ಷ್ಮಣ
ತಾನಿಚಾ ಬುಕೆಚಾ ಕಾಲಾರ
ಪಾಣಿ ನಾಹಿರೆ ಉದಾಕನಾಮು
ಪಾಣಿ ನಾಹಿರೆ

ಅಧ್ಯಾಯ ೪

ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು

೪.೧ ಕೃಷಿ ಮತ್ತು ಕಸುಬು

೪.೨ ಇತ್ತೀಚಿನ ಕೆಲವು ಅವಲಂಬಿತ ವೃತ್ತಿಗಳು

೪.೩ ಶಿಕ್ಷಣ ವ್ಯವಸ್ಥೆ

ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು

ಪ್ರಪಂಚದಲ್ಲಿರುವ ಯಾವುದೇ ಒಂದು ಸಮುದಾಯ ಹಾಗೂ ವ್ಯಕ್ತಿಯ ಸ್ಥಾನಮಾನಗಳು ನಿರ್ಧಾರವಾಗುವುದು ಆ ಸಮುದಾಯ ಇಲ್ಲವೆ ಆ ವ್ಯಕ್ತಿ ಸಮಾಜದಲ್ಲಿ ಯಾವ ರೀತಿಯಲ್ಲಿ ಆರ್ಥಿಕ ಸಂಪತ್ತನ್ನು ಹೊಂದಿದ್ದಾನೆ ಎಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಈ ಹಿನ್ನಲೆಯಲ್ಲಿ ನಾವು ಭಾರತೀಯ ಸಮಾಜವನ್ನು ನೋಡುವುದಾದರೆ ಭಾರತೀಯ ಸಮಾಜ ಪ್ರಾಚೀನ ಕಾಲದಲ್ಲಿ ಒಂದು ರೀತಿಯಲ್ಲಿ ಬುಡಕಟ್ಟುಗಳಂತೆ ಪ್ರಾರಂಭವಾಗಿದೆ ಎಂಬುದು ನಿಜ ಸಂಗತಿಯಾದರು, ಬ್ರಿಟಿಷರು ಬರುವುದಕ್ಕಿಂತ ಪೂರ್ವದಲ್ಲಿ ನಾವು ನೋಡುವಂತೆ ಭಾರತದ ಅನೇಕ ಬುಡಕಟ್ಟು ಸಮುದಾಯಗಳು ಒಂದಲ್ಲಾ ಒಂದು ರೀತಿಯಲ್ಲಿ ಆರ್ಥಿಕತೆಯಿಂದ ವಂಚಿತರಾಗಿ ಬೇರೆಯವರ ಅಧೀನದಲ್ಲಿ ಇರುವುದಷ್ಟೇ ಅಲ್ಲ, ಭಾರತದಲ್ಲಿ ಮೇಲಸ್ತರದವರು ನಮ್ಮ ಬುಡಕಟ್ಟು ಸಮುದಾಯಗಳ ಭೂಮಿಯನ್ನು ಆಕ್ರಮಿಸಿಕೊಂಡು ಅವರ ಭೂಮಿಯಲ್ಲಿಯೇ ಬುಡಕಟ್ಟಗಳನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಾ ಬಂದಿದ್ದ ಘಟನೆಗಳನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು.

ಭಾರತೀಯ ಸಮಾಜದಲ್ಲಿ ಮೇಲು ಕೀಳು ಎಂಬ ಸಾಮಾಜಿಕ ಏಣಿ ಶ್ರೇಣಿಯಲ್ಲಿರುವಂತೆ ಆರ್ಥಿಕತೆಯಲ್ಲಿಯು ಶ್ರೀಮಂತ-ಬಡವ ಎಂಬ ಏಣಿಶ್ರೇಣಿಯಿರುವುದು ಸಹಜ. ಈ ಹಿನ್ನಲೆಯಲ್ಲಿ ಭಾರತದಲ್ಲಿ ಬಂಡವಾಳ ಯಾವ ರೀತಿ ಕ್ರೊಢೀಕರಣವಾಗಿರುತ್ತದೆ ಎಂಬುದರ ಬಗ್ಗೆ ಯಾರು ಮಾತಾಡದೆ ಕಣ್ಣು ಮುಂದೆ ಇರುವ ವ್ಯವಸ್ಥೆಯನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳುತ್ತಾ ಬಂದಿದೆ. ಭಾರತೀಯ ಸಮಾಜ ಯಾವುದೇ ಒಂದು ನಿಶ್ಚಿತವಾದ ಭೂ ಪ್ರದೇಶವನ್ನು ತನ್ನದು ಅಥವಾ ನಮ್ಮದು ಎಂದುಕೊಂಡು ಒಂದು ಕಡೆ ನೆಲೆ ನಿಂತು ತನ್ನದೇ ಆದ ಆರ್ಥಿಕತೆಯನ್ನು ರೂಢಿಸಿಕೊಂಡು ಅನೇಕ ಬುಡಕಟ್ಟುಗಳು ಜೀವನವನ್ನು ಸಾಗಿಸುತ್ತಿದ್ದಾರೆ. ಇನ್ನೊಂದು ಕಡೆ ಒಂದು ಸ್ಥಳದಲ್ಲಿ ನೆಲೆ ನಿಲ್ಲದೆ ಅಲೆಮಾರಿಗಳಾಗಿ ಊರಿಂದ ಊರಿಗೆ ವಲಸೆ ಹೋಗುತ್ತಾ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿಕೊಳ್ಳದೆ ಅತ್ಯಂತ ಹೀನ ಸ್ಥಿತಿಯಲ್ಲಿ ಬದುಕುತ್ತಿರುವ ಬುಡಕಟ್ಟುಗಳನ್ನು ನೋಡಬಹುದು.

ಕುಡುಬಿ ಸಮುದಾಯವು ಆರ್ಥಿಕ ಸಮಸ್ಯೆಯಾಗಿ ಯಾವಗ ಗೋವಾದಿಂದ ವಲಸೆ ಬಂದಿದ್ದಾರೋ ಆಗಿನಿಂದಲೇ ಬದುಕಿನಲ್ಲಿ ಆರ್ಥಿಕ ಸ್ಥಿತ್ಯಾಂತರಕ್ಕೆ ಒಳಗಾಗಿದ್ದಾರೆ. ಪೋರ್ಚ್‌ಗೀಸ್‌ರ ಮತಾಂತರದ

ಒತ್ತಾಯಕ್ಕೆ ಸಿಲುಕಿದ ಕುಡುಬಿಗಳು ಕರ್ನಾಟಕಕ್ಕೆ ವಲಸೆ ಬಂದು ಬ್ರಾಹ್ಮಣರ ಮನೆಗಳಲ್ಲಿ ಹಾಗೂ ಅವರ ತೋಟದಲ್ಲಿ ಕೆಲಸದಾಳುಗಳಾಗಿ ಸೇರಿಕಂಡು ದಿನದ ಹೊಟ್ಟೆಪಾಡನ್ನು ನೀಗಿಸಿಕೊಳ್ಳುತ್ತಿದ್ದರು ನಂತರ ಕುಡುಬಿ ಹೆಸರಿಗೆ ತಕ್ಕಂತೆ ಕೃಷಿಯ ಅನುಭವವಿದ್ದುದರಿಂದ ಕಾಡಿನಲ್ಲಿ ಸೇರಿ ಬೆಟ್ಟದ ತುತ್ತ ತುದಿಯಿಂದ ನೀರು ದುಮುಕುವಂತ ಸ್ಥಳಗಳ ಕೆಳಗೆ ಗಿಡವನ್ನು ಕಡಿದು ಕೃಷಿಯನ್ನು ಮಾಡಲು ಪ್ರಾರಂಭಿಸಿರುವುದನ್ನು ಗಮನಿಸಬಹುದು.

ವಕ್ತೃಪ್ರಕಾರ ಪ್ರಾರಂಭದಲ್ಲಿ ಮೊದಲು ೪೦ ಕುಂಟೆಗೆ ಕೇವಲ ೪ ಚೀಲ ಭತ್ತವಾಗುತ್ತಿತ್ತು ಹಾಗೆ ಹೆಚ್ಚಾಗಿ ಕಾಡಿನಲ್ಲಿ ಸಿಗುವ ಹಣ್ಣು, ಹತ್ತಿ ಉದರಿದ ಎಲೆಯನ್ನು ಒಂದು ಕಡೆ ಕಲೆಹಾಕಿ ಅನಂತರ ಗದ್ದೆಯಲ್ಲಿ ಹಾಕಿ ಕೊಳೆಕಟ್ಟಿ ನಂತರ ಸಸಿಯನ್ನು ನೆಡುತ್ತಿದ್ದರು. ಆದರು ಇಳುವರಿ ಬರುತ್ತಿರಲಿಲ್ಲ ಎಂದು ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಕುಡುಬಿ ಸಮುದಾಯದವರು ಹೇಳುತ್ತಾರೆ. ಕುಡುಬಿಯರು ಕಾರ್ಗಲ್‌ನ ಹತ್ತಿರ ಲಿಂಗನಮುಕ್ಕಿ ಅಣೆಕಟ್ಟು ನಿರ್ಮಾಣದ ಸಮಯದಲ್ಲಿ ಮತ್ತೆ ಮೇಘಾನೆ ಮತ್ತು ಬಚ್ಚೋಡಿ ಎಂಬ ಅರಣ್ಯವನ್ನು ಸೇರಿ ಹೊಸದಾಗಿ ಊರನ್ನು ನಿರ್ಮಿಸಿಕೊಂಡರು. ಈ ಹಿನ್ನಲೆಯಿಂದ ಕುಡುಬಿ ಸಮುದಾಯವು ಆರ್ಥಿಕತೆಯ ದೃಷ್ಟಿಯಿಂದ ಅತಂತ್ರ ಸ್ಥಿತಿಯನ್ನು ಅನುಭವಿಸಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಕುಡುಬಿಯರು ಗದ್ದೆಯನ್ನು ಉಳಿಮೆ ಮಾಡುತ್ತಿದ್ದರು ಸಹ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ ಎನ್ನುವ ದುಃಖ ಒಂದು ಕಡೆಯಾದರೆ, ಇನ್ನೊಂದು ಕಡೆ ಉಳುಮೆ ಮಾಡುವ ಗದ್ದೆಗಳ ಪಟ್ಟ ಸ್ವಂತ ಹೊಲ ಅಥವಾ ಗದ್ದೆಯ ಹಕ್ಕುಪತ್ರ ದೊರೆಯುತ್ತಿಲ್ಲ ಎಂಬ ದುಃಖದ ನಡುವೆ ಕುಡುಬಿಯರು ಆರ್ಥಿಕವಾಗಿ ಅಭದ್ರತೆಯನ್ನು ಹೊಂದಿದ್ದಾರೆ.

ಈಗಲೂ ಕುಡುಬಿ ಸಮುದಾಯ ಕೃಷಿಯನ್ನೇ ತನ್ನ ಜೀವನದ ವೃತ್ತಿಯಾಗಿ ಮಾಡಿಕೊಂಡಿದೆ. ಇದರಿಂದಾಗಿ ಇವರ ಆರ್ಥಿಕತೆಯನ್ನು ನಿರ್ಧರಿಸುವ ಮಾನದಂಡ ಕೃಷಿ ಬಿಟ್ಟರೆ ಬೇರೆ ಯಾವುದೇ ವೃತ್ತಿಯನ್ನು ಅವಲಂಬಿಸದೆ, ತಮ್ಮ ಪರಂಪರಗತವಾಗಿ ಬಂದ ಕೃಷಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ನಾವು ಇಂದಿಗೂ ನೋಡಬಹುದಾಗಿದೆ.

ಕುಡುಬಿ ಸಮುದಾಯ ಆದಿವಾಸಿ ಬುಡಕಟ್ಟಾಗಿದ್ದು ಇತರೆ ಬುಡಕಟ್ಟುಗಳಿಗೆ ಹೋಲಿಸಿಕೊಂಡರೆ ಈ ಸಮುದಾಯದ ಜನರು ಆರ್ಥಿಕವಾಗಿ ಬೇರೆಯವರನ್ನು ಆಶ್ರಯಿಸದೆ ಸ್ವಂತಿಕೆಯಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಹಾಗೂ ಯಾವುದೇ ಮಳೆ, ಚಳಿ, ಬಿರುಗಾಳಿ ಬಿಸಿಲಿಗೆ ಭಯಪಡದೆ ಕಾಡಿನ ಪ್ರಾಣಿಗಳನ್ನು ಸ್ನೇಹಿತರೆಂದು ಹೇಳುತ್ತಾ ಮೇಘಾನೆಯಿಂದ ೭ ಕಿ.ಮೀಟರ್ ಬೆಟ್ಟವನ್ನು ಹತ್ತಿ ಇಳಿಯುತ್ತಾರೆ. ನಿಜವಾಗಿಯು ಕಾಡು ಎಂದ ಕೂಡಲೆ ಎಂತವರಿಗೂ ಭಯವನ್ನು ಉಂಟು ಮಾಡುತ್ತದೆ. ಇಂತಹ ವಾತವಾರಣದಲ್ಲಿ ಮೇಘಾನೆ ಮತ್ತು ಬಚ್ಚೋಡಿಯಲ್ಲಿರುವ ಕುಡುಬಿಯರು ಪ್ರಸ್ತುತ ವ್ಯವಸ್ಥೆಯಲ್ಲಿ ಆರ್ಥಿಕತೆಯಿಂದ ಸುಧಾರಣೆಯ ಹಾದಿಯಲ್ಲಿದ್ದಾರೆ.

ಬಚ್ಚೋಡಿಯಲ್ಲಿರುವವರು ಮಳೆಗಾಲದಲ್ಲಿ ಇದುವರೆಗು ಒಂದು ದೊಡ್ಡ ಹಳ್ಳವನ್ನು ದಾಟಬೇಕು ಆ ಹಳ್ಳವನ್ನು ದಾಟಲು ಒಂದು ಸೇತುವೆಯನ್ನು ಕಾಡಿನಲ್ಲಿ ಸಿಗುವ ಬಿದರಿನ ಬೊಂಬುಗಳಿಂದ ದಬ್ಬೆಗಳನ್ನು ತಯಾರಿಸಿಕೊಂಡು ನಡೆದಾಡಲಿಕ್ಕೆ ಒಂದು ನೈಸರ್ಗಿಕ ಸೇತುವೆಯನ್ನು ಒಂದು ದಡದ ಮರದಿಂದ ಇನ್ನೊಂದು ದಡದ ಮರಕ್ಕೆ ಸೇರಿಕೊಂಡು ನಿರ್ಮಿಸಿಕೊಂಡಿದ್ದಾರೆ. ಮನೆಗಳಿಗೆ ಮತ್ತು ಕೃಷಿಗಾಗಿ ಬೇಕಾಗಿರುವ ಗೊಬ್ಬರ, ಬೀಜ ಮುಂತಾದವುಗಳನ್ನು ಈ ಸೇತುವೆಯ ಮೇಲೆ ತೆಗೆದುಕೊಂಡು ಹೋಗುತ್ತಾರೆ. ಈ ರೀತಿಯಾಗಿ ಜೀವನ ಮಾಡುವುದು ಅವರಿಗೆ ಶೋಚನೀಯವಾದ ಬದುಕಾಗಿದೆ. ಆದರೆ ಇವರಿಗೆ ಸೇತುವೆಯನ್ನು ಕಟ್ಟಿಕೊಡಬೇಕೆಂಬ ಆಸೆಯನ್ನು ಸರ್ಕಾರ ಹೊಂದಿಲ್ಲದೆ ಇರುವುದನ್ನು ಗಮನಿಸಬಹುದು. ಈ ಹಿನ್ನಲೆಯಲ್ಲಿ ಯಾವುದೇ ಸರ್ಕಾರ ಬಂದರು ಚುನಾವಣೆಯಲ್ಲಿ ಹಣವನ್ನು ಕೊಟ್ಟು ಎಲ್ಲರ ಮನವೊಲಿಸಿ ಅವರಿಗೆ ಕುಡಿತದ ಆಮಿಷವನ್ನು ತೋರಿಸಿ (ಪಿತೃ ಪ್ರಧಾನ ವ್ಯವಸ್ಥೆಯಾದ್ದರಿಂದ ಪುರುಷರು ಹೇಳಿದಂತೆ ಸ್ತ್ರೀಯರು ಸಹ ನಡೆದುಕೊಳ್ಳುತ್ತಾರೆ) ಮತಗಳನ್ನು ಹಾಕಿಸಿಕೊಂಡು ಇಡೀ ಹಾಡಿಯ ಹಿರಿಯನಿಗೆ ಅನೇಕ ಅಶ್ವಾಸನೆಗಳನ್ನು ಕೊಟ್ಟು ಹೋದ ರಾಜಕರಣಿಗಳು ಮತ್ತೆ ಬರುವುದು ಚುನಾವಣೆಯ ಸಂದರ್ಭದಲ್ಲಿ ಮಾತ್ರ ಇದರಿಂದಾಗಿ ಕುಡುಬಿಯರ ಯಾವದೇ ಆಧುನಿಕ ಸೌಕರ್ಯಗಳಾದ ಅಸ್ಪತ್ರೆ, ಸಾರಿಗೆ, ರಸ್ತೆ, ವಿದ್ಯುತ್ ಮೀಸಲಾತಿ ಹಾಗೂ ಶೈಕ್ಷಣಿಕ ಸಮಸ್ಯೆಗಳಿಂದ ಕಾಡಿನಲ್ಲಿಯೇ ಒಂದು ರೀತಿಯ ಪ್ರಾಣಿಗಳಂತೆ ಜೀವನವನ್ನು ಸಾಗಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಇದರಿಂದಾಗಿ ಕುಡುಬಿಯರು ಆರ್ಥಿಕವಾಗಿ ಅಭಿವೃದ್ಧಿ ಯಾಗುತ್ತಿಲ ಎಂದು ಹೇಳಿದರೆ ಯಾವುದೇ ಅನುಮಾನವಿರಲಾರದು.

೪.೧ ಕೃಷಿ ಮತ್ತು ಕಸುಬು

ಕುಡುಬಿಯರು ಗೋವಾದಿಂದ ವಲಸೆ ಬಂದಾಗ ಕುಮ್ರಿ ಬೇಸಾಯವನ್ನು ಕಾಡಿನಲ್ಲಿ ಪ್ರಾರಂಭ ಮಾಡಿದ್ದರಿಂದ ಅವರಿಗೆ ಕೃಷಿಯ ಬಗ್ಗೆ ಹೆಚ್ಚು ತರಬೇತಿಯನ್ನು ಪಡೆದವರಂತೆ ತಿಳಿಯುತ್ತದೆ. ಕುಡುಬಿಯರು ಮೊದಲು ಒಂದು ಸ್ಥಳದಲ್ಲಿ ಗಿಡ ಕಡಿದು ಬೇಸಾಯವನ್ನು ಮಾಡಿ ಅನಂತರ ಆ ಸ್ಥಳವನ್ನು ಬಿಟ್ಟು ಬೇರೊಂದು ಸ್ಥಳಕ್ಕೆ ಹೋಗಿ ಮತ್ತೆ ಗಿಡ ಕಡಿದು ವ್ಯವಸಾಯವನ್ನು ಮಾಡುತ್ತಿದ್ದರು. ಇದಕ್ಕೆ ಸ್ಥಳಾಂತರ ಬೇಸಾಯ ಎಂದು ಕರೆಯುತ್ತಿದ್ದರು. ಈ ರೀತಿಯ ವ್ಯವಸಾಯವನ್ನು ಗುದ್ದಲಿಗಳು ಹಾಗೂ ಮರದಿಂದ ಮಾಡಿದ ಸಲಕರಣೆಗಳನ್ನು ಬಳಸಿಕೊಂಡು ಮಾಡುತ್ತಿದ್ದರು ಇದಕ್ಕೆ ಕುಮ್ರಿ ಬೇಸಾಯ ಪದ್ಧತಿ ಎಂದು ಕರೆಯುತ್ತಿದ್ದರು.

ಕುಡುಬಿಯರು ಬೆಟ್ಟದ ತಪ್ಪಲಿನಲ್ಲಿ ಅಥವಾ ಪರ್ವತ ಜರಿಗಳಲ್ಲಿ ಬೆಟ್ಟದ ತುದಿಯಿಂದ ನೀರು ಕೆಳಗೆ ಬೀಳುವ ಸ್ಥಳಗಳನ್ನು ಗುರುತಿಸಿಕೊಂಡು ನೈಸರ್ಗಿಕವಾಗಿ ತಮ್ಮ ಪಾಡಿಗೆ ತಾವು ಹರಿಯುವ ನೀರಿಗೆ ಅನುಗುಣವಾಗಿ ವ್ಯವಸಾಯದ ಭೂಮಿಯನ್ನು ಗುರುತಿಸಿಕೊಳ್ಳುವ ಪದ್ಧತಿ ಇವರಲ್ಲಿದೆ. ಇದರಿಂದಾಗಿ ಕುಡುಬಿಯರ ಭೂಮಿಯಲ್ಲಿ ಯಾವುದೇ ಬೆಳೆಯನ್ನು ನೆಟ್ಟರು ಆ ಬೆಳೆ ಸಲಿಸಾಗಿ ಬೆಳೆಯುತ್ತದೆ. ಆದರೆ

ನಿರೀಕ್ಷಿಸಿದಷ್ಟು ಆದಾಯ ಸಿಗುವುದು ಕಡಿಮೆ. ಈ ರೀತಿಯ ವ್ಯವಸಾಯದಲ್ಲಿ ತರಕಾರಿಗಳು ಹಾಗೂ ಅಡಿಕೆ, ಹಣ್ಣಿನ ಸಸಿಗಳು ಚೆನ್ನಾಗಿ ಬೆಳೆಯುತ್ತವೆ.

ಕುಡುಬಿಯರು ತಮ್ಮ ಕೃಷಿಯಲ್ಲಿ ಬೆಳೆಯುವ ಬೆಳೆಗಳು

ಆಹಾರದ ಬೆಳೆಗಳು

ಭತ್ತ, ರಾಗಿ.

ತೋಟಗಾರಿಕೆ ಅಥವಾ ವಾಣಿಜ್ಯ ಬೆಳೆಗಳು

ಅಡಿಕೆ, ಗೋಡಂಬಿ, ಅನಾನಸ್, ವೀಳ್ಯದೆಲೆ, ಮೆಣಸು, ಪಪಾಯಿ, ಸಪೋಟ, ಲಾವಂಚಿ.

ತರಕಾರಿ ಬೆಳೆಗಳು

ಬದನೆಕಾಯಿ, ಟಮೋಟೋ, ಗೆಣಸು, ಕೋಸು, ಮೆಣಸಿನಕಾಯಿ, ಈರುಳ್ಳಿ, ಸೊಪ್ಪು, ದಂಟಿನ ಸೊಪ್ಪು, ಸಬ್ಬಸಿಗೆ ಸೊಪ್ಪು, ನುಗ್ಗಿಕಾಯಿ, ಹಗಲಕಾಯಿ, ಕುಂಬಳಕಾಯಿ, ಬೆಂಡೆ, ತೊಂಡೇಕಾಯಿ.

ಲಾವಂಚಿ : ಕುಡುಬಿ ಸಮುದಾಯ ಈ ಮೇಲೆ ತಿಳಿಸಿದಂತೆ ಅನೇಕ ಬೆಳೆಗಳನ್ನು ಬೆಳೆಯುತ್ತದೆ. ಆದರೆ ಈ ಸಮುದಾಯದ ಮುಖ್ಯವಾದ ಹಣದ ಬೆಳೆಯಾದ ಲಾವಂಚಿಯ ಬೆಳೆ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಆದ್ದರಿಂದ ಲಾವಂಚಿಯ ಎಣ್ಣೆಯನ್ನು ಯಾವ ರೀತಿ ತಯಾರಿಸುತ್ತಾರೆ ಹಾಗೂ ಲಾವಂಚಿ ಬೆಳೆಯನ್ನು ಯಾವ ರೀತಿಯಾಗಿ ಬೆಳೆಯುತ್ತಾರೆ ಎಂಬುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ. ಕುಡುಬಿ ಸಮುದಾಯದವರು ಲಾವಂಚಿ ಎಣ್ಣೆಯನ್ನು ತಯಾರಿಸುವ ರೀತಿ ನೋಡಿದರೆ ಒಂದು ರೀತಿಯಲ್ಲಿ ಯಾವುದೇ ಬುಡಕಟ್ಟಿನ ಸಮುದಾಯಗಳು ಈ ರೀತಿಯ ಎಣ್ಣೆಯನ್ನು ತಯಾರಿಸುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇವರ ಎಣ್ಣೆಯನ್ನು ತಯಾರಿಸುವ ರೀತಿಯನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿಯಲಾಗಿದೆ.

ಕುಡುಬಿಯರು ಲಾವಂಚಿಯ ಎಣ್ಣೆಯನ್ನು ಸಮಾನ್ಯವಾಗಿ ವರ್ಷದ ಜೂನ್ ತಿಂಗಳಿನಲ್ಲಿ ಭತ್ತದ ಸಸಿಯಂತೆ ಒಂದು ರೀತಿಯ ವಿಶಿಷ್ಟತೆಯಿಂದ ಕೂಡಿದ ಹುಲ್ಲಿನ ಬೇರನ್ನು ನೆಡುತ್ತಾರೆ. ನಂತರ ಬೆಳೆಗೆ ಸರ್ಕಾರಿ ಗೊಬ್ಬರವನ್ನು ತಂದು ಹಾಕುತ್ತಾರೆ. ಹುಲುಸಾಗಿ ಬೆಳೆದ ಹುಲ್ಲನ್ನು ಜನವರಿ ತಿಂಗಳಿನಲ್ಲಿ ನೆಲಕ್ಕೆ ಸಮನಾಗಿ ಹುಲ್ಲನ್ನು ಕೋಯುತ್ತಾರೆ. ನಂತರ ಆ ಹುಲ್ಲನ್ನು ಮನೆಗಳಿಗೆ ಮುಚ್ಚಲು ಬಳಸುತ್ತಾರೆ. ಹುಲ್ಲನ್ನು ಕೋಯ್ದನಂತರ ಭೂಮಿಯ ಒಳಗಡೆ ಇರುವ ಬೇರನ್ನು ಅಗಿದು ಕಿಳುತ್ತಾರೆ. ಬೇರನ್ನು ಒಂದು ದೊಡ್ಡ ಡಬ್ಬಿಯಲ್ಲಿ ಹಾಕಿ ಬೆಯಿಸುತ್ತಾರೆ ಬೆಂದ ಮೇಲೆ ಭಟ್ಟಿ ಇಳಿಸಿದಾಗ ಒಂದು ಕಡೆ ಎಣ್ಣೆ ಬರುತ್ತದೆ ಮತ್ತೊಂದು ಕಡೆ ನೀರು ಬರುತ್ತಿರುತ್ತದೆ. ಆದರೆ ಈ ಎಣ್ಣೆಯನ್ನು ತಯಾರಿಸಲು ಅದರಲ್ಲೂ ೨ ಕೆ.ಜಿ. ಎಣ್ಣೆಯನ್ನು ತಯಾರಿಸಲು ಒಂದು ಟನ್ ಕಟ್ಟಿಗೆ ಬೇಕು ಹಾಗೂ ೭೨ ಗಂಟೆಗಳ ಕಾಲ ಸತತವಾಗಿ ಒಂದೇ ಪ್ರಮಾಣದಲ್ಲಿ ಬೆಂಕಿಯು ಉರಿಯುತ್ತಿರಬೇಕು. ಹಾಗಾದಾಗ ಮಾತ್ರ ಎಣ್ಣೆಯನ್ನು ಪಡೆಯಲು ಸಾಧ್ಯ. ಈ

ರೀತಿಯಾಗಿ ಎಣ್ಣೆಯನ್ನು ಪಡೆದ ಮೇಲೆ ಮಾರಾಟ ಮಾಡುತ್ತಾರೆ. ಆದರೆ ನಾಲ್ಕು ವರ್ಷಗಳ ಹಿಂದೆ ಬೇರೆಯವರು ಬಂದು ಕಡಿಮೆ ಬೆಲೆಗೆ ತೆಗೆದುಕೊಂಡು ಹೋಗಿ ಅದನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡತ್ತಿದ್ದರು ಎಂದು ವಕ್ತೃವಿನ ಅಭಿಪ್ರಾಯಗಳಿಂದ ತಿಳಿಯಲಾಗಿದೆ. ಅಲ್ಲದೆ ಕುಡುಬಿಯರು ಈ ಮಾರಾಟಗಾರರಿಂದ ಶೋಷಣೆಗೆ ಇಡಾಗಿದ್ದರು. ಈ ಹಿನ್ನಲೆಯನ್ನು ತಿಳಿಸಿದ ಮೇಘಾನೆಯ ಕುಡುಬಿಯರಲ್ಲಿ ಎರಡು ಜನ ಯುವಕರು ಜಾಗುರಕರಾದರು ಅಲ್ಲದೆ ಮೇಘಾನೆ ಮತ್ತು ಬಚ್ಚೋಡಿಯಲ್ಲಿ ಸಿಗುವ ಎಲ್ಲಾ ಎಣ್ಣೆಯನ್ನು ಸಂಗ್ರಹಿಸಿಕೊಂಡು ೩,೦೦೦ ರೂ.ಗಳಿಂದ ೩,೨೦೦ ರೂಪಾಯಿಗಳವರೆಗೆ ಭಟ್ಕಳಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡಲು ಪ್ರಾರಂಭಿಸಿದರು ಈಗಲೂ ಅದೇ ರೀತಿಯ ಪದ್ಧತಿ ಮುಂದುವರೆದಿದೆ. ಈ ರೀತಿಯಾಗಿ ತಯಾರಿಸಿದ ಲಾವಂಚಿ ಎಣ್ಣೆಯನ್ನು ಆಯುರ್ವೇದಿಕೆಗೆ ಬಳಸಲಾಗುತ್ತದೆ. ಆದ್ದರಿಂದ ಕುಡುಬಿಯರ ಬದುಕನ್ನು ವೀಕ್ಷಿಸಿದಾಗ ಅವರಿಗೆ ಅರಿವೆಯಿಲ್ಲದಂತೆ ದೇಶಕ್ಕೆ ಸಾಮಮಾಜಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಆಧುನಿಕರು, ಶಿಕ್ಷಣವಂತರು ಹಾಗೂ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡು ಬದುಕುವ ಜನರಿಗೆ ನಮ್ಮ ಆದಿವಾಸಿ ಹಾಗೂ ಅಲೆಮಾರಿ, ಅರೆ ಅಲೆಮಾರಿ ಬದುಕು ಶ್ರೇಷ್ಠವಾದುದಾಗಿದೆ.

ಕುಡುಬಿ ಸಮುದಾಯದವರು ವ್ಯವಸಾಯಕ್ಕೆ ಸಮಾನ್ಯವಾಗಿ ಕೋಣಗಳನ್ನು ಬಳಸುತ್ತಾರೆ ಹಾಗೂ ಭತ್ತದ ಸಸಿಗಳನ್ನು ನೆಡುವುದಕ್ಕಿಂತ ಮೊದಲು ಹೆಚ್ಚಾಗಿ ಕೊಟ್ಟಿಗೆ ಗೊಬ್ಬರವನ್ನು ಹಾಕುತ್ತಾರೆ. ನಂತರ ಸರ್ಕಾರಿ ಗೊಬ್ಬರವನ್ನು ಸಹ ಹಾಕುತ್ತಾರೆ. ಸಮಾನ್ಯವಾಗಿ ಭತ್ತವು ಬಂದ ಮೇಲೆ ಕಟಾವು ಮಾಡಿ ಸಿವುಡು ಕಟ್ಟಿ ತಮ್ಮ ಮನೆಯ ಮುಂದೆ ಇರುವ ಕಣದ ಪಕ್ಕದಲ್ಲಿ ಕಾಳಿನ ಜೋತೆಯಲ್ಲಿ ಬಣಿವೆಯನ್ನು ಹಾಕುತ್ತಾರೆ. ವ್ಯವಸಾಯದ ಎಲ್ಲಾ ಕೆಲಸಗಳು ಮುಗಿದ ಮೇಲೆ ಕೋಣಗಳನ್ನು ಕಟ್ಟಿಕೊಂಡು ಭತ್ತದ ಹುಲ್ಲನ್ನು ತುಳಿದು ಕಾಳುಗಳನ್ನು ಉದುರಿಸಿಕೊಳ್ಳುತ್ತಾರೆ.

ಕುಡುಬಿಯರು ಕಬ್ಬನ್ನು ಬೆಳೆಯುತ್ತಾರೆ ಹಾಗೂ ಕಬ್ಬನ್ನು ಕಡಿದು ಸಾಧ್ಯವಾದಷ್ಟು ಬೆಟ್ಟದ ಕಳಗೆ ತಂದು ಪೇಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಆದರೆ ಅಡಿಕೆ ಮತ್ತು ಲಾವಂಚಿಯನ್ನು ಬೆಳೆದಂತೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದಿಲ್ಲ.

ರಾಗಿ : ಇದು ಕುಡುಬಿಯರ ಬೆಳೆಯಾದರೂ ಹೆಚ್ಚಿನ ಪ್ರಮಾಣದಲ್ಲಿ ಊಟಕ್ಕೆ ಬಳಿಸದೆ ಇರುವುದನ್ನು ಗಮನಿಸಬಹುದು. ಆದರೆ ಕುಡುಬಿಯರು ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ಊಟಕ್ಕೆ ಬಳಸುವುದನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ವೀಕ್ಷಿಸಲಾಗಿದೆ ಇವರ ಊಟದ ಮುಖ್ಯವಾದ ಬೆಳೆ ಭತ್ತವಾಗಿದೆ.

ಅಡಿಕೆ, ಗೋಡಂಬಿ : ಕುಡುಬಿಯರು ಬೆಳೆಯುವ ಬೆಳೆಗಳಲ್ಲಿ ವಾಣಿಜ್ಯ ಬೆಳೆಯಾಗಿ ಸಮುದಾಯವನ್ನು ಉತ್ತಮವಾದ ಸ್ಥಿತಿಗೆ ತೆಗೆದುಕೊಂಡು ಹೋಗುವ ಅಥವಾ ಬಂಗಾರದಂತೆ ಜೀವನಕ್ಕೆ ಅಪದ್ಭಾಂವವಾಗಿದೆ. ಎಂದರೆ ಯಾವುದೇ ರೀತಿಯ ತಕಾರಾರು ಇರಲಾರದು. ಇದರಿಂದಾಗಿ ಅಡಿಕೆ, ಗೊಡಂಬಿ, ಅನಾನಾಸ ಮುಂತಾದ ಬೆಳೆಗಳನ್ನು ಬೆಳೆದು ಅವುಗಳನ್ನು ಶೇಖರಿಸಿಕೊಂಡು ಭಟ್ಕಳಕ್ಕೆ ಹೋಗಿ ಮಾರಾಟ ಮಾಡಿ ಬರುತ್ತಾರೆ. ಹಾಗೂ ಇವರ ಬದುಕನ್ನು ಸಾಗಿಸಿಕೊಳ್ಳುತ್ತಾರೆ.

[illegible]

ಕುಡುಬಿಯರು ಬೆಳೆಯುವ ವೀಳ್ಯೆದೆಲೆ, ಮೆಣಸು, ತರಕಾರಿಗಳ ಬೆಳೆಯನ್ನು ಮಾರಾಟ ಮಾಡದೆ ಮನೆಯ ಬಳಕೆಗಾಗಿ ಬಳಸುವುದನ್ನು ಗಮನಿಸಬಹುದು. ಈ ರೀತಿಯಾಗಿ ಈ ಸಮುದಾಯದವರು ತಮ್ಮ ಬದುಕಿನ ದೋಣಿಯನ್ನು ಯಾವುದೇ ಬಿರುಗಾಳಿ, ಮಳೆ, ಪ್ರವಾಹಗಳು ಬಂದರೆ ಬಿಡದೆ ದೋಣಿ ದಡ ಮುಟ್ಟುವರಿಗೆ ಯಾವುದೇ ತೊಂದರೆಯಿಲ್ಲದೆ ಅಂಬಿಗ ನಡೆಸುವಂತೆ ನಡೆಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದು.

ಕುಡುಬಿಯರ ಕಸುಬು

ಕುಡುಬಿಯರ ಬದುಕು ಮತ್ತು ಅವರ ವೃತ್ತಿ ಪರಸ್ಪರ ಒಂದನ್ನೊಂದು ಸಂಬಂಧವನ್ನು ಹೊಂದಿವೆ ಆದ್ದರಿಂದ ಈ ಸಮುದಾಯದವರು ಕೃಷಿಯನ್ನೆ ಜೀವನದ ವೃತ್ತಿಯನ್ನಾಗಿ ಮಾಡಿಕೊಂಡು ಕೃಷಿಗೆ ಹೊಂದಾಣಿಕೆಯಾಗುವಂತೆ ಅನೇಕ ಕಸುಬುಗಳನ್ನು ದಿನನಿತ್ಯದ ಬದುಕಿನಲ್ಲಿ ಮಾಡುತ್ತಾ ಬಂದಿದ್ದಾರೆ. ಇದರಿಂದಾಗಿ ಈ ಸಮುದಾಯದವರು ಮಾಡುತ್ತ ಬಂದಿರುವ ಕಸುಬುಗಳೆಂದರೆ:

೧. **ಕೈ ತೋಟ:** ಕುಡುಬಿಗಳು ತಮ್ಮ ಮನೆಗಳ ಸುತ್ತ ಮುತ್ತ ಹಾಗೂ ನೀರು ಹರಿದಾಡುವ ಸ್ಥಳಗಳಲ್ಲಿ ಕೈ ತೋಟವನ್ನು ಮಾಡಿಕೊಂಡಿದ್ದಾರೆ. ಈ ತೋಟದಲ್ಲಿ ಈರುಳ್ಳಿ ಸಬ್ಬಸಿಗೆ ಪಾಲಕದ ಸೊಪ್ಪು, ಭದನೆಕಾಯಿ, ಟಮೋಟೋ ಮುಂತಾದ ತರಕಾರಿಗಳನ್ನು ಬೆಳೆಯುವುದರ ಮೂಲಕ ತಮ್ಮ ಮೂಲ ಕಸುಬನ್ನಾಗಿ ರೂಡಿಸಿಕೊಂಡಿದ್ದಾರೆ.

೨. **ಕೃಷಿಯ ಕೂಲಿ:** ಕುಡುಬಿಯರಲ್ಲಿ ಕೆಲವರು ಭೂಮಿಯಿಲ್ಲದೆ ಈಗಲೂ ಬೇರೆಯವರ ಗದ್ದೆಗಳಲ್ಲಿ ಕೃಷಿ ಕೂಲಿಗಾಗಿ ದಿನ ನಿತ್ಯ ಹೋಗುತ್ತಾರೆ. ಇದರಿಂದಾಗಿ ತಿಳಿಯುವುದೆನೆಂದರೆ ಕುಡುಬಿಯರಲ್ಲಿ ಎಲ್ಲಾರಿಗೂ ಭೂಮಿವಿಲ್ಲವೆಂದು, ಇದರ ಪರಿಣಾಮವಾಗಿ ಬೇರೆಯವರ ಹೊಲದಲ್ಲಿ ಅಥವಾ ಗದ್ದೆಗಳಲ್ಲಿ ಅದರಲ್ಲೂ ಬಂಡವಾಳವನ್ನು ಕ್ರೋಢಿಕರಿಸಿಕೊಂಡಿರುವರ ಗದ್ದೆಗಳಲ್ಲಿ ಕೃಷಿ ಕೂಲಿಯಾಳಾಗಿ ದುಡಿಯುತ್ತಿರುವುದನ್ನು ನೋಡಬಹುದು. ಈ ರೀತಿಯಾಗಿ ಕೆಲವರು ಕೂಲಿಯನ್ನು ತಮ್ಮ ಕಸುಬಗಿ ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ.

೩. **ಪಶುಸಂಗೋಪನೆ:** ಕುಡುಬಿಯರು ಕೃಷಿಯನ್ನು ಅವಲಂಬಿಸಿಕೊಂಡು ಜೀವನ ಮಾಡುವವರಾಗಿದ್ದರಿಂದ ಒಂದೊಂದು ಮನೆಯಲ್ಲಿ ಎರಡು, ಐದು ಎಮ್ಮೆಗಳನ್ನು ಸಾಕಿರುವುದನ್ನು ನೋಡಬಹುದು. ಅಲ್ಲದೆ ಕೆಲವೊಂದು ಮನೆಯಲ್ಲಿ ಹಸುಗಳಿವೆ. ಆದರೆ ಕೃಷಿಯನ್ನು ಮಾಡುವಂತಹ ಎಲ್ಲಾ ಮನೆಯಲ್ಲಿಯೂ ಎರಡೇರಡು ಕೋಣಗಳಿರುವುದನ್ನು ಇಲ್ಲಿ ವಿಶೇಷವಾಗಿ ಸೂಚಿಸಲು ಇಷ್ಟ ಪಡುತ್ತೇನೆ. ಇದರಿಂದಾಗಿ ಕುಡುಬಿಯ ಸಮುದಾಯ ಎಮ್ಮೆಗಳನ್ನು ಹಸುಗಳನ್ನು ಸಾಕುತ್ತಿದೆ. ಜೋತೆಗೆ ಎಮ್ಮೆಗಳು ಕೊಡುವ ಹಾಲನ್ನು ಮನೆಯಲ್ಲಿಯೇ ಮೊಸರು ಮಾಡಿ ಮಜ್ಜಿಗೆ ಕಡೆದು ತುಪ್ಪವನ್ನು ಮಾಡುತ್ತಾರೆ. ಈ ಸಮುದಾಯದವರು ಬೇರೆಯವರಿಗೆ ಹಣಕ್ಕೆ ಹಾಲನ್ನು, ಮೊಸರನ್ನು, ತುಪ್ಪವನ್ನ ಮಾರಾಟ ಮಾಡದೇ

ಎಲ್ಲಾವನ್ನು ಊಟಕ್ಕೆ ಬಳಸುತ್ತಾರೆ. ಈ ಹಿನ್ನಲೆಯಲ್ಲಿ (ನಮ್ಮ) ಕುಡುಬಿಯರು ದಷ್ಟಪುಷ್ಟರಾಗಿದ್ದಾರೆ ಪುರುಷರಷ್ಟೇ ಅಲ್ಲ ಸ್ತ್ರೀಯರು ಕೂಡ ಗಟ್ಟಿಮುಟ್ಟಾಗಿದ್ದಾರೆ. ಈ ರೀತಿಯಾಗಿ ಪಶುಸಂಗೋಪನೆಯಲ್ಲಿ ಕೃಷಿಯನ್ನು ಹಾಗೂ ಕೃಷಿಯಲ್ಲಿ ಪಶುಸಂಗೋಪನೆಯನ್ನು ರೂಢಿಸಿಕೊಂಡು ಒಂದು ಉಪಕಸುಬಾಗಿ ಮಾಡಿಕೊಂಡು ಜೀವನವನ್ನೆ ಸಾಗಿಸುತ್ತ ಬಂದಿರುವುದನ್ನು ಇಲ್ಲಿ ಹೆಸರಿಸಲು ಸೂಕ್ತವೆನಿಸುತ್ತದೆ.

ಗೃಹಕೈಗಾರಿಕೆ : ಗೃಹಕೈಗಾರಿಕೆಯನ್ನು ಪ್ರಾಚೀನ ಕಾಲದಿಂದಲು ಪರಂಪರಗತವಾಗಿ ನಮ್ಮ ಬುಡುಕಟ್ಟುಗಳು ರೂಢಿಸಿಕೊಂಡು ಬಂದಿರುವ ವೃತ್ತಿಯಾಗಿದೆ. ಉದಾ. ಕಮ್ಮಾರರು, ಚಮ್ಮಾರರು, ಕುಂಬಾರರು, ಮೇದಾರರು, ಗೋಲ್ಲರು, ಕೊರಚರು ಮುಂತಾದ ಸಮುದಾಯಗಳು ಗೃಹಕೈಗಾರಿಕೆಯನ್ನು ರೂಢಿಸಿಕೊಂಡು ಬಂದಂತೆ ಕುಡುಬಿ ಸಮುದಾಯದವರು ಸಹ ಗೃಹಕೈಗಾರಿಕೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಆದರೆ ಗೃಹ ಕೈಗಾರಿಕೆಯು ಜೀವನಕ್ಕೆ ಅವಶ್ಯಕತೆಯಿರುವಷ್ಟಕ್ಕೆ ಮಾತ್ರ ಸೀಮಿತವಾಗಿದೆ. ವಿನಿಹಃ ಗೃಹ ಕೈಗಾರಿಕೆಯಿಂದ ಉತ್ಪಾದಿಸಿದ ವಸ್ತುಗಳನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡುವುದಿಲ್ಲ.

ಮೇಘಾನೆ ಮತ್ತು ಬಚ್ಕೋಡಿ ಕುಡುಬಿಯರು ಕಾಡಿನಲ್ಲಿ ಸಿಗುವ ಬಿದಿರು ಬೊಂಬುಗಳನ್ನು ತಂದು ಆ ಬೊಂಬುಗಳನ್ನು ಸೀಳಿ ಅವುಗಳಿಂದ ಬೆತ್ತಗಳನ್ನು ಮಾಡಿಕೊಳ್ಳುತ್ತಾರೆ ಹಾಗೂ ಬುಟ್ಟಿ, ಕಣಜ, ಬಿಸಣಿಕೆ ಮುಂತಾದ ಗೃಹ ಬಳಕೆಯ ವಸ್ತುಗಳನ್ನು ಉತ್ಪಾದಿಸುತ್ತಾರೆ. ಅಲ್ಲದೆ ಕಾಡಿನಲ್ಲಿ ಸಿಗುವ ಒಂದು ರೀತಿಯ ಮುಂಡಕ್ಕಿ ಹುಲ್ಲಿನಿಂದ ಚಾಪೆಯನ್ನು ಹೆಣೆದುಕೊಳ್ಳುತ್ತಾರೆ ಮತ್ತು ಕೆಲವೊಂದು ಹುಲ್ಲಿನ ಮನೆಗಳಿಗು ಚಾಪೆಯನ್ನು ಹಾಕುತ್ತಾರೆ. ಈ ಸಮುದಾಯದವರು ಕಾಡಿನಲ್ಲಿ ಸಿಗುವ ಕಾಡು ಜೇನು ಸಂಗ್ರಹಿಸುತ್ತಾರೆ. ಆದರೆ ಇವರು ಮಾಡುವ ಗೃಹಕೈಗಾರಿಕೆಯ ವಸ್ತುಗಳನ್ನು ಮಾರಾಟ ಮಾಡದೇ ಮನೆಯ ಉಪಯೋಗಕ್ಕೆ ಬಳಸುವುದನ್ನು ಗಮನಿಸಬಹುದು.

೪.೨ ಇತ್ತೀಚಿನ ಕೆಲವು ಅವಲಂಬಿತ ವೃತ್ತಿಗಳು

ಭಾರತದಲ್ಲಿರುವ ಯಾವುದೇ ಸಮುದಾಯ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಮೂಲವೃತ್ತಿಯಿಂದ ರೂಪಾಂತರಗೊಳ್ಳುತ್ತಿರುವುದನ್ನು ನೋಡಬಹುದು. ಈ ಹಿನ್ನಲೆಯಲ್ಲಿ ನಮ್ಮ ಬುಡಕಟ್ಟು ಸಮುದಾಯವಾದ ಕುಡುಬಿಯರು ಮೂಲ ವೃತ್ತಿಯಾದ ಕೃಷಿಯನ್ನೆ ಮುಂದುವರಿಸಿಕೊಂಡು ಕೃಷಿಯಲ್ಲಿ ಸಂಪ್ರದಾಯದ ಸಾಧನಗಳ ಜೋತೆಗೆ ಕೆಲವು ಕಬ್ಬಿಣದಿಂದ ಮಾಡಿದ ಸಾಧನಗಳನ್ನು ಬಳಸಿಕೊಂಡು ಮಾಡಲಾಗಿದೆ. ಇದರಿಂದಾಗಿ ಕುಡುಬಿಯರು ಹೊಸ ರೀತಿಯ ವೃತ್ತಿಗಳನ್ನು ಬಯಸುತ್ತಾ ಇದ್ದಾರೆ ಎಂಬುದು ತಿಳಿದು ಬರುತ್ತದೆ.

ಕುಡುಬಿಯರು ಇಂದು ಸ್ವಾತಗಾರ್, ದೆಪಿಗೆರಿ, ನಾಗುವಳ್ಳಿಯಲ್ಲಿ ಕೆಲವರು ಅರಣ್ಯ ಇಲಾಖೆಯಲ್ಲಿ ದಿನಗೂಲಿಗಳಾಗಿ ಕೆಲಸವನ್ನು ಮಾಡುತ್ತ ಇದ್ದಾರೆ ಕುಡುಬಿಯರಲ್ಲಿ ಒಬ್ಬ ವಕ್ತ ಕೃಷ್ಣಪ್ಪ ಎಂಬ ಯುವಕ ಸರ್ಕಾರದಿಂದ ರೀಯಾಯಿತಿಯ ದರದಲ್ಲಿ ಒಂದು ಜೀಪನ್ನು ತಂದುಕೊಂಡು ಮೇಘಾನೆಯಿಂದ ನಾಗುವಳಿಗೆ

ಜನರನ್ನು ಹಾಗೂ ಗೊಬ್ಬರ್ ಮುಂತಾದ ಸರಕುಗಳನ್ನು ಹಾಗೂ ಒಬ್ಬ ವ್ಯಕ್ತಿಗೆ ೭.೦೦ ರೂಪಾಯಿಗಳಂತೆ, ಸರಕುಗಳಿಗೆ ಕ್ವಿಂಟಲ್ ಲೇಕ್ಕದಲ್ಲಿ ಇಷ್ಟು ರೂಪಾಯಿ ಎಂದು ದರ ನಿಗದಿ ಮಾಡಿ ಅವರ ಸಮುದಾಯಕ್ಕೆ ಸಹಕಾರದ ರೀತಿಯಲ್ಲಿ ತನ್ನ ವೃತ್ತಿಯಲ್ಲಿ ಬದಲಾವಣೆ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ.

ಕುಡುಬಿಯರು ಇತ್ತೀಚಿಗೆ ಲಾವಂಚಿಯ ಎಣ್ಣೆಯನ್ನು ಭಟ್ಕಳಕ್ಕೆ ತಾವೇ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದನ್ನು ಪ್ರಾರಂಭಿಸುತ್ತಿದ್ದಾರೆ. ಜೀವನದಲ್ಲಿ ಬದಲಾವಣೆಯನ್ನು ಬಯಸುತ್ತಾರೆ. ಆದರೆ ಅವರ ಬಗ್ಗೆ ಕಾಳಜಿವಹಿಸುವವರ ಕೊರತೆಯಿಂದಾಗಿ ಅವರು ಇನ್ನೂ ಹಿಂದೆ ಹಿಂದೆಯೇ ಹೋಗುತಲಿದ್ದಾರೆ.

ಮೂಲ ಸೌಲಭ್ಯಗಳಾದ :

೧. ಸಾರಿಗೆ ವ್ಯವಸ್ಥೆ

೨. ವೈಧ್ಯಕೀಯ ವ್ಯವಸ್ಥೆ

೩. ವಿದ್ಯುತ್ ವ್ಯವಸ್ಥೆ

೪. ದೂರದರ್ಶನದ ವ್ಯವಸ್ಥೆ

೫. ಶೈಕ್ಷಣಿಕ ವ್ಯವಸ್ಥೆ

೬. ಮೀಸಲಾತಿ ವ್ಯವಸ್ಥೆಯನ್ನು ಸರಕಾರ ಕೈಗೊಳ್ಳಬೇಕು

ಈ ರೀತಿಯಾಗಿ ವ್ಯವಸ್ಥೆಗಳಿಲ್ಲದೆ ಮೇಘಾನೆಯ ಕುಡುಬಿಯರು ಅನೇಕ ಸಮಸ್ಯೆಗಳಿಂದ ಕೂಡಿದ್ದರಿಂದ ತಮ್ಮ ಮೂಲ ವೃತ್ತಿಯಲ್ಲಿ ಬದಲಾವಣೆ ಕಾಣಿಸುವುದಿಲ್ಲ. ಕುಡುಬಿಯರು ತಮ್ಮ ಮನೆಗಳನ್ನು ಕಟ್ಟಿಕೊಳ್ಳುವ ತರಗಾರಿಕೆಯ ಕೆಲಸವನ್ನು ಕಲಿತಿದ್ದಾರೆ. ಮೇಘಾನೆಯಲ್ಲಿ ಒಂದು ಅಂಗಡಿಯಿದೆ ಇದರಲ್ಲಿ ಬೀಡಿ ಮತ್ತು ಸಣ್ಣ ಪುಟ್ಟ ದಿನಸುಗಳನ್ನು ಇಟ್ಟು ಮಾರಾಟ ಮಾಡುವುದು ಅನಿವಾರ್ಯವಾಗಿದೆ. ಕುಡುಬಿಯರು ಮೂಲ ವೃತ್ತಿ ಕೃಷಿ ಆದರ ಜೊತೆಗೆ ಬೇಟೆಯನ್ನು ಆಡುತ್ತಾರೆ. ಆದರೆ ಯಾವುದೇ ಆಕರ್ಷಕ ವ್ಯವಹಾರಕ್ಕೆ ಯಾರು ಹೋಗಿಲ್ಲ ಕುಡುಬಿಯರಿಗೆ ನಾಗರೀಕ ಜನರಂತೆ ನವೀನ ವಿಷಯಗಳನ್ನ ತಿಳಿಯಬೇಕು ಹಾಗೂ ವಿವಿಧ ವ್ಯಾಪಾರವನ್ನು ಮಾಡಬೇಕು ಎಂಬ ಆಸೆ ಎಲ್ಲಾರಲ್ಲೂ ಇದೆ. ಹೀಗಿರುವಾಗ ಅವರಿಗೆ ಅವಕಾಶಗಳು ಸಿಗುತ್ತಿಲ್ಲ ಏಕೆಂದರೆ ಮುಗ್ದ ಜನರು ಇವರಾಗಿರುವುದರಿಂದ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವದರಿಂದ ಅವರಿಗೆ ಸರಿಯಾದ ವ್ಯವಸ್ಥೆ ಮಾಡಿ ಕೊಡಲು ಸಾಧ್ಯಾವಾಗಿಲ್ಲ.

ಶಿಕ್ಷಣ ವ್ಯವಸ್ಥೆ

ಪ್ರಪಂಚದ ಬುಡಕಟ್ಟುಗಳನ್ನು ಶೈಕ್ಷಣಿಕವಾಗಿ ಗಮನಿಸಿದಾಗ ಕಂಪ್ಯೂಟರ್ ಯುಗದಲ್ಲಿ ಅವರಿಗೆ ಜೀವನದ ಅತಿಮುಖ್ಯ ಘಟ್ಟವಾದ ಶಿಕ್ಷಣ ಸಿಗುತ್ತಿಲ್ಲ. ಅಂದರೆ ಇತ್ತೀಚಿನ ಸರ್ಕಾರಗಳು ಬುಡಕಟ್ಟುಗಳ ಬಗ್ಗೆ ಎಷ್ಟರಮಟ್ಟಿಗೆ ಕಳಾಜಿವಹಿಸಿವೆ ಎಂಬುದನ್ನು ಗಮನಿಸಬಹುದು. ಪ್ರಾಚೀನ ಕಾಲದಿಂದ ತಮ್ಮ ಪಾಡಿಗೆ

ತಾವು ವಂಶಪರಂಪರೆಯಾಗಿ ರೂಢಿಸಿಕೊಂಡು ಬಂದಿರುವ ತಮ್ಮದೆಯಾದ ಅನೌಪಚಾರಿಕ ಸಾಂಸ್ಕೃತಿಕ ಶಿಕ್ಷಣವನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನೋಡಬಹುದು.

ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಇತರ ರಾಷ್ಟ್ರಗಳು ಅಳೆಯುವುದು ಮೊದಲು 'ಶಿಕ್ಷಣ'ದಿಂದ ಎಂಬುದನ್ನು ಮರೆಯಬಾರದು. ಆದರೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಕಂಪ್ಯೂಟರ್ ಶಿಕ್ಷಣದ ಪ್ರಭಾವವಿದ್ದರೂ ಎಷ್ಟರ ಮಟ್ಟಿಗೆ ಭಾರತದಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳನ್ನು ಮುಟ್ಟಿದೆ? ಎಂಬುದು ಬಹಳ ಮುಖ್ಯ. ಈ ಹಿನ್ನಲೆಯಲ್ಲಿ ಇಂದಿನ ಸಾಮಾಜಿಕ ವ್ಯವಸ್ಥೆಗೆ ಶಿಕ್ಷಣ ಎಷ್ಟು ಮುಖ್ಯವೋ ಬುಡಕಟ್ಟು ಸಮುದಾಯಗಳಿಗೂ ಶಿಕ್ಷಣ ಅಷ್ಟೇ ಮುಖ್ಯಾವಾದುದು. ಆದ್ದರಿಂದ ಶಿಕ್ಷಣವನ್ನು ಕುರಿತು ಅನೇಕ ವಿದ್ವಾಸಂರು ಹಲವು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. "ಆತ್ಮ ಸಾಕ್ಷತ್ಕರವೇ ಶಿಕ್ಷಣ", "ವ್ಯಕ್ತಿಯ ಶರೀರ ಮನಸ್ಸು ಮತ್ತು ಚೈತನ್ಯಗಳ ಬೆಳವಣಿಗೆಯೇ ಶಿಕ್ಷಣ", "ವ್ಯಕ್ತಿಯ ಅಂತರಾಳದಲ್ಲಿರುವುದನ್ನು ಹೊರಗೆಳೆದು ತರುವುದೇ ಶಿಕ್ಷಣ" ಎಂಬುದಾಗಿ ಅನೇಕ ಬುದ್ಧಿಜೀವಿಗಳು ಶಿಕ್ಷಣದ ಮಹತ್ವವನ್ನು ಕುರಿತು ಹೇಳಿದ ವಾಕ್ಯಗಳನ್ನು ಗಮನಿಸಬಹುದು. ಈ ಹಿನ್ನಲೆಯಲ್ಲಿ ನಮ್ಮ ಬುಡಕಟ್ಟುಗಳಿಗೆ ಪ್ರಪಂಚದಲ್ಲಿ ಇತರರಿಗೆ ಸಿಗುವಷ್ಟೇ ದಿನನಿತ್ಯದ ಅವಶ್ಯಕತೆಗಳು ಹಾಗೂ ಜೀವನಕ್ಕೆ ಅತಿಮುಖ್ಯವಾಗಿ ಬೇಕಾಗಿರುವ ಶಿಕ್ಷಣ ಎಷ್ಟರ ಮಟ್ಟಿಗೆ ತಲುಪಿದೆ ಎಂಬುದು ಬಹಳ ಮುಖ್ಯವಾಗಿರುತ್ತದೆ.

ಶಿಕ್ಷಣ ಎಷ್ಟು ಮುಖ್ಯ? ಹಾಗೂ ಕೊಡುವಂತ ಶಿಕ್ಷಣ ಯಾವ ರೀತಿಯಾಗಿರಬೇಕು? ಎಂಬುದನ್ನು ಕುರಿತು ಹೇಳುವದಾದರೆ ಶಿಕ್ಷಣ ದಾರಿಯ ದೀಪವಾಗಬಹುದು. ಆದರೆ "ದೀಪ ಚೆಲ್ಲುವ ಬೆಳಕಿನಲ್ಲಿ ನಡೆದು ಗುರಿ ಮುಟ್ಟಬೇಕಾದದ್ದು ಮಾತ್ರ ಪ್ರಯಾಣಿಕನ ಕೆಲಸ, ದೀಪವೇ ನಡೆಯಬಾರುದು" ಎಂದಿದ್ದರೂ ದೀಪ ಬೇಕು. "ಹೆದ್ದಾರಿಯಲ್ಲಿ ದಿಕ್ಕು ತೋರಿಸುವ ಕೈಗಂಬ ಇರುವಂತೆ ಇರಬೇಕು".

ಆದಿವಾಸಿ ಬುಡಕಟ್ಟುಗಳು ಅನೌಪಚಾರಿಕ ಶಿಕ್ಷಣವನ್ನು ರಚಿಸಕೊಂಡು ತಮ್ಮ ಪಾಡಿಗೆ ತಾವು ಕಾಡುಗಳಲ್ಲಿ ಅವಿದ್ಯಾವಂತರಾದರೂ ನಿರುದ್ಯೋಗಿಗಳಾಗದೆ ಜೀವನಕ್ಕೆ ಭಯಪಡದೆ ಬದುಕುತ್ತಿರುವ ಸಮುದಾಯಗಳಿಗೆ ಶಿಕ್ಷಣ ಕೊಡುವುದು ಎಷ್ಟರ ಮಟ್ಟಿಗೆ ಸರಿ ಹಾಗೂ ನಮ್ಮ ಬುಡಕಟ್ಟುಗಳಿಗೆ ಯಾವ ಬಗೆಯ ಶಿಕ್ಷಣ ಕೊಡಬೇಕು ಅಲ್ಲದೆ ಬುಡಕಟ್ಟುಗಳಿಗೆ ಶಿಕ್ಷಣದ ಅಗತ್ಯತೇ ಇದೆಯೇ ಎಂಬ ಮೊದಲಾದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಒಂದು ಕಡೆ ನಿಂತು ತಮ್ಮ ನೆಲೆಯಾಗಿ ಗುರುತಿಸಿಕೊಂಡು ತಮ್ಮದೆ ಆದ ಕೃಷಿಯನ್ನು ಮೈಗೂಡಿಸಿಕೊಂಡಿರುವ ಕುಡುಬಿ ಸಮುದಾಯವು ತನ್ನ ಅಗತ್ಯತೆಗಳನ್ನು ರೂಪಿಸಿಕೊಂಡು ಮಾನಸಿಕವಾಗಿ ನೆಮ್ಮದಿಯಿಂದ ಬದುಕುತ್ತಿದೆ ಇಂತಹ ಸಮುದಾಯದ ಸರ್ವಾಂಗಿಣ ಅಭಿವೃದ್ಧಿಗೆ ಶಿಕ್ಷಣವೇ ಯಾಕೆ. ಒಂದು ರೀತಿಯಲ್ಲೆ ಶಿಕ್ಷಣ ಇಡೀ ಸಮುದಾಯದ ಅಗತ್ಯತೆಗಳನ್ನು ಪೂರೈಸುತ್ತದೆಂದು ನಂಬುವುದಾದರೆ ಆ ಶಿಕ್ಷಣದ ಸ್ವರೂಪ ಮಹತ್ವವೆಂತಹದು. ಗಾಂದೀಜಿ ಹೇಳುವಂತೆ ಮೂಲ ಶಿಕ್ಷಣವೇ? ಬ್ರೀಟಿಷರು ಹಾಗೂ ಇತ್ತಿಚಿನ

ಭಾರತ ಸರ್ಕಾರದವರು ತಂದ ಶಿಕ್ಷಣವೇ? ಅಥವಾ ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನ ಶಿಕ್ಷಣವೇ? ಈ ರೀತಿಯಾಗಿ ಬುಡಕಟ್ಟುಗಳಿಗೆ ಶಿಕ್ಷಣ ಕೊಡುವುದರಲ್ಲಿ ಅನೇಕ ರೀತಿಯ ತೊಡಕುಗಳಿರುವುದನ್ನು ಆಲೋಚಿಸಿದರೂ ಬುಡಕಟ್ಟುಗಳಿಗೆ ಶಿಕ್ಷಣವನ್ನು ಕೊಡಬೇಕಾದರೆ ಮಾಧ್ಯಮ ಯಾವುದಾಗಿರಬೇಕು? ಎಂದು ಆಲೋಚಿಸುವುದು ಸೂಕ್ತವೆನಿಸುತ್ತದೆ. ಈ ಹಿನ್ನಲೆಯಲ್ಲಿ ಬುಡಕಟ್ಟು ಸಮುದಾಯಗಳಿಗೆ ನಾವು ಕೊಡುತ್ತಿರುವ ಶಿಕ್ಷಣ ಎಷ್ಟರ ಮಟ್ಟಿಗೆ ತಲುಪುತ್ತದೆ ಎಂಬುದು ಗಮನದಲ್ಲಿರಿಸಿಕೊಳ್ಳಬೇಕು. ಕುಡುಬಿಯರು ತನ್ನ ನೆಲಯನ್ನು ಹೆಚ್ಚಾಗಿ ಮಲೆನಾಡಿಲ್ಲಿ ಗುರುತಿಸಕೊಂಡು ಅದರಲ್ಲೂ ಬೆಟ್ಟಗಳ ಇಳಿಜಾರಿನಲ್ಲಿ ವಾಸಸ್ಥಾನವನ್ನು ಮಾಡಿಕೊಂಡು ಅದಕ್ಕೊಂದು ಊರು ಎಂದು ಹೆಸರಿಟ್ಟುಕೊಂಡಿದೆ ಇದರಿಂದಾಗಿ ಯಾವುದೇ ಸೌಲಭ್ಯವಿಲ್ಲದೆ ಜೀವನವನ್ನು ಸಾಗಿಸುವ ಒಂದು ಬುಡಕಟ್ಟು ಸಮುದಾಯವಾಗಿದೆ. ನನ್ನ ವಿಷಯಕ್ಕೆ ಸಂಬಂಧಿಸಿದಂತೆ ಕುಡುಬಿಯರು ಶಿಕ್ಷಣದಿಂದ ವಂಚಿತರಾಗಿದ್ದಾರೆಂದರೆ ಯಾವುದೇ ರೀತಿಯ ತಕರಾರು ಇರಲಾರದು ಏಕೆಂದರೆ ಕುಡುಬಿಯರು ವಾಸಿಸುವ ಮೇಘಾನೆ ಮತ್ತು ಬಚ್ಚೋಡಿಗಳೆರಡು ಹಾಗೂ ದೇವಗಾರ್, ಸೌವುತ್‌ಕೇರಿ ಎನ್ನೆ ಮುಂತಾದ ಸ್ಥಳಗಳನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ಗಮನಿಸಿದಂತೆ ಇತ್ತೀಚಿಗೆ ೭ ವರ್ಷಗಳಿಚಿಗೆ ಮಕ್ಕಳನ್ನು ಶಾಲೆಗೆ ಕಳಿಸಿರುವುದನ್ನು ಕಾಣಬಹುದು ಅಲ್ಲದೆ ಈ ಮಕ್ಕಳಿಗೆ ಕನ್ನಡದಲ್ಲಿ ಪಾಠ ಹೇಳುವುದು ಬಹಳ ಕಷ್ಟವೆಂದು ಶಿಕ್ಷಕರ ಮಾತಿನಿಂದ ತಿಳಿದಿದೆ ಇದರಿಂದಾಗಿ ನಾವು ಮೇಲೆ ಚರ್ಚಿಸಿದಂತೆ ಆದಿವಾಸಿ ಸಮುದಾಯಗಳಿಗೆ ಯಾವ ರೀತಿಯ ಶಿಕ್ಷಣ ಕೊಡಬೇಕು ಎಂಬುದನ್ನು ಆಲೋಚಿಸಬೇಕಾದ ಸಂಗತಿಯಿದೆ.

ನಮ್ಮ ಕುಡುಬಿಯರ ಮಕ್ಕಳಿಗೆ ಕರ್ನಾಟಕ ಸರ್ಕಾರದವರು ಶಿಕ್ಷಣ ಪದ್ಧತಿಗೆ ಹೊಂದಿಕೊಳ್ಳಲು ಆಗುತ್ತಿಲ್ಲ ಎಂಬ ಮಾತು ಮಾತ್ರ ಸತ್ಯ ಇತ್ತೀಚಿನ ಸರ್ಕಾರ ಮೇಘಾನೆಯಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದೆ ಅದು ಒಂದೇ ಕೋಣೆಯನ್ನು ಹೊಂದಿದ್ದು ಇದರಲ್ಲಿ ಒಂದನೇ ತರಗತಿಯಿಂದ ನಾಲ್ಕನೆಯ ತರಗತಿಯವರೆಗೆ ಮಕ್ಕಳು ಒಟ್ಟಿಗೆ ಕುಳಿತುಕೊಳ್ಳುತ್ತಾರೆ. ಈ ಶಾಲೆಯಲ್ಲಿ ೨ ಜನ ಶಿಕ್ಷಕರನ್ನು ಸರ್ಕಾರ ನೇಮಿಸಿದೆ ಇಲ್ಲಿ ಮಕ್ಕಳು ಹೆಚ್ಚು ಸೌಮ್ಯವಾದಿಗಳಾಗಿದ್ದಾರೆ. ಯಾರಾದರು ಬಂದರೆ ಈಗಲೂ ಈ ಜನಾಂಗದಲ್ಲಿ ಹೆದರಿಕೆ ಇರುವುದನ್ನು ನೋಡಬಹುದು.

ಮೇಘಾನೆಯಲ್ಲಿ ಅಂಗನವಾಡಿಯು ಇದೆ ಇದರಲ್ಲಿ ೧೨ ಮಕ್ಕಳು ಮಾತ್ರ ಇದ್ದಾರೆ ಇಲ್ಲಿ ಒಬ್ಬ ಅಂಗನವಾಡಿ ಶಿಕ್ಷಕಿ ಹಾಗೂ ಒಬ್ಬರು ಸಹಾಯಕಿಯಿದ್ದಾಳೆ. ಅಂಗನವಾಡಿ ಶಿಕ್ಷಕಿ ಶೆಟ್ಟರು ಜನಾಂಗಕ್ಕೆ ಸೇರಿದವರಾಗಿದ್ದು ಮಕ್ಕಳ ಬಗ್ಗೆ ಜವಾಬ್ದಾರಿಯನ್ನು ವಹಿಸಿ ಕುಡುಬಿಯರ ಮಕ್ಕಳಲ್ಲಿ ಸ್ವಚ್ಛತೆಯನ್ನು ಕಪಾಡಿಕೊಂಡಿದ್ದಾರೆ. ಇಲ್ಲಿ ಸಹಾಯಕಿಯಾಗಿ ನಮ್ಮ ಕುಡುಬಿಯ ಮಹಿಳೆಯಿದ್ದಾಳೆ.

ಕುಡುಬಿಯರಲ್ಲಿ ೫ ಹುಡುಗಿಯರು ೬ನೇ ತರಗತಿಯಲ್ಲೂ. ಒಂದು ಹುಡುಗಿ ೭ನೇ ತರಗತಿಯಲ್ಲೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮೇಘಾನೆ ಮತ್ತು ಬಚ್ಚೋಡಿಯಲ್ಲಿ ೭ನೇ ತರಗತಿ ಓದುತ್ತಿರುವ ಹುಡುಗಿನೇ ಹೆಚ್ಚಿನ ವಿದ್ಯಾಭ್ಯಾಸ ಪಡೆದ ಹುಡುಗಿ, ಹುಡುಗರಲ್ಲಿ ಯಾರು ಹೆಚ್ಚಿಗೆ ಓದದೆ ಇರುವುದನ್ನು ಕಾಣಬಹುದು.

ಮೇಘಾನೆ ಶಾಲೆಯಲ್ಲಿ ೧ನೇ ತರಗತಿಯಲ್ಲಿ ೧೦ ವಿದ್ಯಾರ್ಥಿಗಳು, ೨ನೇ ತರಗತಿಯಲ್ಲಿ ೯ ವಿದ್ಯಾರ್ಥಿಗಳು, ೩ನೇ ತರಗತಿಯಲ್ಲಿ ೮ ವಿದ್ಯಾರ್ಥಿಗಳು, ೪ನೇ ತರಗತಿಯಲ್ಲಿ ೭ ವಿದ್ಯಾರ್ಥಿಗಳಿರುವುದನ್ನು ಕಾಣಬಹುದಾಗಿದೆ. ಮೇಘಾನೆಯಲ್ಲಿ ಒಟ್ಟು ೩೪ ವಿದ್ಯಾರ್ಥಿಗಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದನ್ನು ನೋಡಬಹುದು. ಉಳಿದ ೫ ಹುಡುಗಿಯರು ಸಾಗರ ವಸತಿಶಾಲೆಯಲ್ಲಿದ್ದಾರೆ. ಒಂದು ಹುಡುಗಿ ೭ನೇ ತರಗತಿಯನ್ನು ಬಚ್ಚೋಡಿ ವಸತಿಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದೆ. ಆದರೆ ಕ್ಷೇತ್ರಕಾರ್ಯದಿಂದ ತಿಳಿದ್ದು ಬಂದದ್ದು ಶಿಕ್ಷಣಕೊಡಿಸಬೇಕು ಎಂಬುದರ ಬಗ್ಗೆ ಪ್ರಸ್ತುತ ಸಮಾಜದಲ್ಲಿ ಯಾರು ಬಯಸುವುದಿಲ್ಲ. ಆದ್ದರಿಂದಲೇ ಬಚ್ಚೋಡಿಯಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಬಹಳ ಕಡಿಮೆಯಿದೆ. ಇಲ್ಲಿ ಒಬ್ಬ ಹುಡುಗ ಮಾತ್ರ ೨ನೇ ತರಗತಿಯಲ್ಲಿ ಓದುತ್ತಿರುವುದನ್ನು ನೋಡಬಹುದು. ನಾನು ನೀವು ಏಕೆ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ ಎಂದು ಕೇಳಿದಕ್ಕೆ ನಾವು ಬಡವರು ನಮ್ಮ ಮಕ್ಕಳು ಓದಿಯಾದರು ಮುಂದೆ ಏನು ಮಾಡುತ್ತಾರೆ ನೀವೇ ಹೇಳಿ ಎಂದು ಮರು ಪ್ರಶ್ನೆಯಾಕಿ ನನ್ನನು ಕೇಳಿದರು. ಅಲ್ಲದೆ ಅವರಿಗೆ ಮೊದಲು ಊಟ ಬಟ್ಟೆಯ ಅವಶ್ಯಕತೆಯಿರಿವುದರಿಂದ ಮಕ್ಕಳನ್ನು ಮನೆಯ ಕೆಲಸಕ್ಕೆ ಅಥವಾ ಗದ್ದೆಯ ಕೆಲಸಕ್ಕೆ ಕರೆದುಕೊಂಡು ಹೋಗುವುದನ್ನು ನೋಡಬಹುದಾಗಿದೆ.

ಒಟ್ಟಾರೆಯಾಗಿ ಕುಡುಬಿಯರ ಶಿಕ್ಷಣ ಬಹಳ ಕೆಳಮಟ್ಟಕ್ಕಿದೆ. ಅಲ್ಲಿ ಸರಕಾರ ಪ್ರಾಥಮಿಕ ಶಾಲೆಗಳನ್ನು ತೆರೆದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ. ಏಕೆಂದರೆ ಇದಕ್ಕೆ ಅನಕ್ಷರತೆಯೆ ಕಾರಣ ಮತ್ತು ತಮ್ಮ ಬದುಕಿನ ನೆಲೆಯತ್ತ ಊಟ ನಿದ್ದೆ ಮನೆಯಾದರೆ ಸಾಕು ಎಂಬ ಪ್ರವೃತ್ತಿಯನ್ನು ಕುಡುಬಿಯರು ಹೊಂದಿದ್ದಾರೆ. ಅದಕ್ಕಾಗಿ ಇವರಲ್ಲಿ ಅಭಿವೃದ್ಧಿಯ ಸ್ಫೂರ್ತಿ ಮೂಡಿಸುವ ಮುಂದಾಳು ಬೇಕು. ಆಗ ಮಾತ್ರ ಈ ಸಮುದಾಯ ಮುಂದು ಬರಲು ಸಾಧ್ಯ ಇಲ್ಲದಿದ್ದರೆ ಇಲ್ಲ ಎಂದು ಹೇಳಬಹುದು.

ಟಿಪ್ಪಣಿ

೧. ದಲಿತರು ಮತ್ತು ಜಾಗತೀಕರಣ ಡಾ. ಮೊಗಳ್ಳಿ ಗಣೇಶ್ ಪು. ೧೦೮ ೧೦೯

೨. ಕಲೆ ಮತ್ತು ಬದುಕು ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಡಾ. ಕು.ಶಿ.ಹರಿದಾಸಭಟ್ಟ ಪು. ೩೧ ೩೨

೩. ಗೊಸಂಗಿ ಸಮುದಾಯ ಒಂದು ಅಧ್ಯಯನ ಮಹಾಪ್ರಬಂಧ ಡಾ. ಮಾರುತಿ.ವಿ.ಸಿ. ಪು. ೧೯೬

[illegible]

[illegible]

[illegible]

[illegible]

[illegible]

ಅಧ್ಯಾಯ ೫

ಸಮಾರೋಪ

ಭಾರತ ಬಹುಸಂಸ್ಕೃತಿಯ ನೆಲೆಗಳ ಬೀಡು ಆದ್ದುದರಿಂದ ವೈವಿಧ್ಯತೆಯನ್ನು ರೂಢಿಸಿಕೊಂಡು ಏಣಿಶ್ರೇಣಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಹಿನ್ನಲೆಯಲ್ಲಿ ಅನೇಕ ಜಾತಿಗಳು, ಸಮುದಾಯಗಳು ಅದರಲ್ಲೂ ಆದಿವಾಸಿಗಳು ತಮ್ಮದೇ ಆದ ಸಾಂಸ್ಕೃತಿಕ ಹಿನ್ನಲೆಯಲ್ಲಿ ಬದುಕನ್ನು ಸಾಗಿಸುತ್ತ ಬಂದಿವೆ. ಆದರೆ ಆಧುನಿಕ ಪ್ರಪಂಚದ ಲೌಕಿಕ ಸವಲತ್ತುಗಳಿಂದ ವಂಚಿಸಲ್ಪಟ್ಟಿದ್ದರೂ ಸಹ ನಮ್ಮ ಬುಡಕಟ್ಟುಗಳು ತಮ್ಮ ಜಾಣತನದಿಂದ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವಲ್ಲಿ ಪ್ರಯತ್ನಿಸುತ್ತಿದೆ. ಇತಿಹಾಸವನ್ನು ತೆರೆದು ನೋಡಿದಾಗ ಬುಡಕಟ್ಟುಗಳು ಹಾಗೂ ಶ್ರಮಿಕ ವರ್ಗಗಳು ತಮ್ಮ ಹುಟ್ಟುವಿಕೆಯಿಂದ ಹಿಡಿದು ಪ್ರಸ್ತುತ ಕಂಪ್ಯೂಟರ್ ಕಾಲದವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಹೀನವಾದ ಸ್ಥಿತಿಯಲ್ಲಿವೆ. ಈ ಹಿನ್ನಲೆಯನ್ನು ನಾವು ನೋಡಿದಾಗ ಪುರಾತನ ಕಾಲದಿಂದ ಅನೇಕ ಕಾನೂನುಗಳು ರೂಪಿತವಾಗಿರುವುದು ಧರ್ಮಶಾಸ್ತ್ರಗಳ ಮುಖಾಂತರವೇ ಎಂಬುದನ್ನು ನೋಡಬಹುದು. ಈ ರೀತಿಯಾಗಿ ರೂಪಿತವಾದ ಕಾನೂನುಗಳು ನಮ್ಮ ಬುಡಕಟ್ಟುಗಳನ್ನು ತಮ್ಮ ದಬ್ಬಾಳಿಕೆಯ ಪ್ರಭಾವದಲಿಟ್ಟುಕೊಂಡು ತಮ್ಮ ಜಮಿನ್ದಾರಿಕೆಯಲ್ಲಿ ದುಡಿಸಿಕೊಂಡು ಬಂದಿರುವುದನ್ನು ನೋಡಬಹುದು. ಅಂದರೆ ಯಾರು ಓದಬೇಕು? ಯಾರು ಹೋರಾಡಬೇಕು? ಯಾರು ವ್ಯಾಪಾರವನ್ನು ಮಾಡಬೇಕು ಇಂದು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾದ ಅನೇಕ ರೂಪಾಂತರಗಳು ದೇಶದ ಬುಡಕಟ್ಟುಗಳಿಗೆ ಯಾವತ್ತು ಪೂರಕವಾಗಿರದೆ ವಿರೋದಾತ್ಮಾಕವಾಗಿರುವುದನ್ನು ನೋಡಬಹುದು. ಶಿವಮೊಗ್ಗ ಜಿಲ್ಲೆಯ ಇಕ್ಕೇರಿ ಕೆಳದಿ ಸಾಮ್ರಾಜ್ಯದಲ್ಲಿ ಇದ್ದ ಎಡಮೂರಿ ಹಾಗೂ ಬಲಮೂರಿಗಳ ಚರಿತ್ರೆಯನ್ನು ತಿರಿವಿಹಾಕಿದಾಗ ತಿಳಿಯುತ್ತದೆ. ಕರ್ನಾಟಕದ ಸಾಮ್ರಾಜ್ಯಶಾಹಿಗಳು ಬುಡಕಟ್ಟುಗಳನ್ನು ನೋಡಕೊಂಡು ಬಂದ ರೀತಿ. ಭಾರತದ ಭೂಮಿಯ ಒಡೆತನ ಬಂಡವಾಳಶಾಹಿಗಳ ಆಳ್ವಿಕೆಗೆ ಒಳಪಟ್ಟ ಮೇಲೆ ಶ್ರಮಿಕರಾಗಿದ್ದ ಬುಡಕಟ್ಟುಗಳ ಬದುಕು ಎರಡು ಕಣ್ಣುಗಳನ್ನು ಕಳೆದುಕೊಂಡ ಕುರುಡನಂತೆ ಯಾಗಿದೆ. ಭಾರತದ ವಸಹಾತುಶಾಹಿ ವ್ಯವಸ್ಥೆ ಹಾಗೂ ಪಾಶ್ಚಿಮಾತ್ಯ ಪ್ರಭಾದಿಂದ ಇಲ್ಲಿದ್ದ ಗುಡಿಕೈಗಾರಿಕೆಗಳು ನಾಶವನ್ನು ಹೊಂದಿದ್ದರ ಫಲವಾಗಿ ಅನೇಕ ಬುಡಕಟ್ಟು ಸಮುದಾಯಗಳು ದಿಕ್ಕು ತಪ್ಪ ಕಂಗಲಾದರು ಆದ್ದರಿಂದ ಬುಡಕಟ್ಟುಗಳು ಪ್ರಸ್ತುತ ಸಮಾಜದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ವಲಸೆ ಹೋಗುತ್ತಿರುವುದನ್ನು ಕಾಣುತ್ತೇವೆ.

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಭಾರತ ಬ್ರಿಟಿಷರಿಗೆ ಹಾಲು ಕೊಡುವ ಹಸುವಿನಂತಾಯಿತು ಎಂದು ಇತಿಹಾಸಕಾರರು ಹೇಳಿದ ಮಾತುಗಳನ್ನು ಮರೆಯುವಂತಿಲ್ಲ. ಏಕೆಂದರೆ ಇಲ್ಲಿಯ ನೈಸರ್ಗಿಕ ಸಂಪತ್ತನ್ನು

ದೋಚಿದಿದು ಒಂದು ಕಡೆಯಾದರೆ ಇನ್ನೊಂದು ಕಡೆ ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ವಾಸವಾಗಿದ್ದ ಬುಡಕಟ್ಟುಗಳನ್ನು ಒಕ್ಕಲೆಬಿಸಿದರು ಇದರ ಪರಿಣಾಮವಾಗಿ ಬುಡಕಟ್ಟುಗಳು ಬದುಕಿನ ದಾರಿಯನ್ನು ಹುಡುಕುತ್ತಾ ಪರ್ಯಯ್ಯ ವ್ಯವಸ್ಥೆಯನ್ನು ಮಾಡಿಕೊಂಡು ಬದುಕುತ್ತಿರುವುದನ್ನು ನೋಡಬಹುದು. ಈ ಹಿನ್ನಲೆಯಲ್ಲಿ ಬುಡಕಟ್ಟುಗಳ ಸಾಂಸ್ಕೃತಿಕ ಬದುಕು ಸಹ ಬದಲಾಗುತ್ತಲಿದೆ.

ಭಾರತದ ಸಾಮ್ರಾಜ್ಯಶಾಹಿ ಮತ್ತು ಬ್ರಿಟಿಷರ ಆಧುನಿಕ ಅಸ್ತ್ರಗಳು ಶ್ರಮಿಕ ವರ್ಗಗಳ ಪ್ರತಿಭಟನೆಗಳನ್ನು ಹೀನಾಯವಾಗಿ ಹತ್ತಿಕ್ಕಿರುವುದನ್ನು ಕಾಣಬಹುದು. ಇದಕ್ಕೆ ಉದಾ. ಇರಾಕ್‌ನಲ್ಲಿ ೧೫ ವರ್ಷಗಳ ಹಿಂದೆ ಈ ದೇಶದ ಅಧ್ಯಕ್ಷರಾದ ಸದ್ದಾಂ ಹುಸೇನ್‌ರು ಕರ್ದ್ ಬುಡಕಟ್ಟಿನ ಸಮುದಾಯದವರ ಮೇಲೆ ಮಾಡಿದ ರಾಸಯನಿಕ ದಾಳಿಯ ವಾರ್ಷಾಚರಣೆಯನ್ನು ಈ ಸಮುದಾಯದವರು ಆಚರಿಸಿದ್ದರಿಂದ ಸದ್ದಾಂ ಹುಸೇನ್‌ರು ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಈ ಹಿನ್ನಲೆಯಲ್ಲಿ ಬುಡಕಟ್ಟುಗಳು ತಮ್ಮ ನೆಲೆಯನ್ನು ಬಿಟ್ಟು ಸುರಕ್ಷಿತವಾದ ತಾಣಗಳಿಗೆ ವಲಸೆ ಹೋಗುತ್ತಿದ್ದಾರೆ ಇದರಿಂದ ತಿಳಿಯುತ್ತದೆ ಭಾರತದ ಬುಡಕಟ್ಟುಗಳಷ್ಟೇ ಅಲ್ಲ ಪ್ರಪಂಚದ ಯಾವುದೇ ಬುಡಕಟ್ಟುಗಳು ಬಂಡವಾಳಶಾಹಿಯ ವ್ಯವಸ್ಥೆಗೆ ತತ್ತರಿಸುವಂತೆಯಾಗಿದೆ.

ಇಂದು ಭಾರತದ ರಾಜಕರಣವು ಬುಡಕಟ್ಟುಗಳ ಅಭಿವೃದ್ಧಿಯ ಬಗ್ಗೆ ಕೈಕಟ್ಟಿ ಕುಳಿತುಕೊಂಡಿದೆಯೆಂದರೆ ತಪ್ಪಗಲಾರದು ಏಕೆಂದರೆ ಅನೇಕ ಬುಡಕಟ್ಟುಗಳು ಸಾಮಾಜಿಕ ಸ್ತರವಿನ್ಯಾಸದ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಗೋವಾದಿಂದ ಕರ್ನಾಟಕಕ್ಕೆ ವಲಸೆ ಬಂದಿರುವ ಕುಡುಬಿಯರ ಬದುಕು ಒಂದು ರೀತಿಯಲ್ಲಿ ಶೋಚನಿಯವಾಗಿದೆ. ಒಂದು ಕಡೆ ನಿಲ್ಲಲಿಕ್ಕೆ ಸರಿಯಾದ ನೆಲೆಯಿಲ್ಲದೆ ಹಾಗೂ ನೆಲೆಯಿದ್ದರು ನೆಲೆಯ ಹಕ್ಕು ಪತ್ರ ದೊರೆಯಾದೆ ಬದುಕುವ ಬದುಕು ಬದುಕೇಯಲ್ಲ ಎನ್ನುವ ಅವರ ಬಾಯಿಯಿಂದ ಹೊರ ಬರುವ ಮಾತು ಕುಡುಬಿಯರ ಮನಸ್ಸಿನ ಅಂತರಾಳದಲ್ಲಿರುವ ದುಃಖವನ್ನು ತೋರಿಸುವಂತಹದಾಗಿದೆ.

ಸರ್ಕಾರಗಳು ಜಾರಿಗೆ ತರುವ ಕಾನೂನುಗಳು ಹಾಗೂ ಯೋಜನೆಗಳು ಈ ಸಮುದಾಯವನ್ನು ತಲುಪದೇ ಇರುವುದನ್ನು ಕಾಣಬಹುದು. ಕುಡುಬಿಯರು ಈ ಪರಿಣಾಮವಾಗಿ ಇವರು ವಾಸಿಸುವ ತಾಣಗಳು ಬದುಕುವ ನೆಲೆಯಾಗಿರದೇ ಕಾಡಿನಿಂದ ಕೂಡಿದ ಇಳಿಜಾರಿನ ಪ್ರದೇಶಗಳಾಗಿವೆ. ನನ್ನ ಕ್ಷೇತ್ರಕಾರ್ಯದ ಮೇಘಾನೆ ಮತ್ತು ಬಚ್ಚೋಡಿ ಕುಡುಬಿಯರು ವಿವಿಧ ರೀತಿಯ ಸಮಸ್ಯೆಗಳಲ್ಲಿ ಬದುಕುವವರಾಗಿದ್ದಾರೆ. ಏಕೆಂದರೆ ಮೊದಲು ಇದ್ದ ಸ್ಥಳಗಳಿಂದ ಸರ್ಕಾರ ಅಣೆಕಟ್ಟನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ ವಲಸೆ ಕಳಿಸಿದಾಗ ಅಲ್ಲಿಂದ ಮೇಘಾನೆ ಮತ್ತು ಬಚ್ಚೋಡಿಯನ್ನು ಆಶ್ರಯತಾಣವಾಗಿ ಮಾಡಿಕಂಡು ಬದುಕುತ್ತಿದ್ದಾರೆ. ಇದರಿಂದಾಗಿ ಕುಡುಬಿಯರು ಸಹ ವಲಸೆ ದುಃಖವನ್ನು ಅರಿತವರಾಗಿದ್ದಾರೆ. ಕುಡುಬಿಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯೆಡೆಯಲ್ಲಿ ಬರೆಯಲ್ಪಟ್ಟಿರುವ ಸಂಪ್ರಬಂದ ಐದು ಅಧ್ಯಯನಗಳನ್ನು ಒಳಗೊಂಡು ಮೊದಲು ಅಧ್ಯಾಯನದ ಆರಂಭದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯನದಲ್ಲಿ ಕುಡುಬಿಯರ ಸಾಮಾಜಿಕ ಬದುಕನ್ನು ಚರ್ಚಿಸುತ್ತ ಕುಡುಬಿ

ಸಮುದಾಯದ ಮೂಲ ಅಥವಾ ರಚನೆಯನ್ನು ಕುರಿತು ನನಗೆ ದೊರೆತ ಅನೇಕ ಸಾಮಾಗ್ರಿಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ಕುಡುಬಿ ಸಮುದಾಯದ ಕುಟುಂಬ ವ್ಯವಸ್ಥೆಯನ್ನು ವಕ್ತೃಗಳಿಂದ ದೊರೆತ ಮಾಹಿತಿಯಿಂದ ವಿವರಿಸಲಾಗಿದೆ. ಮೂರನೆಯ ಅಧ್ಯಾಯನದಲ್ಲಿ ಕುಡುಬಿಯರ ಸಾಂಸ್ಕೃತಿಕ ಬದುಕನ್ನು ಚರ್ಚಿಸುತ್ತ ಅವರ ಮುಖ್ಯವಾದ ಹಬ್ಬವಾದ ಹೋಳಿಯ ಹಬ್ಬದಲ್ಲಿ ಆಚರಿಸುವ ಸಂಪ್ರದಾಯದ ನೃತ್ಯ ಹಾಗೂ ಕುಡುಬಿಯರು ಸೃಷ್ಟಿ, ಸ್ಥಿತಿ, ಲಯದ ಸಮಯದಲ್ಲಿಯ ವಿಧಿವಿಧಾನಗಳನ್ನು ಚರ್ಚಿಸಲಾಗಿದೆ. ಇಲ್ಲಿ ಈ ಸಮುದಾಯದ ನಂಬಿಕೆಗಳ ಬಗ್ಗೆ ವಿವರವಾಗಿ ಚರ್ಚೆಯಾಗಿದೆ ಹಾಗೂ ಅವರು ಮುಖ್ಯವಾಗಿ ಯಾವ ಯಾವ ಪದ್ಧತಿಗಳಲ್ಲಿ ನಿಷೇಧಗಳನ್ನು ಹಾಕುತ್ತಿದ್ದರು ಎಂಬುದನ್ನು ಸಹ ತಿಳಿಯಲಾಗಿದೆ.

ಕುಡುಬಿಯರ ಕಲೆ ಯಾವುದು ಮತ್ತು ಈ ರೀತಿಯ ಕಲೆಯನ್ನು ಯಾವ ಧಾರ್ಮಿಕ ಹಿನ್ನಲೆಯಲ್ಲಿ ಇಟ್ಟುಕೊಂಡಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ. ಮುಂದುವರೆದ ಭಾಗದಲ್ಲಿ ಸಾಹಿತ್ಯದ ಬಗ್ಗೆ ಕ್ಷೇತ್ರಕಾರ್ಯದ ಸಮಯದಲ್ಲಿ ಸಂಗ್ರಹಿಸಿದ ಹಾಡುಗಳನ್ನು ಧ್ವನಿಮುದ್ರಿಸಿಕೊಂಡು ಯಥವತ್‌ಗಿ ಇಡಲಾಗಿದೆ. ಇದರಿಂದಾಗಿ ಕುಡುಬಿಯರ ಮದುವೆ, ಋತುಮತಿ, ಬಳಿಗಳ ಮಹತ್ವದ ಬಗ್ಗೆಯಾಗಲಿ ಹಾಗೂ ನಂಬಿಕೆ, ನಿಷೇಧಗಳನ್ನು ಕುರಿತಾಗಲಿ ಕ್ಷೇತ್ರಕಾರ್ಯದಲ್ಲಿ ಪಡೆದ ಮಾಹಿತಿಯ ಹಿನ್ನಲೆಯಲ್ಲಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕುಡುಬಿಯರ ಆರ್ಥಿಕ ಬದುಕನ್ನು ಚಿತ್ರಿಸಲಾಗಿದೆ ಹಾಗೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇವರ ಸ್ಥಿತಿಗತಿಯೇನು ಎಂಬುದನ್ನು ಕುರಿತು ವಿವರವಾಗಿ ಇಡುವುದಲ್ಲದೆ ಶಿಕ್ಷಣದ ಬಗ್ಗೆ ಅನೇಕ ವಿದ್ವಾಂಸರು ಹೇಳಿದ ಮಾಹಿತಿಯನ್ನು ಇಲ್ಲಿ ಚರ್ಚಿಸಲಾಗಿದೆ. ಮುಂದುವರಿದು ಕುಡುಬಿಯರ ಆರ್ಥಿಕತೆಯ ಮೂಲ ಮತ್ತು ಇತರೆ ಕಸುಬು ಯಾವ ದಿಕ್ಕಿನಲ್ಲಿ ಜರುಗುತ್ತಿದೆ ಎಂಬುದನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ವೀಕ್ಷಿಸಿ ಅವರಿಂದ ಪಡೆದ ಮಾಹಿತಿಯನ್ನು ವಸ್ತುನಿಷ್ಠವಾಗಿಯೇ ಇಲ್ಲಿ ಇಡಲಾಗಿದೆ.

ಕುಡುಬಿಯರು ಯಾವ ರೀತಿಯಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ ಹಾಗೂ ಅವರ ಬದಲಾವಣೇ ಮತ್ತು ಒಕ್ಕಲುತನಕ್ಕೆ ಯಾವ ರೀತಿಯ ಸಂಬಂಧವಿದೆ ಎಂಬುದನ್ನು ತಿಳಿಯಲಾಗಿದೆ. ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ಗಮನಕ್ಕೆ ಬಂದಂತೆ ಇವರು ಶಿಕ್ಷಣದಲ್ಲಿ ಮಂದಗತಿಯಲ್ಲಿ ಬೆಳವಣಿಗೆಯನ್ನು ಹೊಂದಿದ್ದಾರೆ.

ಅನುಬಂಧದಲ್ಲಿ ಗ್ರಂಥಋಣ, ವಕ್ತೃಗಳವಿವರ ಕೋಷ್ಟಕ ಹಾಗೂ ಕುಡುಬಿಯರ ವಿಶಿಷ್ಟ ಸಂಸ್ಕೃತಿಯಲ್ಲಿರು ಅವರನ್ನು ಕುರಿತು ತೆಗೆದ ಛಾಯಚಿತ್ರಗಳನ್ನು ಅಧ್ಯಯನದಲ್ಲಿ ಇಡಲಾಗಿದೆ.

ಕುಡುಬಿಯ ಸಮುದಾಯದ ನೆಲೆ ಶಿವಮೊಗ್ಗ ಜಿಲ್ಲೆಯ ಸಾಗರದ ಕುಡುಬಿಯರನ್ನು ಕುರಿತು ಎಂ.ಫಿಲ್., ಪಿಹೆಚ್.ಡಿ.ಯ ರೀತಿಯಲ್ಲಿ ಯಾವುದೇ ಅಧ್ಯಾಯನಗಳು ನಡೆಯದೆ ಇರುವುದನ್ನು ಗಮನಿಸಬಹುದು ಆದ್ದರಿಂದ ಈ ಹಿನ್ನಲೆಯಲ್ಲಿ ಸಾಗರ ತಾಲೂಕಿನ ಮೇಘಾನೆ ಮತ್ತು ಬಚ್ಚೋಡಿಯನ್ನು ಕುರಿತು ಎಂ.ಫಿಲ್ ಸಂಪ್ರಬಂದದ ಅಧ್ಯಯನವೇ ಮೊದಲನೆಯ ಅಧ್ಯಾಯನವಾಗಿದೆ. ಮುಂದಿನ ಸಂಶೋಧನೆಗಳಿಗೆ ಹಾಗೂ ಅಧ್ಯಾಯನಗಳಿಗೆ ಸಹಕಾರಿಯಾಗಬಲ್ಲದೆಂಬ ಅಪೇಕ್ಷೆ ಈ ಅಧ್ಯಯನಕ್ಕಿದೆ.

ಒಟ್ಟಿನಲ್ಲಿ ಒಂದು ಆದಿವಾಸಿ ಬುಡಕಟ್ಟಿನ ವಾಸ್ತವ ಬದುಕನ್ನು ಕಟ್ಟಿಕೊಡಲು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆದರೆ ಇದೆ ಅಂತಿಮವಲ್ಲ ನಾನು ಕೊಡುವ ಹಲವು ಅನುಭವಗಳು ಮತ್ತು ಮಾಹಿತಿಗಲು ಮುಂದೆ ಬೇರೆ ಬಗೆಯ ಅಧ್ಯಯನಗಳಿಗೆ ಹೆಚ್ಚು ಪೂರಕವಾಗಬಲ್ಲವು ಪಶ್ಚಿಮ ಘಟ್ಟಗಳಲ್ಲಿ ಅದರಲ್ಲು ಬೆಟ್ಟದ ತುತ್ತತುದಿಯಲ್ಲಿರುವವರನ್ನು ಬೆನ್ನಟ್ಟಿ ಹೋಗುವುದು. ಒಂದು ಸಾಹಸವೇ ಸರಿ. ಈ ಅಧ್ಯಾಯನದಲ್ಲಿ ಕುಡುಬಿಯರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ಮತ್ತು ಶೈಕ್ಷಣಿಕ ಚಟುವಟಿಗಳ ಸರಳ ಮಾಹಿತಿ ಲಭ್ಯವಿದೆ ಈ ಅಧ್ಯಾಯನ ಒಂದು ಶೈಕ್ಷಣಿಕವಾಗಿ ಮಾತ್ರ ರೂಪಿತವಾಗಿ ಹಾಗೂ ಒಂದು ಅಮಾಯಕ ಸಮುದಾಯವೊಂದರ ಅಭಿವೃದ್ಧಿಯ ಕನಸನ್ನು ಸಹ ಈ ಅಧ್ಯಯನ ಹೊಂದಿದೆ.

[illegible]

ಅನುಬಂಧ

೧. ಗ್ರಂಥಋಣ

೨. ಕೋಷ್ಠಕಗಳು

೩. ವಕ್ತೃ ವಿವರ

೪. ಛಾಯಾಚಿತ್ರಗಳು

ಗ್ರಂಥಋಣ

೧. ಟಿ.ಎಸ್.ವೇಣುಗೋಪಾಲ., ಶೈಲಜ ಲೋಕಾಯತ ಭಾರತೀಯ ಪ್ರಕಾಶನ ಸರಸ್ವತಿಪುರಂ ಮೈಸೂರು.

೨. ಭಗವತ್ ಶರಣ ಉಪಧ್ಯಾಯ., ಭಾರತೀಯ ಸಮಾಜದ ಐತಿಹಾಸಿಕ ವಿಶೇಷಣೆ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟ್‌ಡೆ ಹೆಚ್.ಎಂ.ಸಿ. ಸೆಂಟರ್, ಕ್ರಸೆಂಟ್ ರಸ್ತೆ ಬೆಂಗಳೂರು

೩. ಡಾ. ಆರ್.ರಾಮಕೃಷ್ಣ ಪ್ರಕಾಶಕರು ಲಕ್ಷ್ಮೀ ಪ್ರಿಂಟಿಂಗ್ ಅಂಡ ಪಬ್ಲಿಷಿಂಗ್ ಹೌಸ್ ೩೪೧ ಕಾಳಮ್ಮನಗುಡಿ ಬೀದಿ, ಮೈಸೂರು

೪. ಒಂಡೋಬ ಪಿ.ಕೆ.ಸುಡುಗಾಡು., ಸಿದ್ದರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಡೇಮಿ, ಬೆಂಗಳೂರು

೫. ಕಾರ್ಲ್‌ಮಾರ್ಕ್ಸ್ ಬಂಡವಾಳದ ಉದ್ಭವ ಸಂಗತಿ ಪ್ರಕಶನ ಯೂಸ್ಕೊ, ೧೯೮೧

೬. ಕಾಳೇಗೌಡ ನಾಗಾವರ ಎನ್. ಹುಚ್ಚಪ್ಪ ಮಾಸ್ತರ್ ಸಂ. ಗಿರಿಜನ ಸಂಸ್ಕೃತಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ ಬೆಂಗಳೂರು.

೭. ಜೋಗನ ಶಂಕರ್., ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು ೧೯೯೫

೮. ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಂಸ್ಕೃತಿ ಅಧ್ಯಯನ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೯. ನಂಜಮ್ಮಣಿ ಎಂ., ಸಾಮಾಜಿಕ ಮಾನವಶಾಸ್ತ್ರ, ಮೈಸೂರು, ೧೯೬೬

೧೦. ನಾಯಕ್ ಡಿ.ಬಿ., ಲಂಬಾಣಿ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಬೆಂಗಳೂರು ೧೯೯೩

೧೧. ನಾಗೇಗೌಡ ಎಚ್.ಎಲ್., ವೆರಿಯರ್ ಎಲ್ವಿನ್ ಗಿರಿಜನ ಪ್ರಪಂಚ, ಸಾಹಿತ್ಯ ಸಾಧನ ಪ್ರಕಾಶನ ಬೆಂಗಳೂರು, ೧೯೭೯

೧೨. ನಂಜಮ್ಮಣಿ ಎಂ., ಬಾರತೀಯ ಸಾಮಾಜಿಕ ಸಂಸ್ಥೆಗಳು ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೩. ನಾರಾಯಣ ಎಂ., ಗ್ರಾಮಿಣ ಮತ್ತು ನಗರ ಸಮಾಜಶಾಸ್ತ್ರ ಚೇತನ್ ಬುಕ್‌ಹೌಸ್, ಮೈಸೂರು, ೧೯೯೩

೧೪. ನಾಯಕ್ ಎನ್.ಆರ್., ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೧೯೯೩

೧೫. ಪುರುಷೋತ್ತಮ ಬಿಳಿಮಲೆ., ಕೊರಗರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಆಕಾಡೆಮಿ ಬೆಂಗಳೂರು, ೧೯೯೩

೧೬. ಪುರುಷೋತ್ತಮ ಬಿಳಿಮಲೆ., ಕುಡುಕಟ್ಟು, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೧೯೯೭

೧೭. ಪ್ರಭಾಕರ್ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೮. ಪುಟಯ್ಯ ಬಿ.ಎಂ., ಸಾವು ಒಂದು ಚಿಂತನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೯. ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಕನಾಟಕ ಸಾಹಿತ್ಯ ಆಕಾಡೆಮಿ ಬೆಂಗಳೂರು, ೧೯೯೩

೨೦. ಬೋರಲಿಂಗಯ್ಯ ಹಿ.ಚಿ., ಕಾಡು ಕಾಂಕ್ರಿಟ್ ಮತ್ತು ಜಾನಪದ ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೬

೨೧. ಬೋರಲಿಂಗಯ್ಯ ಹಿ.ಚಿ., ಗಿರಿಜನ ನಾಡಿಗೆ ಪಯಾಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧

೨೨. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು, ೨೦೦೧

೨೩. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜಾನಪದ ಕಲೆಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,, ೧೯೯೬

೨೪. ಮೊಗಳ್ಳಿ ಗಣೇಶ್., ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೫. ರಹಮತ್ ತರಿಕೇರಿ., ಕರ್ನಾಟಕ ಸೂಫಿಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೬. ರಹಮತ್ ತರಿಕೇರಿ., ಪ್ರತಿ ಸಂಸ್ಕೃತಿ ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩

೨೭. ಶಂಕರನಾರಾಯಣ ತೀ.ನು., ಕಾಡುಗೊಲ್ಲರ ಸಂಪ್ರದಾಯಗಳ ಮತ್ತು ನಂಬಿಕೆಗಳು ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨

೨೮. ಸಣ್ಣರಾಮ., ಲಂಬಾಣಿ ಸಂಸ್ಕೃತಿ, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ, ೧೯೯೯

೨೯. ಕೆ. ಬೈರಪ್ಪ., ಸಮಾಜಶಾಸ್ತ್ರದ ಮೂಲ ತತ್ವಗಳು, ಸುರೇಶ ಪಬ್ಲಿಕೇಷನ್ಸ್, ಗದಗ, ೧೯೯೫

೩೦. ಕೆ. ಬೈರಪ್ಪ., ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು, ಗುಲ್ಬರ್ಗಾ, ೧೯೯೭

೩೧. ಮಂಜುನಾಥ ಬೇವಿನಕಟ್ಟಿ., ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ ಹ್ಯಾರಡ್, ೧೯೯೪

೩೨. ರವೀಂದ್ರ ಕುಪ್ಪರ., ಭಾರತೀಯ ಸಮಾಜದ ಅಧ್ಯಯನ, ೧೯೯೬

೩೩. ಚ.ನ.ಶಂಕರ್ ರಾವ್., ಭಾರತೀಯ ಸಮಾಜ, ಜೈ ಭಾರತ್ ಪ್ರಕಾಶನ ಮಂಗಳೂರು, ೧೯೯೫

೩೪. ಡಿ.ಆರ್.ನಾಗರಾಜ., ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ ಹೆಗ್ಗೊಡು ಸಾಗರ

೩೫. ಡಿ.ಆರ್.ನಾಗರಾಜ., ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

೩೬. ಚೆಲುವರಾಜು., ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೭. ಚಲುವರಾಜು., ಉ.ಸಂ. ಬುಡಕಟ್ಟು ಮಹಾಕಾವ್ಯ ಮಾಲೆ ಜುಂಜಪ್ಪ, ಪ್ರಕಾಶಕರು ಪ್ರೊ. ಎ.ವಿ.ನಾವಡ, ನಿರ್ದೇಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಡಾ. ಕೆ.ಎಂ.ಮೈತ್ರಿ., ಸಂ ಕೃಷ್ಣಗೊಲ್ಲರ ಕಥನಕಾವ್ಯಗಳು, ಪ್ರಕಾಶನ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೩೯. ಗಂಗಾಧರ ದೈವಜ್ಞ., ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೪೦. ಡಾ. ಕೆ.ಕೇಶವನ್ ಪ್ರಸಾದ್., ಸಂ. ಬುಡಕಟ್ಟು ಮಹಾಕಾವ್ಯ ಮಾಲೆ, ಮಲೆಮಾದೇಶ್ವರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಇಂಗ್ಲೀಷ್ ಗ್ರಂಥಋಣ


1. G.S Ghurge, Karnataka Backward Classess Commission Reprot, Govt. Press, Bangalore, 1976
2. Misra P.K., Malotra K.C.Nomadasin India Anthrapology Svrevy of India Calcutta, 1982
3. Singh K.S., The Scheduled Tribes (People of India Series) Vol.II Oxford University Press Delhi, 1995
4. Singh K.S, Indias Communities, A.G. Vol.IV, Oxford University Press, Delhi, 1998
5. Editor: The Urston and Ranyachar K Caste and Tribes of Southern India, (Seven Volu,e Asian Educational Services, New Delhi, 1909)
6. Editro: Thurston, Dthonyraphic nites in Southern India, Govt. Press Madras, 1906
7. Nirmal Kumar Bose, Tribal Life in India, Nationas Book Trust, New Delhi, 1971

8. Abbe J.A. dubois, Mindug Manners customs and ceremonies Oxford University Press Bombay 1990
9. Arun Kumer Mishra., Trading and Communities in Ancient India Amer,ika Prakashan, Delhi 1992
10. C.R.Kothari Research methodology methads and Techniques welef eastern limited New Delhi.
11. Gideon Siobery and Roger Nett A. Methodology Social Research Rawat Publications Jaipur and New Delhi
12. Dr. Gopal Lat Jerin Research Methodology methods Tools and Techniqes
13. D.A.P. Singh., Methods In Social Research Printevell Publishers Jaipur In (India) 1990
14. Introducation to Social Research Keith F Punch Saye Publication London Thousand oaks New Delhi
15. Rebert Yin case study Research Design and methods Second Edition, International Education and Professional Publisher Thousand oaks London New Delhi.


ಅಂಕಿಅಂಶಗಳು ೧. ಸಾಗರ ತಾಲ್ಲೂಕಿನ ಕುಡುಬಿಯರ ಗ್ರಾಮವಾರು, ಲಿಂಗವಾರು ಜನಸಂಖ್ಯೆ ಮತ್ತು ವಯೋಗುಂಪುಗಳು

				ಜನಸಂಖ್ಯೆ			ವಯೋಗುಂಪು														
							೦ - ೪ ವರ್ಷ			೫ - ೧೭ ವರ್ಷ			೧೮ - ೪೦ ವರ್ಷ			೪೧ - ೬೦ ವರ್ಷ			೬೧ರ ಮೇಲ್ಪಟ್ಟು		
ಜಿಲ್ಲೆಗಳು	ತಾಲ್ಲೂಕು	ಗ್ರಾಮದ ಹೆಸರುಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಶಿವಮೊಗ್ಗ	ಸಾಗರ	ಬಚ್ಚೋಡಿ	೧೮	೫೨	೪೫	೯೭	೮	೩	೧೧	೧೬	೧೨	೨೮	೨೨	೨೧	೪೩	೭	೬	೧೩			
		ಮೇಘಾನೆ	೪೬	೧೨೯	೧೨೩	೨೫೨	೧೧	೧೪	೨೫	೪೦	೩೮	೭೮	೫೯	೫೭	೧೧೬	೧೪	೧೪	೨೮	೩	೨	೫
			೬೪	೧೮೧	೧೬೮	೩೪೯	೧೯	೧೭	೩೬	೫೬	೫೦	೧೦೬	೮೧	೭೮	೧೫೯	೨೧	೨೦	೪೧	೩	೨	೫

ಗಂಡು	೧೮೧
ಹೆಣ್ಣು	೧೬೮



೧	೩೬
೨	೧೦೬
೩	೧೫೯
೪	೪೧
೫	೫









ಅಂಕಿಅಂಶಗಳು ೨. ಸಾಗರ ತಾಲ್ಲೂಕಿನ ಕುಡುಬಿಯರ ಗ್ರಾಮವಾರು, ವೈವಾಹಿಕ ಸ್ಥಾನಮಾನಗಳು , ಕಸಬುಗಳು ಮತ್ತು ಭೂ ಹಿಡುವಳಿ ಶ್ರೇಣಿಗಳಲ್ಲಿ

		ವೈವಾಹಿಕ ಸ್ಥಾನಮಾನಗಳು									ಕಸಬುಗಳು														
		ಅವಿವಾಹಿತ			ವಿವಾಹಿತ			ವಿಧರು, ವಿಧವೆ			ಕೃಷಿಕರು			ಕೃಷಿಕೂಲಿಗಳು			ಸರಕಾರಿ ನೌಕರಸ್ಥರು			ಕುಟುಂಬಯೋಜನೆ		ಭೂಮಿಗಳು			
ಗ್ರಾಮದ ಹೆಸರುಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಹೆಣ್ಣು	ಒಟ್ಟು	ಒಣಭೂಮಿ	ನೀರಾವರಿ	ಒಟ್ಟು	ಭೂ ಶ್ರೇಣಿಗಳು
ಬಚ್ಚೋಡಿ	೧೮	೨೮	೨೦	೪೮	೨೨	೨೨	೪೪	೧	೩	೪	೧೮	೩	೨೧	೧		೧				೫	೫		೨೧.೫	೨೧.೫	D/1,E/16,O/1
ಮೇಘಾನೆ	೪೬	೭೨	೬೧	೧೩೩	೫೬	೫೬	೧೧೨	೧	೭	೮	೫೫	೩೭	೯೨	೮	೮	೧೬	೨	೧	೩	೫	೫		೬೨	೬೨	D/6,E/33,O/7
	೬೪	೧೦೦	೮೧	೧೮೧	೭೮	೭೮	೧೫೬	೨	೧೦	೧೨	೭೩	೪೦	೧೧೩	೯	೮	೧೭	೨	೧	೩	೧೦	೧೦		೮೩.೫	೮೩.೫	D/7,E/49,O/8

ಅವಿವಾಹಿತ	೧೮೧
ವಿವಾಹಿತ	೧೫೬
ವಿಧರು, ವಿಧವೆ	೧೨



ಕೃಷಿಕರು	೧೧೩
ಕೃಷಿಕೂಲಿಗಳು	೧೭
ಸರಕಾರಿ ನೌಕರಸ್ಥರು	೩




ಅಂಕಿಅಂಶಗಳು ೩. ಸಾಗರ ತಾಲ್ಲೂಕಿನ ಕುಡುಬಿಯರ ಗ್ರಾಮವಾರು, ಪಶುಸಂಪತ್ತು ಮತ್ತು ಮನೆಗಳ ಮಾದರಿಗಳು

		ಪಶುಸಂಪತ್ತು					ಮನೆಗಳು				
ಗ್ರಾಮದ ಹೆಸರುಗಳು	ಕುಟುಂಬ	ಎತ್ತು	ಆಕಳು	ಎಮ್ಮೆ	ಕೋಣ	ಕೋಳಿ	ಗುಡಿಸಲು	ಟಿನ್‌ಮನೆ	ಮಾಳಿಗೆ	ಆರ್.ಸಿ.ಸಿ.	ಹೆಂಚಿನ
ಬಚ್ಚೋಡಿ	೧೮	೧೪	೨೩	೫	೩೧	೭೮	೩	೬			೯
ಮೇಘಾನೆ	೪೬	೧೪	೯	೧	೫೩	೧೧೪	೨೩				೨೩
	೬೪	೨೮	೩೨	೬	೮೪	೧೯೨	೨೬	೬			೩೨


ಎತ್ತು	೨೮
ಆಕಳು	೩೨
ಎಮ್ಮೆ	೬
ಕೋಣ	೮೪
ಕೋಳಿ	೧೯೨

ಸಾಗರ ತಾಲ್ಲೂಕಿನ ಕುಡುಬಿಯರ ಪಶುಸಂಪತ್ತು



ಗುಡಿಸಲು	೨೬
ಟಿನ್‌ಮನೆ	೬
ಹೆಂಚಿನ	೩೨

ಸಾಗರ ತಾಲ್ಲೂಕಿನ ಕುಡುಬಿಯರ ಮನೆ ಮಾದರಿಗಗಳು



ವಕ್ತೃ ವಿವರ

ಹೆಸರು	ವಯಸ್ಸು	ವೃತ್ತಿ	ಊರು	ಸಂದರ್ಶನ ದಿನಾಂಕ
೧. ಗಣೇಶ್	೬೫	ಕೃಷಿ	ಮೇಘಾನೆ	೨೮.೧.೨೦೦೩
೨. ಚಂದ್ರು	೪೫	ಕೃಷಿ	ಮೇಘಾನೆ	೨೮.೧.೨೦೦೩
೩. ರಾಮೇಶಿ	೩೦	ಕೃಷಿ	ಮೇಘಾನೆ	೨೮.೧.೨೦೦೩
೪. ರಾಮು	೨೭	ಕೃಷಿ	ಮೇಘಾನೆ	೨೮.೧.೨೦೦೩
೫. ನಾಗು	೪೦	ಕೃಷಿ	ಮೇಘಾನೆ	೨೮.೧.೨೦೦೩
೬. ಗೋಮ	೪೫	ಕೃಷಿ	ಮೇಘಾನೆ	೨೮.೧.೨೦೦೩
೭. ದೇವಮ್ಮ	೪೦	ಕೃಷಿ	ಮೇಘಾನೆ	೨೮.೧.೨೦೦೩
೮. ಹನುಮು	೫೦	ಕೃಷಿ	ಮೇಘಾನೆ	೨೯.೧.೨೦೦೩
೯. ಪಿಲ್ಲು	೪೦	ಕೃಷಿ	ಮೇಘಾನೆ	೨೯.೧.೨೦೦೩
೧೦. ಜೋಗಿ	೬೦	ಕೃಷಿ	ಮೇಘಾನೆ	೨೯.೧.೨೦೦೩
೧೧. ಬಾಲು	೬೦	ಕೃಷಿ	ಮೇಘಾನೆ	೨೯.೧.೨೦೦೩
೧೨. ಗಿಣೇಯ	೬೦	ಕೃಷಿ	ಮೇಘಾನೆ	೨೯.೧.೨೦೦೩
೧೩. ತುಕ್ಯಾ	೬೫	ಕೃಷಿ	ಮೇಘಾನೆ	೩೦.೧.೨೦೦೩
೧೪. ಗಣೇಶ್	೫೪	ಕೃಷಿ	ಮೇಘಾನೆ	೩೦.೧.೨೦೦೩
೧೫. ಕೃಷ್ಣ	೩೮	ಕೃಷಿ	ಮೇಘಾನೆ	೩೦.೧.೨೦೦೩
೧೬. ಜಾನು	೫೦	ಕೃಷಿ	ಬಚ್ಚೋಡಿ	೩೧.೧.೨೦೦೩
೧೭. ಡಾಕು	೫೦	ಕೃಷಿ	ಬಚ್ಚೋಡಿ	೩೧.೧.೨೦೦೩
೧೮. ಪುರುಸು	೪೩	ಕೃಷಿ	ಬಚ್ಚೋಡಿ	೩೧.೧.೨೦೦೩
೧೯. ಮಸಣು	೫೦	ಕೃಷಿ	ಬಚ್ಚೋಡಿ	೩೧.೧.೨೦೦೩
೨೦. ರುಕ್ಮ	೩೩	ಕೃಷಿ	ಬಚ್ಚೋಡಿ	೩೧.೧.೨೦೦೩



ಮೇಘಾನೆ ಬೆಟ್ಟವನ್ನು ಏರಲು ರಸ್ತೆಯಿಂದ ಸಿಗುವ ಮಾರ್ಗ



ಕುಡುಬಿಯರ ಹಾಡಿಯ ಮುಖಂಡ ಗಣೇಶಜ್ಜ







ಕುಡುಬಿಯರು ದೇವರ ಪೂಜೆಗೆ ಬಳಸುವ ನೀರಿನ ಬಾವಿ



ಕುಡುಬಿಯರು ಪೂಜೆಗೆ ಬಳಸುವ ತುಳಸಿಗಿಡ







ಮೇಘಾನಿಯಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆ



ಮೇಘಾನಿಯಲ್ಲಿರುವ ಅಂಗನವಾಡಿ ಶಾಲೆ








ಕುಡುಬಿಯರು ಮಾಡುವ ಬೇಸಾಯ ಪದ್ಧತಿ



ಕುಡುಬಿಯರ ಗದ್ದೆಗಳು



ಕುಡುಬಿಯರು ಒಂದು ಗದ್ದೆಯಿಂದ ಇನ್ನೊಂದು ಗದ್ದೆಗೆ ನೀರು ಬಿಡಲು ಮಾಡಿಕೊಂಡ ವ್ಯವಸ್ಥೆ



ಕುಡುಬಿಯರ ದನದ ಕೋಟಿಗೆ



ಕುಡುಬಿಯರ ಲಾವಂಚಿ ಬೆಳೆ



ಲಾವಂಚಿ ಎಣ್ಣೆಯನ್ನು ತಯಾರಿಸುವ ಬಗೆ







ಕುಡುಬಿಯರು ಕೈ ಕಸುಬಿನಲ್ಲಿ ನಿರತರಾಗಿರುವುದು



ಕುಡುಬಿ ಸಮುದಾಯದವರು







ಬೆಟ್ಟದ ತುದಿಯಿಂದ ಕಾಣುವ ಮೇಘಾನಿ



ಬಚ್ಚೂಡಿಯಲ್ಲಿರುವ ಶ್ರೀ ಸ್ವಾಮಿದಯನಾಂದ ಆಶ್ರಯಧಾಮ, ಗಿರಿಜನ ಶಾಲೆ



ಕುಡುಬಿಯರ ಕಲಾವಿದನಾಗಿ ಗಣೇಶಜ್ಜ



ಕುಡುಬಿಯರ ತರಕಾರಿ ಬೆಳೆಗಳು